# ಪ್ರಸಾದ

**ಸಂಪುಟ 24  ಸಂಚಿಕೆ 3** **ಮೇ-ಜೂನ್  2009**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

'ಶ್ರೀಮನ್ಮಹಾರಾಜ ರಾಜಗುರುತಿಲಕ' ಪರಮಪೂಜ್ಯ ಲಿಂಗೈಕ್ಯ
**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**
**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**
ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು
ಶ್ರೀ ಬಿ.ಎನ್. ಬೆಟ್‌ಕೆರೂರ್
ಶ್ರೀ ಎಸ್.ಪಿ. ಮಂಜುನಾಥ್
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಎಸ್. ನಂಜುಂಡಯ್ಯ
ಶ್ರೀ ಕೆ.ಸಿ. ಶಿವಪ್ಪ
ಡಾ. ಬಿ.ನಂ. ಚಂದ್ರಯ್ಯ
ಡಾ. ಓ.ಎಲ್. ನಾಗಭೂಷಣಸ್ವಾಮಿ
ಡಾ. ಪದ್ಮಾಶೇಖರ್
ಡಾ. ಎನ್. ಎಸ್. ತಾರಾನಾಥ
ಶ್ರೀಮತಿ ಎಚ್.ಟಿ. ಶೈಲಜಾ
ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಲೇಖಕರವು

# ಪರಿವಿಡಿ


ಸಂಪಾದಕೀಯ 5

ಗುರುವಾಣಿ 7

ಕನ್ನಡ ಸಾಹಿತ್ಯದಲ್ಲಿ ಮಹಿಳಾಧ್ವನಿ 9
**ಡಾ. ಜಿ.ಎಸ್. ಶಿವರುದ್ರಪ್ಪ**

ಪ್ರಮುಖ ಭಾರತೀಯ ಧರ್ಮಗಳು: ಭಕ್ತಿಯ ಪರಿಕಲ್ಪನೆ 16
**ಡಾ. ವ್ಹಿ.ಜಿ. ಪೂಜಾರ**

ಶ್ರೀ ಜಚನಿಯವರ ವಚನಗಳಲ್ಲಿ ಸಾರ್ವಕಾಲಿಕ ಪ್ರಜ್ಞೆ 29
**ಡಾ. ರಾಜಶೇಖರ ಜಮದಂಡಿ**

ಬಸವಣ್ಣ ಕಂಡ ಕಲ್ಯಾಣ ರಾಜ್ಯ 36
**ಪ್ರೊ. ಎಸ್.ಎಸ್. ಕಬ್ಬಿನ**

ದರ್ಶನವಿಶಾರದ, ಶಿವಧರ್ಮಭೂಷಣ
ಪಂ. ನಾಗಭೂಷಣ ಶಾಸ್ತ್ರಿಗಳು 47
**ಡಾ. ಪಂಚಾಕ್ಷರಿ ಹಿರೇಮಠ**

ವಾರ್ತಾ ವಿಹಾರ 53


**ಮುಖ ಪುಟ ಚಿತ್ರ**

ಸುತ್ತೂರಿನ ಉಚಿತ ಶಾಲೆಯ ಬಾಲಕಿಯರ ವಿದ್ಯಾರ್ಥಿನಿಲಯದ ಕಟ್ಟಡ ಮತ್ತು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ರಜತಮಹೋತ್ಸವ ವಿಚಾರಸಂಕಿರಣವನ್ನು ರಾಷ್ಟ್ರಪತಿ ಶ್ರೀಮತಿ ಪ್ರತಿಭಾ ದೇವಿಸಿಂಗ್ ಪಾಟೀಲ್ ಉದ್ಘಾಟಿಸುತ್ತಿದ್ದಾರೆ. ಚಿತ್ರದಲ್ಲಿ ಶ್ರೀಮತಿ ಶೋಭಾ ಕರಂದ್ಲಾಜೆ, ಪರಮ ಪೂಜ್ಯ ಜಗದ್ಗುರುಗಳವರು, ಪೂಜ್ಯ ಸಿದ್ಧಗಂಗಾಶ್ರೀಗಳು, ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಸಿದ್ಧರಾಮಯ್ಯ, ಶ್ರೀ ಬಿ.ಎನ್. ಬೆಟ್‌ಕೆರೂರ್ ಮತ್ತು ಡಾ. ಬಿ. ಸುರೇಶ್

## ಲೇಖಕರ ವಿಳಾಸ


**ಡಾ. ಜಿ.ಎಸ್. ಶಿವರುದ್ರಪ್ಪ**
867, ಚೈತ್ರ
2ನೇ ಹಂತ, 18ನೇ ಮುಖ್ಯರಸ್ತೆ
ಬನಶಂಕರಿ, ಬೆಂಗಳೂರು 560 070

**ಡಾ. ವ್ಹಿ.ಜಿ. ಪೂಜಾರ**
'ಚೇತನ', ಸರಸ್ವತಿಪುರ-ಕುಸನೂರ ರಸ್ತೆ
ವಿಶ್ವವಿದ್ಯಾಲಯ ಅಂಚೆ
ಗುಲಬರ್ಗಾ 585 106

**ಡಾ. ರಾಜಶೇಖರ ಜಮದಂಡಿ**
ಕನ್ನಡ ಅಧ್ಯಾಪಕರು
ಸ್ನಾತಕೋತ್ತರ ಕೇಂದ್ರ
ಜೆಎಸ್‌ಎಸ್ ಮಹಿಳಾ ಮಹಾವಿದ್ಯಾಲಯ
ಚಾಮರಾಜನಗರ 571313

**ಪ್ರೊ. ಎಸ್.ಎಸ್. ಕಬ್ಬಿನ**
ನಿವೃತ್ತ ಪ್ರಾಚಾರ್ಯರು
ಚಾಲುಕ್ಯ ನಗರ
ಸೊಲ್ಲಾಪುರ ರಸ್ತೆ
ವಿಜಾಪುರ

**ಡಾ. ಪಂಚಾಕ್ಷರಿ ಹಿರೇಮಠ**
'ಶ್ರೀ ಮೃತ್ಯುಂಜಯ ಕೃಪ'
ಜಯನಗರ
ಧಾರವಾಡ 1


# ಸಂಪಾದಕೀಯ

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಮಠಾಧಿಪತಿಗಳ ಗೋಷ್ಠಿಯ ವತಿಯಿಂದ, ಆಯಾ ಮಠಗಳಲ್ಲಿ ನಡೆಯುವ ಆರಾಧನಾ ಮಹೋತ್ಸವ ಮುಂತಾದ ವಿಶೇಷ ಸಂದರ್ಭಗಳಲ್ಲಿ ಸಾಮೂಹಿಕ ಮದುವೆಗಳನ್ನು ಏರ್ಪಡಿಸುತ್ತಿರುವುದು ಶ್ಲಾಘನೀಯವಾದುದು. ಇತ್ತೀಚೆಗೆ ಮಠವೊಂದರ ಇಂತಹ ಸಮಾರಂಭದಲ್ಲಿ ಭಾಷಣಕಾರನಾಗಿ ನಾನು ಭಾಗವಹಿಸಿದ್ದೆ. ಸಮಾರಂಭದ ನಂತರ ಪರಿಚಿತರೊಬ್ಬರನ್ನು ನಿಮ್ಮ ಮಕ್ಕಳ ಮದುವೆಯನ್ನು ಹೀಗೇ ಯಾಕೆ ಮಾಡಬಾರದು ಎಂದು ಕೇಳಿದೆ. ಅದಕ್ಕವರು ವಿಚಿತ್ರವಾಗಿ ಇದ್ಯಾವ ಮದುವೆ, ಎಲ್ಲಾ ಒಟ್ಟೊಟ್ಟಿಗೆ ಬೇರೆ ನಡೆಯೋ ಶಾಸ್ತ್ರ ಎಂದು ಗೊಣಗಿದರು.

ಮದುವೆಗಳು ಒಂದು ಕಾಲದಲ್ಲಿ ಮೂವತ್ತು ದಿನಗಳು ನಡೆಯುತ್ತಿದ್ದುವು. ಬಂಧು ಬಾಂಧವರು ಎಷ್ಟೋ ದೂರದಲ್ಲಿ ಇರುತ್ತಿದ್ದರು. ಅಲ್ಲಿಂದ ಅವರುಗಳು ಕಾಡು-ಮೇಡುಗಳ ಹಾದಿಯಲ್ಲಿ ಕಾಲ್ನಡಿಗೆಯಲ್ಲೊ, ಗಾಡಿಗಳಲ್ಲೊ ಬರಬೇಕಾಗಿತ್ತು. ಬಂದವರು ಈಗಿನಂತೆ ಉಡುಗೊರೆಯನ್ನು ಕೊಟ್ಟು ಮುಂದಿನ ಬಸ್ಸಿನಲ್ಲಿ ಪ್ರಯಾಣ ಮಾಡುವಂತಿರಲಿಲ್ಲ. ಅವರ ಮಾರ್ಗಾಯಾಸ ಪರಿಹಾರಕ್ಕೆ ಕೆಲವು ದಿನಗಳ ವಿಶ್ರಾಂತಿ ಪಡೆದು, ಶುಭ ಕಾರ್ಯದಲ್ಲಿ ಭಾಗಿಯಾಗಲು ಸಿದ್ಧವಾಗುತ್ತಿದ್ದರು. ಅಂದು ಊರಿನ ಎಲ್ಲ ವರ್ಗದವರೂ ಮದುವೆಯಲ್ಲಿ ಒಂದಲ್ಲ ಒಂದು ತೆರದಲ್ಲಿ ಪಾಲ್ಗೊಳ್ಳುತ್ತಿದ್ದರು. ಯಾವುದೇ ವರ್ಗದವರ ಮದುವೆಯಾದರೂ, ಆ ಊರಿನ ನಾಪಿತರ ಮನೆಯಿಂದ ಬಾಸಿಂಗ, ಮಡಿವಾಳರ ಮಡಿ, ಶಿವಾರ್ಚಕರ ವೀರಭದ್ರನ ಕುಣಿತ, ಗಾಣಿಗರ ಪವಿತ್ರ ಎಣ್ಣೆ, ಕುಂಬಾರರ ಹೊಸ ಅರಿವೆ– ಹೀಗೆ ಅದು ಕೇವಲ ಒಂದು ಮನೆಯ ಸಮಾರಂಭ ಮಾತ್ರ ಆಗಿರದೆ ಇಡೀ ಗ್ರಾಮದ ಸಮಾರಂಭವಾಗಿರುತ್ತಿತ್ತು. ಅಲ್ಲಿ ನಡೆಯುತ್ತಿದ್ದ ಪ್ರತಿಯೊಂದು ಶಾಸ್ತ್ರಕ್ಕೂ ಪ್ರಾದೇಶಿಕ ವೈಶಿಷ್ಟ್ಯಗಳೊಡನೆ ತನ್ನದೇ ಆದ ಒಂದೊಂದು ಅರ್ಥವಿರುತ್ತಿತ್ತು. ಕಂಕಣ ಕಟ್ಟಿದ ಗಂಡು ತನ್ನ ಕೈಯಲ್ಲಿ ಒಂದು ಬಾಕು ಹಿಡಿಯುತ್ತಿದ್ದುದು ಪೌರುಷದ ಸಂಕೇತವಾಗಿದ್ದು ವೀರಯುಗದ ಒಂದು ಮೌಲ್ಯವಾಗಿತ್ತು. ಧಾರೆಯ ನೀರನ್ನು ದೇವಸ್ಥಾನದ ಮೀಸಲುಬಾವಿಯಲ್ಲಿ ತರುತ್ತಿದ್ದರು. ಆ ಪವಿತ್ರ ಜಲಕ್ಕೆ ಯಾವುದಾದರೂ ದುಷ್ಟಶಕ್ತಿ ತೊಂದರೆಯನ್ನು ಉಂಟುಮಾಡಬಾರದು ಎನ್ನುವ ಕಾರಣಕ್ಕೆ ವೀರಭದ್ರ ರಕ್ಷಣೆ ಒದಗಿಸುತ್ತಿದ್ದ. ಮದುವೆ ಮನೆಯ ಮುಂದೆ ಹಸಿರು ಚಪ್ಪರ ನಿರ್ಮಿಸಲು ಗ್ರಾಮದ ಪ್ರತಿಯೊಬ್ಬರೂ ಸೇರುತ್ತಿದ್ದರು. ವಧುವಿನ ತಂದೆತಾಯಿಯರು ಕಾಮಧೇನುವಿನ ಪ್ರತಿರೂಪವಾದ ಹಸುವಿನ ಹಾಲಿನಿಂದ ಧಾರೆಯೆರೆದು ತಮ್ಮ ಕನ್ಯೆಯನ್ನು 'ದಾನ' (ಕನ್ಯಾದಾನ) ಮಾಡುತ್ತಿದ್ದರು. ವರನ ಕಡೆಯವರು ಧಾರೆ ಎರೆಯುವ ಹಾಗಿಲ್ಲ. ಏಕೆಂದರೆ ವರನನ್ನು ದಾನ

ಮಾಡುವ ಪರಿಕಲ್ಪನೆಯಿಲ್ಲ. ತುಂಬಾ ಹಿರಿಯರಾಗಿರುವ ಸುಮಂಗಲಿಯರನ್ನು ಮಾತ್ರ ಮುತ್ತೈದೆ ಎಂದು ಪರಿಗಣಿಸಲಾಗುತ್ತದೆ (ಮುಪ್ಪಿನ ಐದೆ = ಮುತ್ತೈದೆ; 'ಐದೆ' ಎಂಬುದು ಅವಿಧವಾ ಎಂಬ ಪದದಿಂದ ಬಂದಿದೆ). ಇಂತಹವರು ಅಕ್ಷತೆ ಹಾಕಿ ಹರಸಿದರೆ ಮದುಮಗಳಿಗೆ ದೀರ್ಘಕಾಲ ಸೌಮಾಂಗಲ್ಯ ಉಂಟಾಗುತ್ತದೆ ಎನ್ನುವುದು ಇದರ ಆಶಯ. ಆರತ್ಯಕ್ಷತೆ ನಡೆಯುತ್ತಿದ್ದುದು ವರನ ಗೃಹದಲ್ಲಿ. ಇಂಗ್ಲಿಷ್‌ನಲ್ಲಿ ಇದನ್ನು ರಿಸೆಪ್ಶನ್ ಎನ್ನುತ್ತೇವೆ. ಸಾಂಪ್ರದಾಯಿಕವಾಗಿ ವಧುವಿನ ಮನೆಯಲ್ಲಿ ಮದುವೆಯಾಗುತ್ತದೆ. ಹೊಸ ದಂಪತಿಗಳನ್ನು ವರನ ಮನೆಯವರು ಆರತಿ ಎತ್ತಿ ಅಕ್ಷತೆ ಹಾಕಿ ತಮ್ಮ ಮಗ ಮನೆಗೆ ಲಕ್ಷ್ಮಿಯನ್ನು ಕರೆದುಕೊಂಡು ಬಂದನು ಎಂದು ಸಂತೋಷಪಡುತ್ತಿದ್ದರು. — ಇಂತಹ ಹತ್ತು ಹಲವು ಶಾಸ್ತ್ರಗಳಿಗೆ ಅಂದಿನ ಸಾಮಾಜಿಕ ಕಾಲಘಟ್ಟದಲ್ಲಿ ಒಂದೊಂದು ತಾರ್ಕಿಕ ಅರ್ಥವಿರುತ್ತಿತ್ತು.

ಈಗಿನ ಶಾಸ್ತ್ರಗಳನ್ನು ಸ್ವಲ್ಪ ನೋಡಿ! ಮದುವೆ ನಡೆಯುವುದು ವಧು ಅಥವಾ ವರ ಈ ಇಬ್ಬರ ಗೃಹದಲ್ಲಿಯೂ ಅಲ್ಲ, ಆದರೂ ಎರಡೂ ಮನೆಯ ಮುಂದೆ ಚಪ್ಪರ ಇರುತ್ತದೆ. ನಿಜವಾಗಿ ಮದುವೆ ಆಗುವುದು ಯಾವುದೋ ಊರಿನ ಯಾವುದೋ ಛತ್ರದಲ್ಲಿ. ಇನ್ನೂ ವಧೂವರರು ಗಂಡಹೆಂಡತಿಯರೇ ಆಗಿರುವುದಿಲ್ಲ; ಆದರೆ ಇಂದೇ ಆರತ್ಯಕ್ಷತೆ ನಡೆಯುತ್ತದೆ. ಅಲ್ಲಿ ಚಿತ್ರವಿಚಿತ್ರವಾದ ಫೋಟೋ ಸೆಶನ್ ಇರುತ್ತದೆ (ಹೀಗೆ ಆರತ್ಯಕ್ಷತೆ ನಡೆದ ಮರುದಿನ ಮದುವೆ ನಿಂತುಹೋದ ಘಟನೆಯೊಂದು ನನ್ನ ನೆನಪಿನಲ್ಲಿದೆ). ಇದನ್ನು ನೆನೆಸಿಕೊಂಡರೆ ಮುಂದಿನ ಅವರ ಜೀವನದಲ್ಲಿ ಈ ಭಾವಚಿತ್ರಗಳು ಮಾಡುವ ಅವಾಂತರಗಳನ್ನು ಕಲ್ಪಿಸಿಕೊಳ್ಳುವುದು ಕಷ್ಟ. ಮದುವೆಯ ದಿನ ತರುವ ಧಾರೆ ನೀರು ಬರುವುದು ನಲ್ಲಿಯ ಮೂಲಕ ನೀರು ತುಂಬಿದ ಒಂದು ಬಾವಿಯಿಂದ. ಮುತ್ತೈದೆಯರ ಹೆಸರಿನಲ್ಲಿ ಪೂಜೆ ಮಾಡುವವರು ನೆನ್ನೆ ಮೊನ್ನೆ ಮದುವೆಯಾಗಿರುವ ಯುವತಿಯರು. ಧಾರೆ ಎರೆಯುವುದಕ್ಕೆ ಇಲ್ಲಿ ಯಾರ್‍ಯಾರೋ ಇರುತ್ತಾರೆ. ಅತ್ಯಂತ ವಿರೋಧದ ನಡುವೆಯೂ ನಡೆಯುವ ಮದುವೆಯ ಆಮಂತ್ರಣ ಪತ್ರಿಕೆಯಲ್ಲಿ 'ಗುರು-ಹಿರಿಯರು ನಿಶ್ಚಯಿಸಿದಂತೆ' ಎಂದು ಅಚ್ಚು ಹಾಕಿಸಿರುತ್ತಾರೆ. 'ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ' ಎನ್ನುವ ವಚನ ಒಂದು ಪುಟದಲ್ಲಿದ್ದರೆ, ಮತ್ತೊಂದು ಪುಟದಲ್ಲಿ ಸ್ತಂಭಮುಹೂರ್ತ, ಧಾರಾಮುಹೂರ್ತಗಳ ಸಮಯ ಅಚ್ಚಾಗಿರುತ್ತದೆ. ಮಟಮಟ ಮಧ್ಯಾಹ್ನದಲ್ಲಿ ಪುರೋಹಿತರು ವಧೂವರರಿಗೆ ಅರುಂಧತಿ ನಕ್ಷತ್ರವನ್ನು ತೋರಿಸುತ್ತಾರೆ. ಅವರೂ 'ನಾವು ನೋಡಿದೆವು' ಎಂದು ಹೇಳಿಬಿಡುತ್ತಾರೆ! 'ಭಕ್ತರ ಮನೆಯಂಗಳವೇ ವಾರಣಾಸಿ' ಎನ್ನುವಂಥ ಸಮುದಾಯದಲ್ಲಿಯೂ ಮದುವೆಯ ದಿನ ವರ ಕಾಶೀಯಾತ್ರೆಗೆ ಹೊರಟು ನಿಲ್ಲುತ್ತಾನೆ. ಹೀಗೆ ಪಟ್ಟಿ ಮಾಡುತ್ತಾ ಹೋದರೆ ಇವಕ್ಕೆ ಕೊನೆಮೊದಲಿಲ್ಲ. ಯಾಕೆ ನಮ್ಮ ಜನ ಹೀಗೆ ಹಿಮ್ಮುಖವಾಗಿ ಚಲಿಸುತ್ತಿದ್ದಾರೆ? ಶರಣರ ವಿಚಾರಧಾರೆಯನ್ನು ಒಂದಿಷ್ಟು ಮನನ ಮಾಡಿದರೂ ಸಾಕು, ಇವೆಲ್ಲಾ ಅರ್ಥವಾಗುವಂತಹವು. ಇದನ್ನೆಲ್ಲ ಯಾರಿಗೆ ಹೇಳುವುದು?

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

ಮನುಷ್ಯನ ಅಂತರಂಗದಲ್ಲಿ ಮೊಳೆಯುವ ಅಹಂಕಾರಕ್ಕೆ ಹಲವಾರು ಕಾರಣಗಳು. ಇದು ಮನಸ್ಸಿನ ವಿಜೃಂಭಣೆಯ ವಿಕಾರಸ್ಥಿತಿ. ಏನಾದರೂ ಒಳಿತು ಎನ್ನುವುದು ತಮ್ಮ ಮೂಲಕ ನಡೆದಿದ್ದರೆ ಅದಕ್ಕೆ ತಾವೇ ಆದ್ಯಂತ ಕಾರಣ, ತಾವಿಲ್ಲದಿದ್ದರೆ ಅದು ಆಗುತ್ತಿರಲಿಲ್ಲ, ಆದ್ದರಿಂದ ತಮ್ಮಿಂದ ಉಪಕೃತರಾದವರೆಲ್ಲ ತಮಗೆ ಋಣಿಯಾಗಿರಬೇಕು ಎನ್ನುವ ಭಾವ ಬಲಿಯಿತು ಎಂದರೆ ಅಂತಹವರು ಭಗವಂತನಿಂದ ದೂರವಾಗುತ್ತಿದ್ದಾರೆ ಎಂದೇ ಅರ್ಥ. ಯಾರಿಂದ ಎಂತಹುದೇ ಕೆಲಸ ನಡೆದಿರಲಿ ಅದಕ್ಕೆ ವ್ಯಕ್ತಿ ಕೇವಲ ನಿಮಿತ್ತಮಾತ್ರ; ಕೇವಲ ಭಗವಂತನ ಕೈಯ ಒಂದು ಉಪಕರಣ. "ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ ಸುಳಿದು ಸೂಸುವ ಗಾಳಿ ನಿಮ್ಮ ದಾನ" ಎಂದು ದಾಸಿಮಯ್ಯನವರು ಹೇಳಿರುವ ಮಾತಿನ ಅರ್ಥವಾದರೂ ಇದೇ ಆಗಿದೆ. ನಾವು ಅನುಭವಿಸುವ ಎಲ್ಲ ವಸ್ತುಗಳೂ ಪ್ರಕೃತಿದತ್ತವಾದುವೆ ಆಗಿವೆ. ಆದರೆ ಬೇರೆಬೇರೆ ಕಾರಣಗಳಿಗಾಗಿ ಅವು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗುವುದಿಲ್ಲ. ಹಾಗೆಯೇ ಕೆಲವರು ದೈಹಿಕವಾಗಿ, ಬೌದ್ಧಿಕವಾಗಿ ಹೆಚ್ಚಿನ ಪ್ರಕೃತಿದತ್ತ ಸಾಮರ್ಥ್ಯವನ್ನು ಪಡೆದಿರುತ್ತಾರೆ. ಸಾಮಾನ್ಯ ಮನುಷ್ಯನಿಂದ ಆಗದ ಕೆಲವು ಕೆಲಸಗಳು ಅಂತಹವರಿಂದ ಸಾಧಿತವಾಗುತ್ತವೆ. ಇದು **ತನ್ನಿಂದ ಆಯಿತು** ಎಂದು ಅಂತಹವರು ಹೆಮ್ಮೆಪಡಬಹುದೇ ಹೊರತು **ತನ್ನಿಂದಲೇ ಆಯಿತು** ಎಂದು ಬೀಗಬಾರದು. ಅಂಥ ಅಂಧಕಾರವನ್ನು ಮೈಗೂಡಿಸಿಕೊಂಡರೆ ಅದು ಅವರ ಚೈತನ್ಯದ ಅಧಃಪತನಕ್ಕೆ ನಾಂದಿಯಾಗುತ್ತದೆ. "ಮಾಡುವಂತಿರಬೇಕು, ಮಾಡದಂತಿರಬೇಕು, ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು" ಎನ್ನುವ ಮಾತಿನ ಧ್ವನ್ಯರ್ಥವೂ ಇದೇ ಆಗಿದೆ.

ಚಾಮರಸ ಕವಿ ತನ್ನ ಪ್ರಭುಲಿಂಗಲೀಲೆಯಲ್ಲಿ ಒಂದು ಸೊಗಸಾದ ಪ್ರಸಂಗವನ್ನು ತಂದಿದ್ದಾನೆ. ಎಲ್ಲರೂ ತಿಳಿದಿರುವಂತೆ ಬಸವಣ್ಣನವರು 'ಮಹಾದಾಸೋಹಿ' ಎಂದು ಖ್ಯಾತರಾಗಿದ್ದವರು. ಕಲ್ಯಾಣಕ್ಕೆ ಬಂದ ವ್ಯೋಮಮೂರುತಿ ಅಲ್ಲಮಪ್ರಭುವಿಗೆ ಒಮ್ಮೆ ಬಸವಣ್ಣನವರನ್ನು ಪರೀಕ್ಷಿಸಿ ನೋಡಬೇಕೆಂಬ ಮನಸ್ಸಾಯಿತು. ಚಾಮರಸನ ಪ್ರಕಾರ 'ಪ್ರಭು ಕೇವಲ ಒಬ್ಬ ವೈರಾಗ್ಯಮೂರ್ತಿಯಾಗಿರಲಿಲ್ಲ. ಗುಹೇಶ್ವರಲಿಂಗವೇ ಲೀಲಾವಿನೋದಕ್ಕಾಗಿ ರೂಪು ತಳೆದು ಬಂದವನಾಗಿದ್ದ'. ಆದ್ದರಿಂದಲೇ ಪ್ರಭು ಆ ಕಾಲಘಟ್ಟದಲ್ಲಿ ತನ್ನ ಕಕ್ಷೆಗೆ ಬಂದ ಎಲ್ಲ ಶರಣರನ್ನೂ ಪರೀಕ್ಷೆಗೆ ಒಳಪಡಿಸುತ್ತಿದ್ದುದು ಸಹಜವೇ ಆಗಿತ್ತು. ಅಂತೆಯೇ, ಬಸವಣ್ಣನವರ ಅಂತರಂಗದಲ್ಲಿ ತಾನು ಮಹಾದಾಸೋಹಿ ಎನ್ನುವ ಅಹಂಕಾರದ ಬೀಜ ಅಡಗಿರಬಹುದು, ಅದನ್ನು ಒಂದಿಷ್ಟು ಪರೀಕ್ಷೆ ಮಾಡೋಣವೆಂದು ಪ್ರಭುವಿಗೆ ಅನ್ನಿಸಿರಬಹುದು.

ಅಂತೆಯೇ, ಮಹಾಮನೆಗೆ ನಡೆದು ಆರೋಗಣೆಗೆ ಕುಳಿತುಕೊಂಡರು. 'ಅಂಬರವೆ ಬಾಯ್ದೆರೆದು ಜೀರ್ಣಿಸಿಕೊಂಬು'ವಂತೆ ಪ್ರಭು ಊಟ ಮಾಡತೊಡಗಿದರು. ಲಕ್ಷ ಲಕ್ಷ ಜನ ಶರಣರಿಗೆ ಸಿದ್ಧಪಡಿಸಿದ್ದ ಆಹಾರವೆಲ್ಲವೂ ಮುಗಿದುಹೋಯಿತು. ಬಸವಣ್ಣನವರಿಗೆ ಪ್ರಭುವಿನ ಹಸಿವಿನ ತೀವ್ರತೆಯನ್ನು ನೀಗಲು ಸಾಧ್ಯವಾಗಲಿಲ್ಲ. ಬಸವಣ್ಣನವರಿಗೆ ಆಗಲಾದರೂ ಸೂಕ್ಷ್ಮವಾಗಿ ಅರ್ಥವಾಗಬೇಕಾಗಿತ್ತು. ಆದರೆ ಏಕೋ ಏನೋ, ಇವನಿಗೆ "ತಂದೊಟ್ಟಿ ಮುಟ್ಟಿಸಿ ತಣಿಸುವೆನು ನೋಡು" ಎನ್ನುತ್ತಾ ಸಿದ್ಧಪಡಿಸಿದ್ದ ಆಹಾರವನ್ನೂ ತರಿಸಿ ಅರ್ಪಿಸಿದರು. ಭೋಜನಕ್ಕೆ ಬಡಿಸಿದ ವಸ್ತುಗಳೆಲ್ಲವೂ ನಿಮಿಷಮಾತ್ರದಲ್ಲಿ ಮುಗಿದುಹೋದುವು. ಬಡಬಾನಲವನ್ನು ಆಲಿಕಲ್ಲುಗಳು ಆರಿಸಲು ಪ್ರಯತ್ನಿಸಿದಂತಾಯಿತು. ಭಕ್ಷ ಭೋಜ್ಯಗಳೆಲ್ಲ ಮುಗಿದು ಕೀಳು ಧಾನ್ಯಗಳಲ್ಲಿ ಸಿದ್ಧಪಡಿಸಿದ ಆಹಾರಗಳು, ಕೊನೆಗೆ ಗಂಜಿ-ಅಂಬಲಿಗಳನ್ನು ಬಡಿಸುವ ಅನಿವಾರ್ಯತೆಯೂ ಎದುರಾಯಿತು. ಆದರೂ ಪ್ರಭುವಿನ 'ಹಸಿವು' ಮಾತ್ರ ಹಿಂಗಲಿಲ್ಲ. ಬಸವಣ್ಣನವರಿಗೆ ಆಗ ತಮ್ಮ ಅಸಹಾಯಕತೆಯ ಅರಿವಾಯಿತು. ಆದರೆ ಅವರ ಬಳಿಯಿದ್ದ ಮಡಿವಾಳ ಮಾಚಯ್ಯನವರಿಗೆ, ಚೆನ್ನಬಸವಣ್ಣನವರಿಗೆ ಈ ಜ್ಞಾನೋದಯ ಮೊದಲೇ ಉಂಟಾಗಿತ್ತು. ವಸ್ತುಗಳನ್ನು ಕೊಟ್ಟು ತೃಪ್ತಿಪಡಿಸುವ ಪರಿಯೇ ಬೇರೆ, ಅದು ವ್ಯಕ್ತಿಯ ಬಾಹ್ಯಶಕ್ತಿಗೆ ಸಂಬಂಧಿಸಿದುದು. ಆದರೆ ಬಯಲದೇಹಿಯಾದ ಪ್ರಭುವಿನ ಹಸಿವಿನ ಪರಿ ಬೇರೆ ಎಂದುಕೊಂಡ ಬಸವಣ್ಣನವರು "ಒಡಲು ಮನಗಳನೊಡನೆಯರ್ಪಿಸಿ ಕಡೆಯ ಕಾಣಿಪುದೆಂದು" ಬೇಡಿದರು. ಬಸವಣ್ಣನವರಿಗೆ ಆಗ ತಟಕ್ಕನೆ ಹೊಸ ಬೆಳಕೊಂದು ಗೋಚರಿಸಿತು. 'ಹೊತ್ತು ಹೋಗದ ಮುನ್ನ ತನುವಿನ ತುತ್ತ ನೀಡುವೆ ಗುರುವಿಗೆನುತಲಿ ಚಿತ್ತದಲ್ಲಿ ಹಾರೈಸುತ' 'ಭರಿತದಂಗದ ಭಾವಶುದ್ಧದ ಮಿಸುಗುವಂತರ್ಮುಖದ ಬುದ್ಧಿಯ ದಶವಿಧದ ಪ್ರಾಣೇಂದ್ರಿಯಂಗಳ ನಿರ್ವಿಕಾರತೆ'ಯಿಂದ ಕೂಡಿದ ಬಸವಣ್ಣನವರು ಪ್ರಭುವಿಗೆ ತನ್ನನ್ನೇ 'ಓಗರವಾಗಿ' ಅರ್ಪಿಸಿಕೊಂಡು ವಿನೀತರಾಗಿ ನಿಂತರು. ಆ ಸ್ಥಿತಿಯಲ್ಲಿ ಬಸವಣ್ಣನವರನ್ನು ನೋಡಿದ ಪ್ರಭುವಿನ 'ನಿಜ' ಹಸಿವು ಮಾಯವಾಗುತ್ತದೆ. ಆಗ ತನ್ನ ಹುಸಿ ಹಸಿವಿನ ಕಾರಣವನ್ನು ತಿಳಿಸಿ, ಅಷ್ಟಮದಗಳು, ಸಪ್ತವ್ಯಸನಗಳು, ಇವುಗಳು ಆವರಿಸಿರದ ನಿನ್ನ ಅರ್ಪಿತಕಾಯವನ್ನು ಕಂಡು ಈಗ ನಾನು ತೃಪ್ತನಾದೆ ಎಂದು ಹಾಡಿ ಹೊಗಳುತ್ತಾರೆ.

'ನಾನೇ ಮಾಡಿದೆ, ನನ್ನಿಂದಲೇ ಎಲ್ಲವೂ ಆಯಿತು' ಎನ್ನುವ ಅಹಂಭಾವ ನಮ್ಮನ್ನು ಕಾಡುವ ಮೊದಲು ನಾವು ಒಮ್ಮೆ ಈ ಘಟನೆಯನ್ನು ಮನನ ಮಾಡಬೇಕು. ಕಾಯಗುಣಗಳು ಅಳಿದ ಶುದ್ಧರೂಪದ ಭಾವದಿಂದ ಪ್ರೇರಿತವಾದ ನಿಷ್ಕಾಮ ಕರ್ಮಗಳು ಮಾತ್ರ ಗುರುಲಿಂಗಜಂಗಮ ಸೇವೆ ಎನಿಸಿಕೊಳ್ಳುತ್ತವೆ. ಇಲ್ಲವಾದಲ್ಲಿ, ಮಾಡಿದೆನೆಂಬುದು ಮನದಲ್ಲಿ ಹೊಳೆದರೆ, ಶಿವನ ಡಂಗುರ ಏಡಿಸಿ ಕಾಡುತ್ತದೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಕನ್ನಡ ಸಾಹಿತ್ಯದಲ್ಲಿ ಮಹಿಳಾಧ್ವನಿ

**ಡಾ. ಜಿ.ಎಸ್. ಶಿವರುದ್ರಪ್ಪ**

ಸಾಹಿತ್ಯವನ್ನು ಮಹಿಳಾ ಸಾಹಿತ್ಯ, ಪುರುಷ ಸಾಹಿತ್ಯ ಎಂದು ವಿಭಾಗಿಸಿ ನೋಡುವುದು ಅಸಂಗತವಾದರೂ, ಮಹಿಳೆಯರ ಬರಹಗಳು ಪುರುಷರ ಬರಹಗಳಿಗಿಂತ ಭಿನ್ನವಾದ ನಿಲುವುಗಳನ್ನೂ ಲಕ್ಷಣಗಳನ್ನೂ ಪಡೆದುಕೊಂಡಿವೆ ಎನ್ನುವುದನ್ನು ತಳ್ಳಿಹಾಕಲಾಗುವುದಿಲ್ಲ. ಯಾಕೆಂದರೆ ಮಹಿಳೆಯರಿಗೆ ಪುರುಷರಿಗಿಂತ ಬೇರೆಯೆ ಆದ ಒಂದು ಮನೋಧರ್ಮ ಉಂಟು. ಅದೆಂದರೆ, ಒಂದು ಬಗೆಯ ಮಾರ್ದವತೆ, ಕಷ್ಟ ನೋವು ಸಂಕಟಗಳನ್ನು ಗಂಡಸರಿಗಿಂತ ವಿಶೇಷವಾದೊಂದು ರೀತಿಯಲ್ಲಿ ತಾಳಿಕೊಳ್ಳುವ ಸಹನಶೀಲತೆ, ಸಂತಾನ ಮತ್ತು ಸಂಸ್ಕೃತಿ ಪರವಾದ ಕಾಳಜಿಗಳು, ಗಂಡಸಿನಷ್ಟು ವ್ಯಗ್ರವಾಗದ ಒಂದು ಮಾನಸಿಕ ಹದ – ಇತ್ಯಾದಿಗಳು ಮಹಿಳೆಯರ ಮನಸ್ಸಿನ ಲಕ್ಷಣಗಳೆಂದು ಹೇಳಬಹುದು.

ಮನುಷ್ಯರಾಗಿ ಗಂಡು ಮತ್ತು ಹೆಣ್ಣು ಸಮಾನರೆನ್ನುವುದು ನಿಜವಾದರೂ, ಶತಶತಮಾನಗಳಿಂದ ಹೆಣ್ಣು ಪುರುಷಪ್ರಧಾನವಾದ ಪ್ರಪಂಚದ ಅಂಚಿನಲ್ಲೆ ಬದುಕಬೇಕಾದ ಚರಿತ್ರೆಯೊಂದು ನಿರ್ಮಾಣವಾಗಿದೆ ಎನ್ನುವುದೊಂದು ವಿಲಕ್ಷಣದ ಸಂಗತಿಯಾಗಿದೆ. ಪುರುಷ ಪ್ರಧಾನವಾದ ಜೀವನಕ್ರಮದಿಂದ ನಿಯಂತ್ರಿತವಾದ ಅವಳ ವ್ಯಕ್ತಿಸ್ವಾತಂತ್ರ್ಯ, ಅಧೀನತೆ ಮತ್ತು ವಿಧೇಯತೆಯನ್ನು ಸದಾ ಒಪ್ಪಿಕೊಳ್ಳಬೇಕಾದ ಮೌಲ್ಯಗಳ ಹೇರಿಕೆಯಿಂದ ಕಟ್ಟಿಕೊಂಡ ಅವಳ ವೈಚಾರಿಕತೆ, ಅಕ್ಷರಜ್ಞಾನದ ಸವಲತ್ತುಗಳ ನಿರಾಕರಣೆ, ಧಾರ್ಮಿಕ ವಿಚಾರಗಳಲ್ಲಿ ಸಮಾನತೆ ಮತ್ತು ಸ್ವಾತಂತ್ರ್ಯಗಳು ಆಕೆಗೆ ಲಭ್ಯವಾಗದಂತೆ ನೋಡಿಕೊಂಡ ವಿವಿಧ ಧರ್ಮಗಳ ಹುನ್ನಾರಗಳು, ಈ ದೇಶದ ಸಾಹಿತ್ಯ-ಪುರಾಣ-ಶಾಸ್ತ್ರಗಳು ಸಿದ್ಧಪಡಿಸಿದ ಪತಿವ್ರತಾಧರ್ಮದ ಮಾದರಿಗಳು – ಈ ಎಲ್ಲವೂ ಮಹಿಳೆ ಕೇವಲ ಸದ್‌ಗೃಹಿಣಿಯಾಗಿ ಬದುಕುವುದರಲ್ಲಿಯೆ ತನ್ನ ಜೀವನದ ಸಾರ್ಥಕತೆಯಿದೆ ಎಂಬ ನಂಬಿಕೆಯ ಚರಿತೆಗೆ ಮಹಿಳೆಯರನ್ನು ಕಟ್ಟಿಹಾಕಿವೆ.

ಪ್ರತ್ಯೇಕವಾಗಿ ಗಮನಿಸಬೇಕಾದ ಸಂಗತಿಯೆಂದರೆ ಜಗತ್ತಿನ ಯಾವ ಧರ್ಮಗಳೂ ಹೆಣ್ಣಿನ ವಿಚಾರದಲ್ಲಿ ಉದಾರವಾಗಿ ನಡೆದುಕೊಂಡಂತೆ ತೋರುವುದಿಲ್ಲ. ವೈದಿಕ-ಹಿಂದೂ ಧರ್ಮದ ಪ್ರಕಾರ ಪುರುಷನಿಗೆ ಇರುವ ಧಾರ್ಮಿಕ ಸ್ವಾತಂತ್ರ್ಯ ಹೆಣ್ಣಿಗೆ ಇಲ್ಲ. ಗಂಡಿನಂತೆ ಯಜ್ಞೋಪವೀತವನ್ನು ಹಾಕಿಕೊಳ್ಳುವ ಅಧಿಕಾರ ಹಾಗೂ ಇನ್ನೆಷ್ಟೋ ಧಾರ್ಮಿಕ ವಿಧಿಗಳಲ್ಲಿ ಗಂಡನ ಜತೆ ಪಾಲುಗೊಳ್ಳುವ ಅವಕಾಶ ಆಕೆಗೆ ಇಲ್ಲ. ಆಕೆ ಮಾಯೆಯ ಪ್ರತೀಕ,

ತಪೋವಿಘ್ನಕಾರಿ ಇತ್ಯಾದಿ. ಇನ್ನು ಬೌದ್ಧಧರ್ಮ, ಮೊದಮೊದಲು ಮಹಿಳೆಯರು ತಮ್ಮ ಸಂಘಕ್ಕೆ ಸೇರುವುದು ಬೇಡ ಎಂಬ ನಿಲುವನ್ನು ತಾಳಿತು. ಜೈನಧರ್ಮದ ಪ್ರಕಾರ ಹೆಣ್ಣು ಮೋಕ್ಷಕ್ಕೆ ಅರ್ಹಳಲ್ಲ; ಅವಳು ಮೋಕ್ಷವನ್ನು ಪಡೆಯಬೇಕಾದರೆ ಗಂಡಾಗಿ ಹುಟ್ಟಬೇಕು. ಕ್ರೈಸ್ತಧರ್ಮದ ಪ್ರಕಾರ ಗಂಡಸಿನ ಪತನಕ್ಕೆ ಕಾರಣಳಾದವಳು ಹೆಣ್ಣು; ಇಸ್ಲಾಂಧರ್ಮದ ಪ್ರಕಾರ ಹೆಣ್ಣು ನಿರಂತರ ಶೋಷಣೆಗೆ ಒಳಗಾಗುತ್ತಿರುವ ಒಂದು ವಸ್ತು. ಈ ಹಿನ್ನೆಲೆಯಲ್ಲಿ, ಆತ್ಮಪ್ರಾಮಾಣ್ಯದ ನೆಲೆಯಲ್ಲಿ ಹೆಣ್ಣಿನ ಅಸ್ತಿತ್ವವನ್ನು ಒಪ್ಪಿಕೊಳ್ಳುತ್ತ, ಈ ದೇಶದ ಮಹಿಳೆಗೆ ಬಹುಕಾಲದಿಂದ ನಿರಾಕೃತವಾದ ಆಧ್ಯಾತ್ಮಿಕ - ಧಾರ್ಮಿಕ - ಸಾಮಾಜಿಕ ಸಮಾನತೆ ಹಾಗೂ ಸ್ವಾತಂತ್ರ್ಯವನ್ನು ತಂದುಕೊಟ್ಟ ಹನ್ನೆರಡನೆಯ ಶತಮಾನದ ಶರಣ ಧರ್ಮದ ನಿಲುವುಗಳು ಈ ಹೊತ್ತಿನ ಮಹಿಳಾವಾದದ ಮೊದಲ ರೂಪಗಳಂತೆ ತೋರುತ್ತವೆ ಎನ್ನುವುದು ಸೋಜಿಗದ ಸಂಗತಿಯಾಗಿದೆ.

ಸ್ವಾಮಿ ವಿವೇಕಾನಂದರು ಸುಮಾರು ಒಂದೂವರೆ ಶತಮಾನದ ಹಿಂದೆ ಹೇಳಿದರು: 'ಈ ನಮ್ಮ ಭಾರತದಲ್ಲಿ ರಾಷ್ಟ್ರವ್ಯಾಪಿಯಾದ ಎರಡು ಮಹಾಪಾಪಗಳಿವೆ. ಒಂದು, ಈ ದೇಶದ ಬಹುಸಂಖ್ಯಾತರಾದ ದೀನ-ದಲಿತರ ಶೋಷಣೆ. ಮತ್ತೊಂದು, ಈ ದೇಶದ ಮಹಿಳೆಯರನ್ನು ಕುರಿತ ನಿರ್ಲಕ್ಷ್ಯ. ಈ ಚರಿತ್ರೆಯಲ್ಲಿ ಒಂದಷ್ಟು ಚಲನಶೀಲತೆ ಕಾಣಿಸಿಕೊಂಡದ್ದು, ಹತ್ತೊಂಬತ್ತನೆಯ ಶತಮಾನದ ವಸಾಹತುಶಾಹಿ ಸಂದರ್ಭದಲ್ಲಿ. ಬುದ್ಧ ಬಸವರಂಥ ಪ್ರಾಚೀನರನ್ನೂ ಒಳಗೊಂಡಂತೆ ಹತ್ತೊಂಬತ್ತನೆ ಶತಮಾನ ಸುಧಾರಣಾವಾದಿಗಳಾದ ರಾಜಾರಾಮ ಮೋಹನ್‌ರಾಯ್, ಈಶ್ವರಚಂದ್ರ ವಿದ್ಯಾಸಾಗರ, ವಿವೇಕಾನಂದ,ಗಾಂಧಿ, ಲೋಹಿಯಾ – ಇಂಥವರೆಲ್ಲರೂ ಮಹಿಳೆಯರನ್ನು ಈ ಪರಿಸ್ಥಿತಿಯಿಂದ ಪಾರುಮಾಡುವ ಚಿಂತನೆಗಳನ್ನು ಮಂಡಿಸಿದವರೇ. ಅದರಲ್ಲಿಯೂ ಮಹಾತ್ಮಗಾಂಧಿಯವರು ತಾವು ಹೂಡಿದ ಭಾರತೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಪುರುಷರಂತೆಯೆ ಮಹಿಳೆಯರಿಗೂ ಅವಕಾಶ ಕಲ್ಪಿಸಿದ್ದು ಮಹಿಳೆಯರ ಜಾಗೃತಿಯಲ್ಲಿ ಒಂದು ದಿಟ್ಟ ಹೆಜ್ಜೆ ಎನ್ನಬಹುದು. ಇದು ಈ ದೇಶದ ರಾಜಕಾರಣದಲ್ಲಿ ಮಹಿಳೆಯರು ಜವಾಬ್ದಾರಿಯುತವಾದ ಸ್ಥಾನಗಳನ್ನು ನಿರ್ವಹಿಸುವ ಅವಕಾಶಗಳನ್ನು ತೆರೆಯಿತು. ಜಾಗತಿಕ ಹಿನ್ನೆಲೆಯಿಂದ ನೋಡಿದರೂ, ತಮ್ಮ ದೇಶದ ಬಿಡುಗಡೆಯ ಆಂದೋಲದಲ್ಲಿ ಈ ದೇಶದ ಮಹಿಳೆಯರು ವಹಿಸಿದ ಪಾತ್ರ ವಿಶಿಷ್ಟವಾಗಿಯೇ ತೋರುತ್ತದೆ. ಅದೇ ಕಾಲದ ರಷ್ಯಾ ಹಾಗೂ ಚೀನಾ ದೇಶಗಳಲ್ಲಿ ನಡೆಯುತ್ತಿದ್ದ ಜನತಾ ಹೋರಾಟಗಳಲ್ಲಿ ಭಾಗವಹಿಸಿದ ಆಯಾ ದೇಶಗಳ ಮಹಿಳೆಯರ ಸಂಖ್ಯೆಗಿಂತ ನಮ್ಮ ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ ಮಹಿಳೆಯರ ಸಂಖ್ಯೆಯೆ ಹೆಚ್ಚಾಗಿತ್ತೆಂದು ಹೇಳಲಾಗಿದೆ. ಅಷ್ಟೇ ಅಲ್ಲ 1925 ರಷ್ಟು ಹಿಂದೆಯೆ ಶ್ರೀಮತಿ ಸರೋಜಿನಿ ನಾಯ್ಡು ಅವರು ಭಾರತೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆಯ್ಕೆಯಾದರೆಂಬುದನ್ನು ನೆನೆದರೆ, ಇದು ಅಂದಿನ ಜಗತ್ತಿನಲ್ಲಿ ಒಂದು ಅಪೂರ್ವವಾದ ಘಟನೆಯೆಂದೇ ಹೇಳಬೇಕು. ಹಾಗೆಯೆ ಸ್ವಾತಂತ್ರ್ಯೋತ್ತರ



ಭಾರತದ ಸಂದರ್ಭದಲ್ಲಿ ಮಹಿಳೆಯರಿಗೆ ದೊರೆತ ಶಿಕ್ಷಣದ ಅವಕಾಶಗಳು, ನಮ್ಮ ಸಂವಿಧಾನವು ಮಹಿಳೆಯರ ಹಕ್ಕುಗಳ ರಕ್ಷಣೆಗೆ ರೂಪಿಸಿದ ನಿಯಮಾವಳಿಗಳು, ಈ ರಾಷ್ಟ್ರದ ಬದುಕಿನಲ್ಲಿ ಸಂಭವಿಸಿದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಒತ್ತಡಗಳು, ಮತ್ತು ಈ ಕಾರಣಗಳಿಂದ ಹುಟ್ಟಿಕೊಂಡ ವಿವಿಧ ಚಳುವಳಿಗಳು, ಪಶ್ಚಿಮದ ಉದಾರ ಮಾನವತಾವಾದದ ಪರಿಣಾಮವಾದ ಮಹಿಳಾವಾದಿ ಚಿಂತನೆಗಳ ಪ್ರಭಾವವೂ ಆಧುನಿಕ ಭಾರತೀಯ ಮಹಿಳೆಯರಲ್ಲಿ ಹೊಸ ಎಚ್ಚರವನ್ನು ಹುಟ್ಟಿಸಲು ಕಾರಣವಾಗಿವೆ. ಮುಖ್ಯವಾದ ಮಾತೆಂದರೆ, ಶಿಕ್ಷಣ ಮತ್ತು ಉದ್ಯೋಗಾವಕಾಶಗಳಿಂದ ಲಭಿಸುವ ಆರ್ಥಿಕ ಸ್ವಾವಲಂಬನೆ ಹಾಗೂ ತಾನೇ ಸ್ವತಂತ್ರವಾದ ನಿಲುವುಗಳನ್ನು ತೆಗೆದುಕೊಳ್ಳುವ ಧೈರ್ಯ – ಈ ಮೂರರಿಂದ ಮಾತ್ರವೇ ಮಹಿಳೆ ತನ್ನ ಶತಮಾನಗಳ ಚರಿತ್ರೆಯಿಂದ ಬಿಡುಗಡೆ ಪಡೆದುಕೊಂಡು ವರ್ತಮಾನದ ವಾಸ್ತವಗಳನ್ನು ಎದುರಿಸಬಲ್ಲಳು.

ಗಂಡಿನಂತೆ ಹೆಣ್ಣೂ ಮನೆಯ ಹೊರಗೆ ಕಾಲಿಟ್ಟು ಉದ್ಯೋಗದಲ್ಲಿ ತೊಡಗಿಕೊಂಡು ಒಂದು ಬಗೆಯ ಆರ್ಥಿಕ ಸ್ವಾವಲಂಬನವನ್ನು ಪಡೆದುಕೊಳ್ಳುವ ಈ ಜೀವನಕ್ರಮ ಮೇಲುನೋಟಕ್ಕೆ 'ಬಿಡುಗಡೆ'ಯಂತೆ ಭಾಸವಾದರೂ, ಅದು ಈವರೆಗಿನ ಮನೆಯ ಕೆಲಸದ ಒಂದು ವಿಸ್ತರಣೆಯಲ್ಲದೆ ಬೇರೇನೂ ಅಲ್ಲ. ಇಷ್ಟೆಲ್ಲ ಕಷ್ಟಪಟ್ಟು ಅವಳು ದುಡಿದ ಹಣವನ್ನು ಸ್ವತಂತ್ರವಾಗಿ, ಅದು ತನ್ನದೆಂದು, ಪ್ರಸ್ತುತ ಕೌಟುಂಬಿಕ ವ್ಯವಸ್ಥೆಯಲ್ಲಿ ಬಳಸಬಲ್ಲಳೆ ಎಂಬುದಕ್ಕೆ ದೊರೆಯುವ ಉತ್ತರ ಎಷ್ಟೋ ಸಲ ನಿರಾಶಾದಾಯಕವಾಗಿರುವುದೂ ಉಂಟು. ಆದರೂ ಒಟ್ಟು ಪರಿಣಾಮ ಮಾತ್ರ ಮಹಿಳೆಯರ ಪಾಲಿಗೆ ಒಂದು ವರವಾಗಿ ಪರಿಣಮಿಸಿದೆಯೆಂಬುದನ್ನು ನಿರಾಕರಿಸುವಂತಿಲ್ಲ.

ಈಗ ಪ್ರಸ್ತಾಪಿಸಿದ ಹೊಸ ಜೀವನಕ್ರಮದ ಹಿನ್ನೆಲೆಯಿಂದ ಹೇಳುವುದಾದರೆ, ಮಹಿಳೆಯರು ಬದುಕಿನ ವಿವಿಧ ಕ್ಷೇತ್ರಗಳನ್ನು ಪ್ರವೇಶಿಸಿದಂತೆ, ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸಿದ ಒಂದು ಚರಿತ್ರೆಯೂ ಉಂಟು.

ಸುಮಾರು ಒಂದೂವರೆ ಸಾವಿರ ವರ್ಷಗಳಷ್ಟು ಸುದೀರ್ಘವಾದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲುಗೊಂಡ ಸಂದರ್ಭ ಬೆರಳೆಣಿಕೆಯಷ್ಟಿದೆ. ಕೆಲವು ಚಮತ್ಕಾರದ ರಚನೆಗಳನ್ನು ಬರೆದ ಕಂತಿಯೆಂಬ ಹೆಸರಿನ ಕವಯಿತ್ರಿ ಮತ್ತು ಹದಿಬದೆಯ ಧರ್ಮವೆಂಬ ಕೃತಿಯನ್ನು ಬರೆದ, ಮೈಸೂರರಸರ ಕಾಲದ ಸಂಚಿಯ ಹೊನ್ನಮ್ಮ – ಇವರನ್ನು ಹೊರತುಪಡಿಸಿದರೆ, ಹನ್ನೆರಡನೆಯ ಶತಮಾನದ ಅಕ್ಕಮಹಾದೇವಿಯನ್ನು ಕನ್ನಡದ ಮೊಟ್ಟಮೊದಲ ನಿಜವಾದ ಕವಯಿತ್ರಿ ಎಂದು ಗುರುತಿಸಬೇಕಾಗುತ್ತದೆ (ಈ ಕಾಲದಲ್ಲಿ ಅವಳ ಜತೆ ಇನ್ನೂ ಕೆಲವು ವಚನಕಾರ್ತಿಯರಿದ್ದಾರೆ ಎಂಬುದನ್ನು ಮರೆಯದೆ). ಈ ಕಾಲವನ್ನು ಹೊರತುಪಡಿಸಿದರೆ, ಕಳೆದ ಶತಮಾನದ ಇಪ್ಪತ್ತರ ದಶಕದ ನಂಜನಗೂಡು ತಿರುಮಲಾಂಬ, ಬೆಂಗಳೂರಿನ ಆರ್. ಕಲ್ಯಾಣಮ್ಮ, ಧಾರವಾಡದ ಸುನಂದ ಬೆಳಗಾಂವ್‌ಕರ್ ಇವರನ್ನು

ಹೊಸಗನ್ನಡದ ಮೊದಲ ಬರಹಗಾರ್ತಿಯರೆಂದು ಮಾತ್ರವಲ್ಲ, 'ಮಹಿಳಾವಾದ'ದ ಮೊದಲ ಪ್ರವರ್ತಕರೆಂದೂ ಗುರುತಿಸಬೇಕಾಗುತ್ತದೆ. ದುರದೃಷ್ಟದ ಸಂಗತಿಯೆಂದರೆ, ನವೋದಯದ ಮೊದಲ ದಿನಗಳಲ್ಲಿ ಕೃಷಿ ಮಾಡಿದ ನಂಜನಗೂಡು ತಿರುಮಲಾಂಬ ಅವರನ್ನು ಕನ್ನಡ ಸಾಹಿತ್ಯ ಚರಿತ್ರೆ ಮರೆತೇಬಿಟ್ಟಿತೇನೋ ಎಂಬ ನಿರ್ಲಕ್ಷ್ಯಕ್ಕೆ ಅವರು ಗುರಿಯಾದ ಹೊತ್ತಿನಲ್ಲಿ, ದಶಕಗಳ ಕಾಲ ಮರೆಯಾಗಿ ಒಂಟಿ ಜೀವನವನ್ನು ನಡೆಯಿಸುತ್ತಿದ್ದ ತಿರುಮಲಾಂಬಾ ಅವರನ್ನು ಪ್ರೊ. ಚಿ.ನ. ಮಂಗಳಾ ಅವರು ಗುರುತಿಸಿ ಬೆಳಕಿಗೆ ತಂದರೆಂಬುದು ಒಂದು ವಿಪರ್ಯಾಸವಾಗಿದೆ.

ನಂಜನಗೂಡು ತಿರುಮಲಾಂಬಾ ಅವರಿಂದ ಮೊದಲುಗೊಂಡು ಕಳೆದ ಶತಮಾನದ ಎಪ್ಪತ್ತರ ದಶಕದವರೆಗೆ, ಕನ್ನಡ ಲೇಖಕಿಯರ ಒಲವು ಮುಖ್ಯವಾಗಿ ಕತೆ ಕಾದಂಬರಿಯಂಥ ಜನಪ್ರಿಯ ಪ್ರಕಾರಗಳ ಕಡೆಗೆ ಕೇಂದ್ರೀಕೃತವಾದಂತೆ ತೋರುತ್ತದೆ. ಈ ಕಾಲದಲ್ಲಿ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ ಮಹಿಳೆಯರು ಬಹುತೇಕ ಶಿಷ್ಟ ಸಾಮಾಜಿಕ ವರ್ಗಕ್ಕೆ ಸೇರಿದವರೇ ಆಗಿದ್ದಾರೆ. ಅವರ ಗಮನ ಮುಖ್ಯವಾಗಿ ಮಧ್ಯಮವರ್ಗದ ಕೌಟುಂಬಿಕ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ತಮ್ಮ ಕತೆ-ಕಾದಂಬರಿಗಳಲ್ಲಿ ಚಿತ್ರಿಸುವುದರ ಕಡೆಗೇ. ಎಂ.ಕೆ. ಇಂದಿರಾ, ಅನುಪಮಾ, ತ್ರಿವೇಣಿ, ವೀಣಾ ಶಾಂತೇಶ್ವರ, ಸಾರಾ ಅಬೂಬಕರ್, ವೈದೇಹಿ, ನಾಗವೇಣಿ, ಗೀತಾ ನಾಗಭೂಷಣ ಹಾಗೂ ಇನ್ನೂ ಕೆಲವರು 'ಮಹಿಳಾ ಸಾಹಿತ್ಯ'ಕ್ಕೆ ಒಂದು ಸ್ಪಷ್ಟವಾದ ಚಹರೆಯನ್ನು ತಂದುಕೊಟ್ಟರು. ಸ್ವಾರಸ್ಯದ ಸಂಗತಿಯೆಂದರೆ, ಕನ್ನಡದ ಮೊದಲ ಮೂರು ಚಳುವಳಿಗಳ ಕಾಲದಲ್ಲಿ, ಅಂದರೆ ನವೋದಯ-ಪ್ರಗತಿಶೀಲ-ನವ್ಯ ಸಾಹಿತ್ಯ ಸಂದರ್ಭಗಳಲ್ಲಿ ಹೆಸರಿಸಬಹುದಾದ ಯಾವ ಕವಯಿತ್ರಿಯೂ. ಕಾಣಿಸುವುದಿಲ್ಲ. ಆದರೆ ಕಳೆದ ಶತಮಾನದ ಎಪ್ಪತ್ತರ ದಶಕದ ವೇಳೆಗೆ, ಈ ದೇಶದ ಹಾಗೂ ಕರ್ನಾಟಕದ ಬದುಕಿನಲ್ಲಿ ಸಂಭವಿಸಿದ ಹಲವು ಚಾರಿತ್ರಿಕ - ಸಾಂಸ್ಕೃತಿಕ ಪಲ್ಲಟಗಳ ಕಾರಣದಿಂದ, ಅದುವರೆಗೂ ನಿರ್ಲಕ್ಷಿತವಾದ ಅನೇಕ ಅನುಭವ ಪ್ರಪಂಚಗಳು ಅನಾವರಣಗೊಂಡು, ಅದುವರೆಗೂ ಮೂಕವಾದ ಹಲವು ಸಾಮಾಜಿಕ ಸ್ತರಗಳು ಸಾಹಿತ್ಯದ ಮೂಲಕ ತಮ್ಮ ಧ್ವನಿಯನ್ನು ದಾಖಲಿಸತೊಡಗಿದ ದಲಿತ-ಬಂಡಾಯ ಚಳುವಳಿಯ ಹೊತ್ತಿನಲ್ಲಿ ಬಹುಸಂಖ್ಯೆಯ ಮಹಿಳೆಯರು ಕನ್ನಡ ಕಾವ್ಯಲೋಕವನ್ನು ಪ್ರವೇಶಿಸಿದರು ಎನ್ನುವುದು ಒಂದು ಮಹತ್ವದ ಸಂಗತಿಯಾಗಿದೆ. ಇದಕ್ಕೆ ಪೂರಕವಾಗಿ 1975 ನೆಯ ವರ್ಷವನ್ನು ವಿಶ್ವಸಂಸ್ಥೆಯು 'ಅಂತರರಾಷ್ಟ್ರೀಯ ಮಹಿಳಾ ವರ್ಷ' ಎಂದು ಘೋಷಿಸಿ ಮಹಿಳಾಪರ ಚಿಂತನೆಗಳಿಗೆ ಒಂದು ಚಾಲನೆಯನ್ನು ನೀಡಿತು. ಹೀಗಾಗಿ ತಮಗಾದ ಅನ್ಯಾಯದ ಚರಿತ್ರೆಯನ್ನು ಪುನರವಲೋಕನ ಮಾಡುವ, ಮಹಿಳೆಯ ಬರಹಕ್ಕಿರುವ ವಿಶಿಷ್ಟತೆಯನ್ನು ಗುರುತಿಸುವ, ಅನುಭವದ ಗ್ರಹಿಕೆಯಲ್ಲಿ ಹೆಣ್ಣಿಗೆ ಪುರುಷರಿಗಿಂತ ಭಿನ್ನವಾದ ಒಂದು ವಿಧಾನವಿದೆ ಎಂಬ ಸಂಗತಿಯನ್ನು ಮಾನ್ಯ ಮಾಡುವ ಚಿಂತನೆಗಳು ಬಹುಶಃ ಈ ಸಮಯದಲ್ಲಿ ಗಟ್ಟಿಗೊಂಡಂತೆ ತೋರುತ್ತದೆ.

ಕನ್ನಡ ಮಹಿಳಾ ಬರೆಹಗಳ ಹಿಂದೆ ಸ್ಥೂಲವಾಗಿ ಎರಡು ಮಾದರಿಗಳಿರುವಂತೆ



ತೋರುತ್ತದೆ. ಒಂದು, ಅಕ್ಕಮಹಾದೇವಿಯ ಮಾದರಿ, ಮತ್ತೊಂದು ಸಂಚಿ ಹೊನ್ನಮ್ಮನ ಮಾದರಿ. ಹೀಗೆ ಗುರುತಿಸಲು ಕಾರಣ ಬಹುಸಂಖ್ಯೆಯ ಕವಯಿತ್ರಿಯರ ಯಾವ ಕವನ ಸಂಗ್ರಹವನ್ನು ತೆರೆದರೂ ಅವುಗಳಲ್ಲಿ ಅಕ್ಕಮಹಾದೇವಿಯನ್ನು ಕುರಿತ ಒಂದಾದರೂ ಕವನ ಕಣ್ಣಿಗೆ ಬೀಳುತ್ತದೆ ಎನ್ನುವ ಕುತೂಹಲವೇ. ಯಾಕೆ ಅಕ್ಕನ ಬದುಕು ಬಹುಸಂಖ್ಯೆಯ ಕವಯಿತ್ರಿಯರಿಗೆ ಆಕರ್ಷಕವಾಗಿದೆ ಎಂದರೆ, ಈ ಮಹಿಳೆಯರು ತಮ್ಮನ್ನು ಅಕ್ಕನ ಮೂಲಕ ಗುರುತಿಸಿಕೊಳ್ಳುವ ಭಾವನಾತ್ಮಕ ಹಾಗೂ ವೈಚಾರಿಕ ಸಾಮ್ಯವನ್ನು ಕಂಡುಕೊಂಡಿದ್ದಾರೆ ಎಂದು ಅರ್ಥ. ಅದರಲ್ಲಿಯೂ ಅವಳ ಆಧ್ಯಾತ್ಮಿಕ ನಿಲುವುಗಳಿಗಿಂತ ಮಿಗಿಲಾಗಿ, ಒಬ್ಬ ಹೆಣ್ಣಾಗಿ ಪುರುಷಪ್ರಧಾನ ಚರಿತ್ರೆಯನ್ನು ಆಕೆ ಪ್ರಶ್ನಿಸಿದ ಕ್ರಮ, ಮದುವೆಯೆಂಬ ಸಾಂಸ್ಥಿಕ ವ್ಯವಸ್ಥೆಯನ್ನು ಒಪ್ಪಿಕೊಂಡೂ ಹೆಣ್ಣು ತನ್ನ ಸಂಗಾತಿಯ ಆಯ್ಕೆಯನ್ನು ತಾನೇ ಮಾಡಿಕೊಳ್ಳಬಹುದೆಂಬ ನಿಲುವನ್ನು ಎತ್ತಿಹಿಡಿದ ಅವಳ ದಿಟ್ಟತನ, ಅವಳ ವೈಚಾರಿಕತೆ, ಆಕೆಯ ಅಭಿವ್ಯಕ್ತಿಯಲ್ಲಿ ಕಂಡುಬರುವ ಅಂತರಂಗದ ಸಂಘರ್ಷ ಹಾಗೂ ಉತ್ಕಟವಾದ ಕಾವ್ಯಗುಣ – ಇವುಗಳು ನಮ್ಮ ಕವಯಿತ್ರಿಯರ ಗಮನವನ್ನು ಸೆಳೆದಂತೆ ತೋರುತ್ತವೆ. ಆದರೆ ಇನ್ನೊಬ್ಬ ಕವಯಿತ್ರಿ ಸಂಚಿಯ ಹೊನ್ನಮ್ಮನ ಮೂಲಕ ತಮ್ಮನ್ನು ಗುರುತಿಸಿಕೊಳ್ಳುವುದರಲ್ಲಿ ನಮ್ಮ ಕವಯಿತ್ರಿಯರಿಗೆ ಅಷ್ಟಾಗಿ ಆಸಕ್ತಿಯಿಲ್ಲ. ಯಾಕೆಂದರೆ ಸಂಚಿ ಹೊನ್ನಮ್ಮ 'ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು' ಎಂಬ ಒಂದೇ ಒಂದು ದಿಟ್ಟತನದ ಆಕ್ಷೇಪಣೆಯ ದನಿಯಿಂದ ಸಾಹಿತ್ಯ ಚರಿತ್ರೆಯ ನೆನಪಿನಲ್ಲಿ ಉಳಿದಿರುವವಳಾದರೂ, ಮೂಲಭೂತವಾಗಿ ಭಾರತೀಯ ಸಂಪ್ರದಾಯದ ಚೌಕಟ್ಟಿನಲ್ಲಿ ಯಾವುದೇ ಬದಲಾವಣೆಯನ್ನೂ ಆಶಿಸದ, ಗೃಹಸ್ಥ ಧರ್ಮವನ್ನು ಪ್ರತಿಪಾದಿಸುವ ಧ್ವನಿಯಷ್ಟೇ ಆಗಿದ್ದಾಳೆ. ನಮ್ಮ ನವೋದಯ ಕಾಲದ ಹಾಗೂ ಅದರ ನಂತರದ ಬಹುಸಂಖ್ಯೆಯ ಜನಪ್ರಿಯ ಕಾದಂಬರಿಕಾರ್ತಿಯರ ನಿಲುವು (ತ್ರಿವೇಣಿ, ಎಂ.ಕೆ. ಇಂದಿರಾ, ಅನುಪಮಾ ಇಂಥ ಕೆಲವರನ್ನು ಹೊರತುಪಡಿಸಿದರೆ) ಬಹುಮಟ್ಟಿಗೆ ಸಂಚಿ ಹೊನ್ನಮ್ಮನ ಮಾದರಿಯನ್ನೆ ಮುಂದುವರಿಸಿದಂತೆ ತೋರುತ್ತದೆ. ಇದಕ್ಕೆ 'ಪ್ರತಿ'ಯಾಗಿ ಎಂಬಂತೆ ನವ್ಯೋತ್ತರ ಸಾಹಿತ್ಯ ಸಂದರ್ಭದ ಬರೆಹಗಳು, ಅಂದರೆ ಕವಿತೆ - ಕತೆ - ಕಾದಂಬರಿಗಳು ತಮ್ಮ ಮನೋಧರ್ಮದಲ್ಲಿ 'ಅಕ್ಕನ ಮಾದರಿ' ಯನ್ನು ಎತ್ತಿ ಹಿಡಿಯುವಂತೆ ತೋರುತ್ತವೆ. ಅದರಲ್ಲಿಯೂ ಕವಿತೆಗಳಲ್ಲಿ 'ಅಕ್ಕ'ನನ್ನು ಕುರಿತ ವಸ್ತು ಬಹುಸಂಖ್ಯಾತ ಕವಯಿತ್ರಿಯರ ಸೃಜನಾತ್ಮಕ ಪ್ರತಿಕ್ರಿಯೆಗಳಿಗೆ ಒಳಪಟ್ಟಿರುವ ಕ್ರಮ ತುಂಬ ಕುತೂಹಲಕರವಾಗಿದೆ. ಹೆಣ್ಣಿನ ಬದುಕಿಗೆ ಒಂದು ಘನತೆಯನ್ನೂ ಗೌರವವನ್ನೂ ತಂದುಕೊಟ್ಟ ಅಕ್ಕಮಹಾದೇವಿಯ ವ್ಯಕ್ತಿತ್ವ ಮತ್ತು ನಿಲುವು ಹಾಗೂ ವೈಚಾರಿಕತೆಗಳು, ಕನ್ನಡದ ಅದೆಷ್ಟೋ ಕವಯಿತ್ರಿಯರಿಗೆ ತಕ್ಕ 'ವಸ್ತು ಪ್ರತಿರೂಪ' (Objective Correlative) ಆದದ್ದು ಆಶ್ಚರ್ಯವೇನೂ ಅಲ್ಲ.

ಕಳೆದ ಎರಡು ದಶಕಗಳ ಕಾಲಮಾನದಲ್ಲಿ ಸಾಕಷ್ಟು ಸಂಖ್ಯೆಯ ಮಹಿಳೆಯರು ಕನ್ನಡ ಕಾವ್ಯವನ್ನು ಪ್ರವೇಶಿಸಿ ವಿಶಿಷ್ಟ ಧ್ವನಿಗಳಾಗಿದ್ದಾರೆ. ಕೆಲವರನ್ನು ಹೆಸರಿಸುವುದಾದರೆ, ಪ್ರತಿಭಾ

ನಂದಕುಮಾರ್, ಮಾಲತಿ ಪಟ್ಟಣಶೆಟ್ಟಿ, ಡಾ. ಎಚ್.ಎಲ್. ಪುಷ್ಪ, ಚ. ಸರ್ವಮಂಗಳಾ, ಸ. ಉಷಾ, ಡಾ. ವಿನಯಾ ಒಕ್ಕುಂದ, ರೂಪ ಹಾಸನ, ಸವಿತಾ ನಾಗಭೂಷಣ, ಲಲಿತಾ ಸಿದ್ಧಬಸವಯ್ಯ, ಕವಿತಾ ರೈ, ಶಶಿಕಲಾ ವೀರಯ್ಯಸ್ವಾಮಿ, ಸುಕನ್ಯಾಮಾರುತಿ, ಜ್ಯೋತಿ ಗುರುಪ್ರಸಾದ್, ಭಗವತಿ – ಹೀಗೆ ಇನ್ನೂ ಇತರರು. ಇವರೆಲ್ಲರ ಕಾವ್ಯ, ಇಂದಿನ ಜಗತ್ತಿಗೆ ಮಹಿಳೆಯರ ಮನಸ್ಸು ಸ್ಪಂದಿಸುತ್ತಿರುವ ಹಾಗೂ ಪ್ರತಿಕ್ರಿಯಿಸುವ ಕ್ರಮವನ್ನು ತಕ್ಕ ಲವಲವಿಕೆಯಿಂದ ಕಟ್ಟಿಕೊಡುತ್ತದೆ.

ಕತೆ-ಕಾದಂಬರಿ-ಕಾವ್ಯ ಪ್ರಕಾರಗಳನ್ನು ತುಂಬ ಉತ್ಸಾಹದಿಂದ ನಿರ್ವಹಿಸುವ ಮಹಿಳೆಯರು ಸಾಹಿತ್ಯದ ಇನ್ನಿತರ ಕ್ಷೇತ್ರಗಳನ್ನು ಪ್ರವೇಶಿಸಿ ತಮ್ಮ ಗಟ್ಟಿ ನೆಲೆಯನ್ನು ಇನ್ನೂ ಕಂಡುಕೊಳ್ಳಬೇಕಾಗಿದೆ. ಸಾಹಿತ್ಯ ವಿಮರ್ಶೆಯಂಥ ಕ್ಷೇತ್ರಗಳಲ್ಲಿ ಹೆಸರುಮಾಡಿರುವ, ವಿಜಯಾ ದಬ್ಬೆ, ಬಿ.ಕೆ. ಸುಮಿತ್ರಾಬಾಯಿ, ಎಂ.ಎಸ್. ಆಶಾದೇವಿ, ಪ್ರೀತಿ ಶುಭಚಂದ್ರ ವಿಜಯಾ ಸುಬ್ಬರಾಜ್, ಮಂಗಳಾ ಪ್ರಿಯದರ್ಶಿನಿ – ಇಂಥವರ ಜತೆಗೆ ಹೊಸಬರಿಗಾಗಿ ಇನ್ನೂ ಕಾಯಬೇಕಾಗಿದೆ. ಆಶ್ಚರ್ಯದ ಸಂಗತಿಯೆಂದರೆ, ಹೇಳಿಕೊಳ್ಳಬಹುದಾದ, ಮತ್ತೆ ಮತ್ತೆ ಪ್ರದರ್ಶನ ಹಾಗೂ ಗಂಭೀರವಾದ ವಿಮರ್ಶೆಗೆ ಒಳಗಾದ ಯಾವ ಒಂದು ನಾಟಕವನ್ನೂ ಮಹಿಳೆಯರು ಬರೆದಿಲ್ಲ ಎನ್ನುವುದು. ಇನ್ನು 'ಆತ್ಮಕಥನ'ವಂತೂ ದೂರವೇ ಉಳಿಯಿತು. ವಾಸ್ತವವಾಗಿ ಮಹಿಳೆಯಾದವಳು ಪುರುಷರಷ್ಟು ಸಲೀಸಾಗಿ ಮತ್ತು ನಿರ್ಭಿಡೆಯಿಂದ ತನ್ನ ಆತ್ಮಕಥೆಯನ್ನು ಬರೆದುಕೊಳ್ಳಬಹುದಾದ ವಾತಾವರಣ ನಮ್ಮಲ್ಲಿ ಇನ್ನೂ ನಿರ್ಮಾಣವಾಗಿಲ್ಲ. ಆದರೂ ಇತ್ತೀಚೆಗೆ ಬೆಂಗಳೂರಿನ 'ಕರ್ನಾಟಕ ಲೇಖಕಿಯರ ಸಂಘ'ವು ಲೇಖಕಿಯರ ಶಿಬಿರಗಳನ್ನು ಏರ್ಪಡಿಸಿ, ಅವರು ತಮ್ಮ ತಮ್ಮ ಆತ್ಮಕಥನಗಳನ್ನು ನಿರೂಪಿಸಿಕೊಳ್ಳಲು ಅವಕಾಶಗಳನ್ನು ಕಲ್ಪಿಸಿ, ಹಾಗೆ ನಿರೂಪಿತವಾದ ಆತ್ಮಕಥನದ ಬರೆಹಗಳನ್ನು 'ಲೇಖ-ಲೋಕ' ಎಂಬ ಹೆಸರಿನ ಹಲವು ಸಂಪುಟಗಳಲ್ಲಿ ಪ್ರಕಟಿಸುವ ವಿನೂತನ ಪ್ರಯೋಗವನ್ನು ನಡೆಯಿಸಿದ ಸಂಗತಿ ಪ್ರಶಂಸಾರ್ಹವಾಗಿದೆ. ಈ ಸಂದರ್ಭದಲ್ಲಿ ಬುದ್ಧ-ಕ್ರಿಸ್ತ-ಬಸವ ಈ ಮೂವರನ್ನು ಕುರಿತು ಮೂರು ಮಹಾಕಾವ್ಯಗಳನ್ನು ಬರೆದಿರುವ ಮೈಸೂರಿನ ಲತಾ ರಾಜಶೇಖರ್ ಅವರ ಮಹತ್ವಾಕಾಂಕ್ಷೆಯನ್ನು ಪ್ರತ್ಯೇಕವಾಗಿಯೆ ಪರಿಗಣಿಸುವುದು ಅಗತ್ಯವಾಗಿದೆ.

ಈಗ ಮಹಿಳೆಗೆ ಮೊದಲಿಗಿಂತ ಹೆಚ್ಚು ಉದ್ಯೋಗ ಕ್ಷೇತ್ರಗಳ ಬಾಗಿಲು ತೆರೆದಿವೆ. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಹಾಗೂ ಈ ರಾಷ್ಟ್ರದ ರಾಜಕಾರಣದಲ್ಲಿ ಮಹಿಳೆ ಗಣನೀಯ ಪಾತ್ರವನ್ನು ವಹಿಸಿದ್ದಾಳೆ. ಲೋಕಸಭೆ–ರಾಜ್ಯಸಭೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಕುರಿತಂತೆ ಮಹಿಳಾ ಮೀಸಲಾತಿ ಮಸೂದೆಯ ಮಂಡನೆಯ ವಿಷಯ ಇನ್ನೂ ಪರಿಶೀಲನೆಯಲ್ಲಿದೆ. ದೇಶಾದ್ಯಂತ ಮಹಿಳಾ ಸಬಲೀಕರಣ ಯೋಜನೆಗಳು ಕ್ರಿಯಾಶೀಲವಾಗಿವೆ. ಮಹಿಳಾ ಅಧ್ಯಯನ ಎನ್ನುವುದು ನಮ್ಮ ವಿಶ್ವವಿದ್ಯಾಲಯಗಳ ಪಠ್ಯಕ್ರಮದ ಒಂದು ಭಾಗವಾಗಿದೆ. ಬಿಜಾಪುರದಲ್ಲಿ ಪ್ರತ್ಯೇಕವಾದ 'ಮಹಿಳಾ



ವಿಶ್ವವಿದ್ಯಾಲಯ'ವೇ ಪ್ರಾರಂಭವಾಗಿದೆ. ಮಹಿಳೆಯಾದವಳಿಗೆ, ಮನೆಯಿಂದಾಚೆಗೂ ತಾನು ತೊಡಗಿಸಿಕೊಳ್ಳಬಹುದಾದ ಒಂದು ಜಗತ್ತಿದೆ, ಈ ಹೊರ ಜಗತ್ತಿನೊಂದಿಗೆ ತಾನು ಕ್ರಿಯಾಶೀಲಳಾಗಿ ಸ್ಪಂದಿಸುವುದರ ಮೂಲಕ ಮಹಿಳೆ ತನ್ನ ಬಿಡುಗಡೆಯನ್ನು ಪಡೆದುಕೊಳ್ಳಬಹುದು ಎಂಬ ಹೊಸ ಎಚ್ಚರವೊಂದು ಹುಟ್ಟಿಕೊಂಡಿದೆ. ಇವೆಲ್ಲ ಆಶಾದಾಯಕವಾದ ಸಂಗತಿಗಳೇನೋ ನಿಜ. ಆದರೆ ಇಷ್ಟೊಂದು ಮುಂದುವರಿದಿದೆ ಎಂದು ಹೇಳಲಾದ ಈ ಜಗತ್ತಿನಲ್ಲಿ ಮಹಿಳೆಯರ ಮೇಲೆ ವಿವಿಧ ಹಂತಗಳಲ್ಲಿ ನಡೆಯುತ್ತಿರುವ ಶೋಷಣೆ ಕಡಿಮೆಯಾಗಿದೆಯೆ ಎಂದು ಕೇಳಿದರೆ, ಹೌದು ಎಂದು ಹೇಳುವ ಧೈರ್ಯವಿಲ್ಲ. ಶಿಕ್ಷಣದ ಅನುಕೂಲಗಳು ಮತ್ತು ವಿವಿಧ ಉದ್ಯೋಗದ ಅವಕಾಶಗಳು ಮಹಿಳೆಯರಿಗೆ ದೊರಕಿವೆ ಎನ್ನುವುದು ನಿಜವಾದರೂ ಈ ಹೊಸ ಔದ್ಯೋಗಿಕ ಅವಕಾಶಗಳು ಮಹಿಳೆಯರ ಬದುಕಿನಲ್ಲಿ ಹುಟ್ಟಿಸುತ್ತಿರುವ ಆತಂಕಗಳು ಗಾಬರಿಗೊಳಿಸುವಂತಿವೆ. ಹಾಗೆಯೆ ಪ್ರಸ್ತುತ ಜಾಗತೀಕರಣದ ಮಾರುಕಟ್ಟೆ ಸಂಸ್ಕೃತಿಯಲ್ಲಿ, ವಿವಿಧ ಮಾಧ್ಯಮಗಳ ಮೂಲಕ ಹೆಣ್ಣು ಕೇವಲ ಮಾರಾಟದ ವಸ್ತುವೆಂಬಂತೆ ಬಿಂಬಿಸಲ್ಪಡುತ್ತಿದ್ದಾಳೆ. ಈ ಪ್ರವೃತ್ತಿಯನ್ನು ಮಹಿಳಾ ಸಂಘಟನೆಗಳೂ ಮತ್ತು ಈ ನಾಡಿನ ಪ್ರಜ್ಞಾವಂತರೂ ಪ್ರತಿಭಟಿಸುವುದು ಈ ಹೊತ್ತಿನ ಅಗತ್ಯವಾಗಿದೆ. ಜತೆಗೆ, ಮಹಿಳೆಯರು ತಮ್ಮ ಸಂಕಷ್ಟಗಳಿಗೆ ನೆರವಾಗುವ ಕಾನೂನುಗಳು ಯಾವುವು ಎನ್ನುವ ಬಗ್ಗೆ ತಿಳಿವಳಿಕೆಯನ್ನು ಪಡೆದುಕೊಳ್ಳಬೇಕಾಗಿದೆ. ಒಟ್ಟಿನಲ್ಲಿ ಹೊಸ ಯುಗದ ಸವಾಲುಗಳನ್ನು ತಕ್ಕ ವೈಚಾರಿಕತೆಯಿಂದ ಎದುರಿಸಲು ಅಗತ್ಯವಾದ ಮನೋಧರ್ಮವನ್ನು ಇನ್ನೂ ನಮ್ಮ ಮಹಿಳೆಯರು ರೂಪಿಸಿಕೊಳ್ಳಬೇಕಾಗಿದೆ.*

---

ದಿನಾಂಕ 11.3.2009 ರಂದು ಮೈಸೂರಿನ ಜೆಎಸ್ಎಸ್ ಮಹಿಳಾ ಕಾಲೇಜು ಏರ್ಪಡಿಸಿದ್ದ 'ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಂವೇದನೆ' ಎಂಬ ವಿಚಾರಸಂಕಿರಣದ ಉದ್ಘಾಟನಾ ಭಾಷಣ

# ಪ್ರಮುಖ ಭಾರತೀಯ ಧರ್ಮಗಳು: ಭಕ್ತಿಯ ಪರಿಕಲ್ಪನೆ

**ಡಾ. ವ್ಹಿ.ಜಿ. ಪೂಜಾರ**

ನಮ್ಮ ದೇಶ ಹಲವು ಧರ್ಮಗಳ ಆಡುಂಬೊಲವಾಗಿದೆ. ಇಲ್ಲಿ ಧರ್ಮದ ಒರತೆ ಚಿರಂತನವಾಗಿ ಪ್ರವಹಿಸಲು ಹಲವು ಧಾರ್ಮಿಕ ಮುಖಂಡರು, ಮಹಾಪುರುಷರು ಕಾರಣರಾಗಿದ್ದಾರೆ. ಹಿಂದೂ, ಬೌದ್ಧ, ಜೈನ, ಸಿಖ್, ಮುಸ್ಲಿಂ, ಶೈವ, ಕ್ರೈಸ್ತ, ವೀರಶೈವ ಮುಂತಾದ ಧರ್ಮಗಳು ನಮ್ಮ ದೇಶದಲ್ಲಿ ನೆಲೆ ನಿಂತಿವೆ. ಬೌದ್ಧ ಧರ್ಮ ಮಾತ್ರ ಇದೀಗ ವಿದೇಶಗಳಲ್ಲಿ ಹೆಚ್ಚಿನ ಪ್ರಚಾರ ಪಡೆದಿದೆ. ಎಲ್ಲಾ ಧರ್ಮಗಳ ಗುರಿ ಒಂದೇ, ಮಾನವ ಕಲ್ಯಾಣ. 'ಸರ್ವೇಜನಾಃ ಸುಖಿನೋ ಭವಂತು' – ಎಲ್ಲರಿಗೂ ಒಳ್ಳೆಯದಾಗಲಿ ಎಂಬುದೇ ಆಗಿದೆ. ಎಲ್ಲ ಧರ್ಮಗಳೂ ಪರಮಾತ್ಮನ ಪಾದಕ್ಕೆ ಹೋಗಿ ಸೇರುವ ನದಿಗಳಿದ್ದಂತೆ. ಆಯಾ ಧರ್ಮಗಳಲ್ಲಿ ಸಾಧನಾಮಾರ್ಗಗಳು ಭಿನ್ನಭಿನ್ನವಾಗಿರಬಹುದು. ಆದರೆ ಅವುಗಳ ಹುರುಳು ಮಾತ್ರ ಒಂದೇ ಆಗಿದ್ದುದನ್ನು ಅರಿಯುವೆವು.

'ಧರ್ಮ' ಎಂಬ ಪದವು 'ಧೃ" ಎಂಬ ಧಾತುವಿನಿಂದ ನಿಷ್ಪನ್ನಗೊಂಡಿದೆ. 'ಧೃ' ಎಂದರೆ ಧರಿಸು, ಹೊರು ಎಂದರ್ಥ. ಯಾವುದು ನಮ್ಮನ್ನು ಹೊತ್ತು ನಿಂತಿದೆಯೋ, ಯಾವುದು ನಮ್ಮನ್ನು ಈ ಸುಸ್ಥಿತಿಯಲ್ಲಿ ಇರಿಸಿದೆಯೋ ಅದು ಧರ್ಮ. ಧರ್ಮ ಎಂದರೆ ಸ್ವಭಾವ, ಗುಣ, ಒಳ್ಳೆಯ ನಡೆ-ನುಡಿ ಎಂದೇ ಅರ್ಥ. ಇನ್ನೊಬ್ಬರ ಕಷ್ಟ-ಕೋಟಲೆ ದುಃಖ-ದುಮ್ಮಾನಗಳನ್ನು ದೂರ ಮಾಡುವುದೇ ಧರ್ಮ. ಎಷ್ಟೋ ಜನ ಭಿಕ್ಷುಕರು ದಾನ ಮಾಡಿ, ಧರ್ಮ ಮಾಡಿ ಎನ್ನುತ್ತಾರೆ. ಇಲ್ಲಿ ಧರ್ಮ ಎಂದರೆ ಅನ್ನದಾನ ಎಂದೂ ಅರ್ಥವಾಗುವುದು. ಹಸಿದವರಿಗೆ ಅನ್ನದಾನ ಮಾಡಿದಾಗ ಅವರಿಗೆ ತೃಪ್ತಿಯಾಗುವುದು. ಹೀಗೆ ಹಸಿದವರನ್ನು ತೃಪ್ತಿಪಡಿಸುವುದೂ ಧರ್ಮವೇ ಆಗಿದೆ. 'ಧರ್ಮ' ಎಂದರೆ ಒಟ್ಟಿನಲ್ಲಿ ನ್ಯಾಯಯುತ ಮಾರ್ಗದಲ್ಲಿ ನಡೆಯುವುದು, ಇನ್ನೊಬ್ಬರೂ ತಮ್ಮಂತೆಯೇ ಎಂದು ಭಾವಿಸುವುದು, ಜನಹಿತ ಕಾರ್ಯ ಮಾಡುವುದು, ದಯೆ-ಕರುಣೆ ತೋರುವುದು, ಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದರ ಮೂಲಕ ಅವರ ಸುಖ-ದುಃಖಗಳಲ್ಲಿ ಭಾಗಿಯಾಗುವುದೇ ವಿಶಾಲಾರ್ಥದಲ್ಲಿ ಧರ್ಮ ಎನ್ನಿಸುವುದು.

ನಾವಿಂದು 'ಮತಧರ್ಮ' ಎನ್ನುತ್ತ ಧರ್ಮದ ಹಿಂದೆ ಮತವನ್ನು ಸೇರಿಸುವೆವು. ಮತದ ಅರ್ಥ ಸೀಮಿತವಾದುದಾದರೆ, ಧರ್ಮದ ಅರ್ಥ ವಿಶಾಲವಾದುದು. ಮೂಲತಃ ಧರ್ಮವು ಮಾನವನನ್ನು ಪರಿಶುದ್ಧನನ್ನಾಗಿಸುವ ಪವಿತ್ರ ಪ್ರಕ್ರಿಯೆಯಾಗಿದೆ. ಆದರೆ ನಾವಿಂದು ಅದನ್ನು



ಜಾತಿ ಮಟ್ಟಕ್ಕೆ ಇಳಿಸಿ ಬಳಸುತ್ತಾ ಇದ್ದೇವೆ. ಇದು ಸರಿ ಅಲ್ಲ. ಮತ-ಜಾತಿ-ಪಂಥ ಇವು ಮನುಷ್ಯ-ಮನುಷ್ಯರ ಮಧ್ಯೆ ಗೋಡೆಗಳು ಇದ್ದಂತೆ. ಈ ಗೋಡೆಗಳನ್ನು ಒಡೆದು ನೆಲಸಮ ಮಾಡಿದಾಗ ಪರಸ್ಪರರಲ್ಲಿ ಹೊಂದಾಣಿಕೆ, ಅರಿವು, ಸ್ನೇಹ ಮೂಡಿ ನಿಲ್ಲುವುವು. ಧರ್ಮವೂ ಹೀಗೆಯೇ ಮನುಷ್ಯ-ಮನುಷ್ಯರ ಮಧ್ಯೆ ಗೋಡೆಗಳಂತಾಗದೆ, ಅದನ್ನು ಒಡೆದು ನೆಲಸಮ ಮಾಡಿ ಎಲ್ಲರಲ್ಲೂ ಸಮಾನತೆ, ಸೌಹಾರ್ದತೆ, ಸಾಮರಸ್ಯ ಮುಂತಾದ ಸದ್ಗುಣಗಳನ್ನು ಹುಟ್ಟುಹಾಕಿ ಬೆಳೆಸುವಂಥ ಪವಿತ್ರ ಪ್ರಕ್ರಿಯೆಯಾಗಿದೆ. ಇದೊಂದು ಬಗೆಯ ಮನೋಧರ್ಮವೂ ಆಗಿದೆ. ಸನ್ನಡತೆಯೂ ಆಗಿದೆ. ಮಹಾಭಾರತದಲ್ಲಿ ಬರುವ 'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಮಾತು ಇದನ್ನೇ ಸೂಚಿಸುತ್ತದೆ. ಯಾರು ನ್ಯಾಯದಿಂದ, ಸತ್ಯದಿಂದ, ಪ್ರಾಮಾಣಿಕತೆಯಿಂದ ನಡೆದುಕೊಳ್ಳುವರೋ ಅಂಥವರನ್ನು ಧರ್ಮವು ಕಾಪಾಡುತ್ತದೆ, ರಕ್ಷಿಸುತ್ತದೆ. ಯಾರು ಅನ್ಯಾಯದಿಂದ, ಅಪ್ರಾಮಾಣಿಕತೆಯಿಂದ, ಅಸತ್ಯತೆಯಿಂದ ನಡೆಯುವರೋ ಅಂಥವರನ್ನು ಧರ್ಮ ರಕ್ಷಿಸದು. 'ಧರ್ಮ'ದ ಅರ್ಥವ್ಯಾಪ್ತಿ ವಿಶಾಲವಾದುದಾಗಿದೆ. ಅದು ಸಮಗ್ರ ಮನುಕುಲದ ಒಳಿತನ್ನು ಬಯಸುವ ಸದ್ಗುಣ ವಿಶೇಷವೇ ಆಗಿದೆಯೆಂದರೆ ಅತಿಶಯೋಕ್ತಿಯೇನಲ್ಲ.

ಮನುಕುಲದ ಕಲ್ಯಾಣಕ್ಕಾಗಿ, ಒಳಿತಿಗಾಗಿ, ಉದ್ಧಾರಕ್ಕಾಗಿ, ನಮ್ಮ ದೇಶದಲ್ಲಿ ಅನೇಕ ಧರ್ಮಗಳು ಹುಟ್ಟಿ ಬೆಳೆದಿವೆ. ಅಂಥವುಗಳಲ್ಲಿ ಹಿಂದೂ, ಬೌದ್ಧ, ಜೈನ, ಶೈವ, ವೀರಶೈವ, ವೈಷ್ಣವ, ಮುಸ್ಲಿಂ, ಸಿಖ್, ಇಸಾಯಿ, ಕ್ರೈಸ್ತ ಮುಂತಾದ ಧರ್ಮಗಳನ್ನು ಹೆಸರಿಸಬಹುದು. ಇವೆಲ್ಲವೂ ಮನುಕುಲದ ಒಳಿತಿಗಾಗಿ ಚಿಂತಿಸಿವೆ. ಸದ್ಗುಣ ವಿಶೇಷಗಳನ್ನು ಒಳಗೊಂಡ ಇವು ಸಮಾಜದ ಸ್ವಾಸ್ಥ್ಯಕ್ಕಾಗಿ ಪರಿಶ್ರಮಿಸಿವೆ. ಇವೆಲ್ಲ ಧರ್ಮಗಳ ಹುಟ್ಟಿಗೆ, ಬೆಳವಣಿಗೆಗೆ ಪ್ರಸಾರಕ್ಕಾಗಿ ಬುದ್ಧ, ಮಹಾವೀರ, ಕಬೀರ, ಬಸವಣ್ಣ, ಮಹಮ್ಮದ ಪೈಗಂಬರ, ಯೇಸುಕ್ರಿಸ್ತ, ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಗುರುನಾನಕರು ಮುಂತಾದ ಮಹಾಪುರುಷರು ಕಾರಣರಾಗಿದ್ದಾರೆ. ಇವರೆಲ್ಲರೂ ಧರ್ಮದ ಪ್ರವಾಹ ಚಿರಂತನವಾಗಿ ಪ್ರವಹಿಸಲು ಪ್ರೇರಣೆ ನೀಡುತ್ತ ಬಂದಿದ್ದಾರೆ. ಎಲ್ಲಾ ಧರ್ಮಗಳು ನದಿಗಳು ಇದ್ದ ಹಾಗೆ; ಎಲ್ಲಾ ನದಿಗಳು ಹೋಗಿ ಸಮುದ್ರವನ್ನು ಸೇರುವಂತೆ, ಎಲ್ಲಾ ಧರ್ಮಗಳು ಪರಮಾತ್ಮನ ಪಾದದಲ್ಲಿ ಲೀನಗೊಳ್ಳುವುವು.

ಮನುಷ್ಯನ ವ್ಯಕ್ತಿತ್ವವಿಕಸನಕ್ಕಾಗಿ, ಆತ್ಮೋದ್ಧಾರಕ್ಕಾಗಿ, ಜೀವನಸಾರ್ಥಕ್ಯಕ್ಕಾಗಿ ಎಲ್ಲಾ ಧರ್ಮಗಳು ವಿಧವಿಧದ ನಿಯಮ, ತತ್ವಗಳ ಆಚರಣೆಯನ್ನು ಹೊಂದಿವೆ. ಭಕ್ತನು ಭಗವಂತನ ಕೃಪೆಗೆ ಪಾತ್ರನಾಗಬೇಕಾದರೆ ಆತ ಭಕ್ತಿಮಾರ್ಗದಲ್ಲಿ ನಡೆಯಬೇಕಾಗುವುದು. ಎಲ್ಲಾ ಧರ್ಮಗಳಲ್ಲೂ ಭಕ್ತ ಇಲ್ಲವೆ ಜೀವಾತ್ಮ ಪರಮಾತ್ಮನಾಗಬೇಕಾದರೆ ಆತ ಸಾಧನೆಯ ಮಾರ್ಗದಲ್ಲಿ ಮುನ್ನಡೆಯಬೇಕಾಗುವುದು. ಅದನ್ನೇ ವಿದ್ವಾಂಸರು ಭಕ್ತಿಮಾರ್ಗ ಎನ್ನುವರು.

'ಭಕ್ತಿ' ಎಂಬ ಪದ ಭಜಿಸು, ಕೀರ್ತಿಸು ಎಂಬರ್ಥವನ್ನು ಹೊಂದಿದೆ. ಪರಮಾತ್ಮನನ್ನು ಭಜಿಸುವುದು, ಕೀರ್ತಿಸುವುದೇ ಭಕ್ತಿ. ಜೀವಾತ್ಮನು ಪರಮಾತ್ಮನ ಮೇಲೆ ಇಟ್ಟ ನಿಷ್ಠೆ, ಪ್ರೀತಿ-ವಿಶ್ವಾಸ, ಸ್ನೇಹ, ಸಲುಗೆ ಇವೇ ಭಕ್ತಿ ಎನ್ನಬಹುದು. ಭಕ್ತನು ಇಲ್ಲವೆ ಜೀವಾತ್ಮನು ನಿರ್ಮಲವಾದ ಮನಸ್ಸಿನಿಂದ, ನಿಷ್ಕಲ್ಮಶವಾದ ಹೃದಯದಿಂದ ತೋರಿಸುವ ವಿಶ್ವಾಸ ಇಲ್ಲವೇ

ನಿಷ್ಠೆಯೇ ಒಂದರ್ಥದಲ್ಲಿ ಭಕ್ತಿಯಾಗಿದೆ. ಆದರೆ ಇಂದು ಭಕ್ತಿ ಎಂಬುದು ತೋರುಂಬ ಲಾಭದಂತೆ ಆಗಿರುವುದನ್ನು ಗುರುತಿಸುವೆವು. ದೇವರಿಗೆ ಹರಕೆ ಹೊತ್ತು ತಲೆಯಲ್ಲಿನ ಕೂದಲು ಕೊಡುವುದು, ಕಾಯಿ ಒಡೆಯುವುದು, ಕುರಿ-ಕೋಳಿ-ಕೋಣ ಬಲಿ ಕೊಡುವುದು, ಸಿಡಿ ಆಡುವುದು, ಕಾಣಿಕೆ ನೀಡುವುದು ಇತ್ಯಾದಿ ಲೌಕಿಕ ವ್ಯವಹಾರದ ರೀತಿಯಲ್ಲಿ ನಡೆದುಕೊಳ್ಳುವುದು ನಿಜವಾದ ಭಕ್ತಿಯಲ್ಲ. ಇದೊಂದು ಬಗೆಯ ವ್ಯವಹಾರ ಇದ್ದಂತೆ ಆಗಿದೆ. ಭಕ್ತಿ ಎಂದೂ ವ್ಯವಹಾರ ಆಗದು. ಅದೊಂದು ಪರಿಶುದ್ಧವಾದ, ನಿರ್ಮಲವಾದ, ನಿಸ್ವಾರ್ಥ ಭಾವನೆಯಿಂದ ಪರಮಾತ್ಮನಿಗೆ ಭಕ್ತನು ತೋರಿಸುವ ಅಪರಿಮಿತವಾದ ವಿಶ್ವಾಸ ಆಗಿದೆ. ಭಕ್ತಿ ಅತ್ಯಂತ ಸೂಕ್ಷ್ಮವಾದುದು. ಅದನ್ನು ಇನ್ನೊಬ್ಬರು ನೋಡಲಿ ಎಂದು ಮಾಡುವಂಥದಲ್ಲ. ಎಷ್ಟೋ ಜನ ತಾವು ಮಾಡುವ ಭಕ್ತಿಯನ್ನು ಸಾರ್ವಜನಿಕವಾಗಿ ಪ್ರದರ್ಶಿಸಿಕೊಳ್ಳುವರು. ದೇವಾಲಯ, ದೇವರು ಹಾಗೂ ಸಂಸ್ಥೆಗಳಿಗೆ ದಾನಮಾಡುವ ಶ್ರೀಮಂತರು ಅಹಂಕಾರದಿಂದ, ಸ್ವಪ್ರತಿಷ್ಠೆಯಿಂದ ತಮ್ಮ ಹೆಸರು ಬರೆಸಿಕೊಳ್ಳುವುದುಂಟು. ತಾವು ದೇವರಿಗೆ ಇಂತಿಂಥ ವಸ್ತು, ಹಣ ನೀಡಿದೆವು ಎಂದು ಅಹಂಕರಿಸುತ್ತ ವಿಜೃಂಭಿಸುವುದುಂಟು. ಕೋಣೆಗಳನ್ನು ಕಟ್ಟಿಸಿಕೊಟ್ಟು ಅದರ ಮೇಲೆ ತಮ್ಮ ಹೆಸರು ಬರೆಸುವುದುಂಟು. ಇಂಥವರ ಭಕ್ತಿ ಡಂಭಾಚಾರದ್ದು, ತೋರಿಕೆಯದು. ಇಂಥದು ನಿಜವಾದ ಭಕ್ತಿಯಲ್ಲ. ಬಸವಣ್ಣನವರು ಹೇಳುವಂತೆ ಭಕ್ತಿಯೆಂಬುದು ಮಾಡಬಾರದು, ಅದು ಹೋಗುತ್ತ ಕೊಯ್ವ ಬರುತ್ತ ಕೊಯ್ವ ಗರಗಸದಂಥದು. ಅಂದರೆ ಅತ್ಯಂತ ಹರಿತವಾದುದು, ಸೂಕ್ಷ್ಮವಾದುದು. ಭಕ್ತಿ ಎಂಬುದು ಡೊಂಬ ತಂತಿಯ ಮೇಲೆ ನಡೆದಂತೆ. ಸ್ವಲ್ಪ ಆಯ ತಪ್ಪಿದರೆ, ಜೋಲಿ ಹೋದರೆ ಆತ ದೊಪ್ಪನೆ ಕೆಳಗೆ ಬೀಳುತ್ತಾನೆ. ಕೆಳಗೆ ಬೀಳದಂತೆ ಬಹಳ  ಜೋಕೆಯಿಂದ ಆತ ನಡೆಯಬೇಕಾಗುವುದು. ಹೀಗೆಯೇ ಭಕ್ತಿಯನ್ನು ಅತ್ಯಂತ ಜೋಕೆ ಮತ್ತು ತೂಕಗಳಿಂದ ಮಾಡಬೇಕು. ಮಾಡಿದ ಭಕ್ತಿ ಅತ್ಯಂತ ಗೌಪ್ಯವಾಗಿರಬೇಕು. ಯಾವುದೇ ಅಹಂಕಾರ, ಸ್ವಾರ್ಥ ಇಲ್ಲವೇ ವ್ಯಾಮೋಹದಿಂದ ಕೂಡಿರಬಾರದು. ಅದಕ್ಕೇ ಬಸವಣ್ಣನವರು ತಮ್ಮೊಂದು ವಚನದಲ್ಲಿ 'ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ, ಮಾಡಿದೆನೆನ್ನದಿರಾ ಮನವೆ, ನೀಡಿದೆನೆನ್ನದಿರಾ ಮನವೆ" ಎಂದುದುಂಟು. ಭಕ್ತಿಯನ್ನು ನಾವು ಇನ್ನೊಬ್ಬರು ನೋಡಲಿ, ನೋಡಿ ಹೊಗಳಲಿ ಎಂದು ಮಾಡುವಂಥದಲ್ಲ, ಮತ್ತು ಸ್ವಾರ್ಥ ಭಾವನೆಯಿಂದ ಸ್ವಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಮಾಡುವಂಥದಲ್ಲ. ಒಂದು ವೇಳೆ ನಾವು ಸ್ವಾರ್ಥ, ಸ್ವಹಿತ, ಸ್ವಪ್ರತಿಷ್ಠೆಗಳನ್ನು ಹೆಚ್ಚಿಸಿಕೊಳ್ಳಲು ದಾನ, ಧರ್ಮ ಮಾಡಿದೆವೆಂದರೆ ಅದು ಭಕ್ತಿಯೆನಿಸದು.

'ಭಕ್ತಿ' ಎಂಬುದು ಯಾವುದೇ ಫಲಾಪೇಕ್ಷೆಯನ್ನು ಇರಿಸಿಕೊಳ್ಳದೆ ನಿಸ್ವಾರ್ಥ, ನಿರಹಂಕಾರ, ನಿರ್ಮಮಕಾರ ಭಾವನೆಯಿಂದ ಮಾಡುವ ಪವಿತ್ರ ಆಚರಣೆಯಾಗಿದೆ. ಅದೊಂದು ಸದ್ಗುಣ ವಿಶೇಷವೇ ಆಗಿದೆಯೆಂದರೆ ಅತಿಶಯೋಕ್ತಿಯೇನಲ್ಲ. ಭಾರತದ ಎಲ್ಲಾ ಧರ್ಮಗಳಲ್ಲೂ ಭಕ್ತಿಯ ಆಚರಣೆ ಉಂಟು. ಭಕ್ತಿ ಎಂಬುದು ಒಳ್ಳೆಯ ಅರ್ಥ, ವಿಶಾಲ ದೃಷ್ಟಿಕೋನ,



ಮಾನವ ಕುಲಕೋಟಿಯ ಕಲ್ಯಾಣಗುಣಗಳನ್ನು ಹೊಂದಿರುವ ಸದ್ಗುಣವಿಶೇಷವಾಗಿದೆ.

ಭಕ್ತಿಯ ಆಚರಣೆಯ ವಿಧಗಳು, ಮಜಲುಗಳು ಆಯಾ ಧರ್ಮಗಳಲ್ಲಿ ವಿಭಿನ್ನವಾಗಿದ್ದರೂ, ಅವೆಲ್ಲವುಗಳ ಅಂತರಾರ್ಥ ಒಂದೇ ಆಗಿದೆ. ಭಕ್ತಿಯ ಪರಿಕಲ್ಪನೆ ಆಯಾ ಧರ್ಮಗಳಲ್ಲಿ ರೂಢಗೊಂಡ ಪರಿಯನ್ನಿಲ್ಲಿ ಅವಲೋಕಿಸಬಹುದು. ಹಿಂದೂಧರ್ಮ ವೇದಗಳ ಕಾಲದಿಂದಲೂ ಅಂದರೆ ಅನಾದಿಕಾಲದಿಂದಲೂ ಪ್ರಚಲಿತದಲ್ಲಿದ್ದಂಥದು. ಆರ್ಯರು-ದ್ರಾವಿಡರು ಸಿಂಧೂ ನದಿ ಕಣಿವೆಯ ಭಾಗದಲ್ಲಿ ಸಂಧಿಸಿದುದರ ನಿಮಿತ್ತ ಇದಕ್ಕೆ 'ಹಿಂದೂ ಧರ್ಮ' ಎಂಬ ಹೆಸರು ಪ್ರಾಪ್ತವಾಯಿತೆಂದು ಜನರ ನಂಬಿಕೆ. ಕ್ರಿ.ಪೂ. ನಾಲ್ಕನೇ ಶತಮಾನದಿಂದಲೂ ಇದರ ಅಸ್ತಿತ್ವ ಇತ್ತೆಂದು ಇತಿಹಾಸಕಾರರು ಅಭಿಪ್ರಾಯಪಡುವರು. ಈಗಿನ ಹಿಂದೂ ಧರ್ಮಕ್ಕೂ ವೈದಿಕ ಧರ್ಮಕ್ಕೂ ಅಲ್ಪಸ್ವಲ್ಪ ವ್ಯತ್ಯಾಸವಿದೆ. ಹಿಂದೂ ಧರ್ಮದ ಉಗಮವನ್ನು ವೇದಗಳಲ್ಲಿ ಕಾಣಬಹುದು. ಮೊದಲನೇ ವೇದವಾದ ಋಗ್ವೇದದಲ್ಲಿ ಹಿಂದೂಗಳು ಇಂದ್ರ, ಅಗ್ನಿ, ವಾಯು, ಸೋಮ, ವರುಣ, ಸೂರ್ಯ, ವಿಷ್ಣು, ರುದ್ರ, ಬೃಹಸ್ಪತಿ ಮುಂತಾದ ದೇವತೆಗಳನ್ನು ಪೂಜಿಸುವ, ಪ್ರಾರ್ಥಿಸುವ ಉಲ್ಲೇಖವಿದೆ. ಭಕ್ತಿಯಾಚರಣೆ ಋಗ್ವೇದದ ಕಾಲದಿಂದಲೂ ನಡೆದುಬಂದುದಾಗಿದೆ. ಮುಂದೆ ಬರಬರುತ್ತ ಭಕ್ತರು ದೇವಾನುದೇವತೆಗಳ ಒಲುಮೆಗಾಗಿ ಯಜ್ಞ-ಯಾಗಾದಿಗಳನ್ನು ಮಾಡತೊಡಗಿದರು. ಯಜ್ಞ-ಯಾಗಗಳನ್ನು ಮಾಡುವುದರ ಮೂಲಕ ದೇವಾನುದೇವತೆಗಳನ್ನು ತೃಪ್ತಿಪಡಿಸುವುದೇ ಅವರ ಉದ್ದೇಶವಾಗಿತ್ತು. ಆ ಮೂಲಕ ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುವುದೂ ಅವರ ಧ್ಯೇಯವಾಗಿದೆ. ಭಕ್ತಿಮಾರ್ಗಗಳಲ್ಲಿ ಪ್ರಮುಖವಾಗಿ ಮುಂದೆ ಮೂರು ಮಜಲುಗಳಾದುದನ್ನು ಕಾಣುವೆವು. ಅವು ಯಾವುವೆಂದರೆ ಕರ್ಮಮಾರ್ಗ, ಸನ್ಯಾಸಮಾರ್ಗ, ಜ್ಞಾನಮಾರ್ಗ. ಕರ್ಮಮಾರ್ಗವು ಯಜ್ಞಯಾಗಾದಿಗಳಿಗೆ ಪ್ರಾಶಸ್ತ್ಯ ನೀಡಿದರೆ, ಸನ್ಯಾಸಮಾರ್ಗವು ತಪಸ್ಸು ಮಾಡಿ ಶರೀರವನ್ನು ಸಂಣ್ಣಿಸಿ ವಾಂಛಿತ ಫಲಗಳನ್ನು, ಸುಖಸಂಪತ್ತನ್ನು ಪಡೆಯುವುದು ಈ ಮಾರ್ಗದ ಗುರಿಯಾಗಿದೆ. ಕಾಯವನ್ನು ದಂಡಿಸುವುದರಿಂದ ಆತ್ಮಶುದ್ಧಿಯಾಗಿ ದೈವಿಕ ಶಕ್ತಿ ಬೆಳೆಯುವುದು. ಹೆಚ್ಚೆಚ್ಚು  ದೇಹವನ್ನು ಸಂಣ್ಣಿಸಿದರೆ ಪರಮಾತ್ಮನ ಸಾನ್ನಿಧ್ಯವನ್ನು ಪಡೆಯಬಹುದೆಂದು ಈ ಮಾರ್ಗದವರ ನಂಬುಗೆ. ಜ್ಞಾನಮಾರ್ಗದವರು ಜ್ಞಾನಿಯಾದವನು ಮಾತ್ರ ದೇವರನ್ನು ಅರಿಯಲು ಶಕ್ತನಾಗುವನು ಎಂದು ತಿಳಿಯುವರು. ಜ್ಞಾನಿಯೇ ಸರ್ವಶ್ರೇಷ್ಠ; ಕರ್ಮ ಮತ್ತು ತಪಸ್ಸು ಜ್ಞಾನಪ್ರಾಪ್ತಿಗೆ ಸಾಧನಗಳು. ಶೈವ-ವೈಷ್ಣವ ಮತಗಳೆರಡು ಹಿಂದೂ ಧರ್ಮದ ಎರಡು ಗಾಲಿಗಳಿದ್ದಂತೆ.

ಶೈವಧರ್ಮವು ಅತ್ಯಂತ ಪ್ರಾಚೀನವಾದುದು. ಇದರ ಉಗಮವನ್ನು ವೇದಗಳ ಅನಂತರ ಶಿವಾಗಮಗಳಲ್ಲಿ ಗುರುತಿಸಿದ್ದುಂಟು. ವೇದಕಾಲದ ರುದ್ರನೇ ಮುಂದೆ ಶಿವನಾದನೆಂದು ಹೇಳುವುದುಂಟು. ಶಿವನು ದ್ರಾವಿಡರ ದೇವತೆಯೆಂದು ಕೆಲ ಪಂಡಿತರು ಅಭಿಪ್ರಾಯಪಡುವರು. ಶಿವನನ್ನು ಲಿಂಗರೂಪದಲ್ಲಿ ಕ್ರಿ.ಪೂ. ಒಂದನೇ ಶತಮಾನದಿಂದಲೂ ಪೂಜಿಸುತ್ತ ಬಂದುದುಂಟು. ಶೈವರು ಮೂಲತಃ ಸ್ಥಾವರಲಿಂಗವನ್ನು ಪೂಜಿಸುವರಾದರೂ ಲಿಂಗವನ್ನು

ದೇಹದ ಮೇಲೂ ಕೆಲವರು ಧರಿಸುತ್ತಿದ್ದರು ಎಂಬುದಕ್ಕೂ ನಿದರ್ಶನಗಳುಂಟು.

ಶೈವಧರ್ಮದಲ್ಲಿ ಪಾಶುಪತ, ಕಾಳಾಮುಖ, ಲಾಕುಳ ಹಾಗೂ ವೀರಶೈವ ಎಂಬ ಪ್ರಭೇದಗಳುಂಟು. ಪಾಶುಪತ ಪಂಥದಲ್ಲಿ ಪ್ರಪಂಚದ ಎಲ್ಲಾ ಜನರಿಗೆ ಪತಿ ಒಬ್ಬನೇ ಶಿವ. ಆತನನ್ನು ಒಲಿಸಲು ಭಕ್ತಿಮಾರ್ಗದಲ್ಲಿ ಜೀವಾತ್ಮರು ಮುನ್ನಡೆಯಬೇಕಾಗುವುದು.

ಶೈವಧರ್ಮಕ್ಕೆ ಮೂಲ ಶಿವಾಗಮಗಳೇ ಆಗಿವೆ. ಆಗಮಗಳು ಇಪ್ಪತ್ತೆಂಟು. ಇವುಗಳಲ್ಲಿ ಕ್ರಿಯಾಪಾದ, ಚರ್ಯಾಪಾದ, ಯೋಗಪಾದ ಹಾಗೂ ಜ್ಞಾನಪಾದ ಎಂಬ ನಾಲ್ಕು ಪಾದಗಳುಂಟು. ಕ್ರಿಯಾಪಾದದಲ್ಲಿ ಗುಡಿ ಕಟ್ಟಿಸುವುದು, ಮೂರ್ತಿ ನಿರ್ಮಿಸುವುದು. ಅವುಗಳ ಸ್ಥಾಪನೆ ನಡೆದರೆ, ಚರ್ಯಾಪಾದದಲ್ಲಿ ಗುಡಿಗಳಲ್ಲಿ ಸ್ಥಾಪನೆಗೊಂಡ ದೇವರುಗಳ ಪೂಜೆ ನಡೆಯುವುದು. ಯೋಗಪಾದದಲ್ಲಿ ಯೋಗಸಾಧನೆಯ ಮೂಲಕ ಭಕ್ತಿ, ಶ್ರದ್ಧೆ ತೋರಿಸಬಹುದೆಂದು ಹೇಳಿದೆ. ಜ್ಞಾನಪಾದದಲ್ಲಿ ವಿಶ್ವದ ಉತ್ಪತ್ತಿ, ಶಿವ-ಜೀವರ ಸಂಬಂಧ, ಜೀವಾತ್ಮನು ಮಲತ್ರಯಗಳಿಂದ ಮುಕ್ತನಾಗಿ ಶಿವಸಾರೂಪ್ಯ ಹೊಂದುವ ವಿಧಾನವನ್ನು ಹೇಳಿದೆ.

ಪಶು-ಪತಿ ತತ್ವ ಶೈವಧರ್ಮದಲ್ಲಿ ವ್ಯಾಪಕವಾಗಿ ಬಂದಿದೆ. ಜೀವರುಗಳು ತಮಗಂಟಿದ ಪಶುತನವನ್ನು ಕಳೆದುಕೊಂಡು ಭಕ್ತಿಯಾಚರಣೆಯಿಂದ ಪತಿಯಿಂದ ಅಂದರೆ ಶಿವನಿಂದ ಮುಕ್ತಿ ಪಡೆಯುವರು. ಪಶು-ಪತಿ-ಪಾಶ ಈ ಮೂರು ಪದಾರ್ಥಗಳನ್ನು ಶೈವರು ಒಪ್ಪುವರು. ಇವು ಮೂರು ನಿತ್ಯವಾದುವು. ಆದುದರಿಂದ ಇದು ಅದ್ವೈತ ಧರ್ಮವಲ್ಲ. ಶಿವ, ಶಿವನಿಂದಾದ ಸೃಷ್ಟಿ, ಸೃಷ್ಟಿಯಲ್ಲಿನ ಜೀವರು ಈ ಮೂವರು ನಿತ್ಯಸತ್ಯವೇ ಆಗಿದ್ದಾರೆ, ಎನ್ನುತ್ತದೆ ಶೈವ ಸಿದ್ಧಾಂತ.

ಶೈವ ಧರ್ಮದ ಶಾಖೆಗಳಲ್ಲೊಂದಾದ ವೀರಶೈವ ಅಥವಾ ಲಿಂಗಾಯತ ಧರ್ಮವು ವಿಶೇಷವಾಗಿ ಕರ್ನಾಟಕದಲ್ಲಿ ಪ್ರಚಾರ ಪಡೆದು ನೆಲೆಸಿವೆ. ಆಂಧ್ರ ತಮಿಳುನಾಡು ಮಹಾರಾಷ್ಟ್ರ ಇನ್ನಿತರೆಡೆಯೂ ಇದು ಕ್ವಚಿತ್ತಾಗಿ ನೆಲೆಸಿದೆ. ಇದರ ತತ್ವಗಳು ಘನವಾದುವಾಗಿವೆ. ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ಈ ಧರ್ಮ ಹೊಂದಿದೆ. ಶಿವನು ಸತ್ಯ, ಶಿವನಿಂದಾದ ಈ ಪ್ರಪಂಚವೂ ಸತ್ಯ. 'ಬ್ರಹ್ಮಸತ್ಯ ಜಗನ್ಮಿಥ್ಯಾ' ಎನ್ನುವ ತತ್ವವನ್ನು ಇದು ಒಪ್ಪದು. ಶಿವನಿಂದಾದ ಜಗತ್ತಿನಲ್ಲಿ ಶಿವನ ಅಂಶ ಇದ್ದೇ ಇರುತ್ತದೆ. ಬಂಗಾರದಿಂದಾದ ಒಡವೆಯಲ್ಲಿ ಹೇಗೆ ಬಂಗಾರದ ಅಂಶ ಇರುವುದೋ ಶಿವನಿಂದಾದ ಸೃಷ್ಟಿ ಹಾಗೂ ಸಕಲ ಜೀವರುಗಳಲ್ಲಿ ಶಿವನ ಅಂಶ ಇದ್ದೇ ಇರುತ್ತದೆ. ಎಲ್ಲಾ ಜೀವರುಗಳೂ ಭಕ್ತಿಸಾಧನೆಯಿಂದ ಶಿವನಾಗಬಲ್ಲರು ಎಂಬುದನ್ನು ಈ ಧರ್ಮ ಸಾರಿದೆ. ಮಾನವನೇ ಮಹಾಂತನಾಗಬಲ್ಲ ಹೇಗೆ ಬೀಜದಲ್ಲಿ ಮರವಾಗುವ ಶಕ್ತಿ ಇದೆಯೋ ಹಾಗೆ ಸಕಲ ಜೀವರುಗಳಲ್ಲಿ ದೇವನಾಗುವ. ದೇವತಾಸ್ವರೂಪದ ಅರಿವನ್ನು ಜಾಗೃತಗೊಳಿಸಿಕೊಳ್ಳುವ ಶಕ್ತಿ ಸಾಮರ್ಥ್ಯ ಇದೆ. ಆದರೆ ಆ ಶಕ್ತಿಯ ಸ್ವರೂಪಜ್ಞಾನವನ್ನು ಸಾಧನೆಯ ಮೂಲಕ ಅಂದರೆ ಭಕ್ತಿಮಾರ್ಗದ ಮೂಲಕ ಮುನ್ನಡೆದು ಸಾಧಿಸಿಕೊಳ್ಳಬೇಕು.



ವೀರಶೈವಧರ್ಮ ವಿಶ್ವಧರ್ಮ. ವಿಶಾಲ ಮನೋಭಾವದ ತತ್ವಗಳನ್ನು ಒಳಗೊಂಡ ಸಹಜ ಧರ್ಮವೆಂಬ ಖ್ಯಾತಿಗೆ ಭಾಜನವಾಗಿದೆ. ಲಿಂಗ, ಮತ, ಜಾತಿ, ತಾರತಮ್ಯ, ಮೌಢ್ಯ ಇತ್ಯಾದಿಗಳ ಹಂಗು ಹರಿದುಕೊಂಡು ಈ ಧರ್ಮ ಸಹಜವೂ, ಸ್ವಾಭಾವಿಕವೂ ಆದುದಾಗಿದೆ. ಈ ಧರ್ಮದ ತತ್ವಗಳನ್ನು ಯಾರೂ ಅನುಷ್ಠಾನದಲ್ಲಿ ತರಬಹುದಾಗಿದೆ. ಶಿವ ಬೇರೆ, ಜೀವ ಬೇರೆ ಎಂಬ ಭಾವ ಪ್ರಾಥಮಿಕ ಹಂತದಲ್ಲಿ ಬಂದರೂ, ಕ್ರಮಕ್ರಮವಾಗಿ ಭಕ್ತಿಸಾಧನೆಯಲ್ಲಿ ಜೀವಾತ್ಮ ತೊಡಗಿಕೊಂಡಾಗ ಎರಡೂ ಅಭಿನ್ನವಾದುವು ಎಂಬ ಭಾವ ಬಲಿಯತೊಡಗುವುದು. ಇಲ್ಲಿ ಶಿವ ಬೇರೆ, ಜೀವ ಬೇರೆ; ಜೀವ ಎಂದೂ ಶಿವನಾಗಲು ಸಾಧ್ಯ ಇಲ್ಲ ಎಂಬ ಭಾವನೆ ಇಲ್ಲ. ಮತ್ತು ಗುರುವಿನ ಗುಲಾಮನಾಗುವ ತನಕ ಮುಕ್ತಿ ಇಲ್ಲ ಎಂಬ ಭಾವನೆಗೂ ಅವಕಾಶವಿಲ್ಲ. ಮುಕ್ತವಾದ ರೀತಿಯಲ್ಲಿ ನಿರ್ಮಲವಾದ ಭಾವನೆಯಿಂದ ಯಾರೂ ಭಕ್ತಿಸಾಧನೆಯಲ್ಲಿ ತೊಡಗಬಹುದು. ಆದರೆ ಭಕ್ತಿ ಎಂಬುದು ಮನಃಪೂರ್ವಕವಾಗಿ ನಡೆಯುವಂಥ ಪವಿತ್ರ ಆಚರಣೆಯಾಗಿದೆ.

ಭಕ್ತಿಯ ಪರಿಕಲ್ಪನೆ ವೀರಶೈವ ಧರ್ಮದಲ್ಲಿ ವಿನೂತನವಾದುದಾಗಿದೆ. ಇಲ್ಲಿ ಭಕ್ತ ಯಾವುದೋ ಸ್ವಾರ್ಥ, ಸ್ವಹಿತ, ಸ್ವಲಾಭ ದೃಷ್ಟಿಗಳನ್ನು ಇರಿಸಿಕೊಂಡು ಭಕ್ತಿಯನ್ನು ಮಾಡುವಂತಿಲ್ಲ. ಹೀಗೆ ಮಾಡಿದರೆ ಅದು ಫಲ ನೀಡದು. ಭಕ್ತಿ ಎಂಬುದು ಭಕ್ತನು ಪರಮಾತ್ಮನಲ್ಲಿ ತೋರುವ ನಿರ್ಮಲವಾದ ಪ್ರೇಮ, ಅಚಲ ನಿಷ್ಠೆ ವಿಶ್ವಾಸವೇ ಆಗಿದೆ. ದೃಢ ಮನಸ್ಸಿನಿಂದ ತನ್ನ ಚಿತ್ತವನ್ನು ಪರಮಾತ್ಮನಲ್ಲಿ ಏಕಾಗ್ರಗೊಳಿಸಿಕೊಂಡು ಮಾಡುವ ಪವಿತ್ರ ಪ್ರಕ್ರಿಯೆಯಾಗಿದೆ. ಡೊಂಬ ತಂತಿಯ ಮೇಲೆ ಜೋಕೆ ತೂಕಗಳೊಂದಿಗೆ ಕೆಳಗೆ ಬೀಳದಂತೆ ಹೇಗೆ ನಡೆಯುವನೋ ಹಾಗೆ ನಡೆಯಬೇಕಾಗುವುದು. ಪಾಚಿಗಟ್ಟಿದ ಕಲ್ಲಿನ ಮೇಲೆ ಆಯತಪ್ಪಿ ಬೀಳದಂತೆ ನಿಲ್ಲುವ ಪ್ರಕ್ರಿಯೆಯಂಥದು. ಭಕ್ತ ಷಟ್‌ಸ್ಥಲ ತತ್ವಕ್ಕನುಗುಣವಾದ ರೀತಿಯಲ್ಲಿ ಹಂತಹಂತವಾಗಿ ಆಚರಣೆಗೆ ತನ್ನನ್ನು ಒಗ್ಗಿಸಿಕೊಳ್ಳಬೇಕಾಗುವುದು. ಭಕ್ತಸ್ಥಲದಲ್ಲಿ ಜೀವಾತ್ಮ ತಾನು, ತನ್ನದು ಎಂಬ ಅಹಂಕಾರ, ಮಮಕಾರಗಳನ್ನು ತ್ಯಜಿಸಿ ಸದಾಚಾರದ ಸನ್ಮಾರ್ಗದಲ್ಲಿ ನಡೆಯಬೇಕು. ಹೀಗೆ ನಡೆದಾಗ ಆತನಲ್ಲಿ ಭಕ್ತಿನಿಷ್ಠೆ ಬಲಿಯುವುದು. ಹೀಗೆ ನಿಷ್ಠೆ ಗಟ್ಟಿಗೊಳ್ಳುವುದೇ ಮಾಹೇಶ್ವರ ಸ್ಥಲ. ಈ ಸ್ಥಲದಲ್ಲಿ ಆತ ಪ್ರಪಂಚದ ಯಾವುದೇ ಆಗುಹೋಗುಗಳಿಗೆ ಹೆದರನು. ಪರಮಾತ್ಮನಿಗೆ ಆಹ್ವಾನ ನೀಡುವ ಎಂಥ ಕಠಿಣ ಸಮಸ್ಯೆಗಳು ಎದುರಾದರೂ ಅವನ್ನು ಪರಿಹರಿಸುವ ಶಕ್ತಿ, ಸಾಮರ್ಥ್ಯ ಆತನಲ್ಲಿ ಅಳವಡುವುದು. ಮುಂದೆ ಆತ ಪ್ರಸಾದಕಾಯನಾಗುವನು. ಇಡೀ ಪ್ರಪಂಚವನ್ನೇ ಆತ ಭಗವಂತನ ಪ್ರಸಾದರೂಪವಾಗಿ ಕಾಣುವನು. ಆತನ ದೃಷ್ಟಿ ಪಾವನವಾಗುವುದು. ಪವಿತ್ರವಾಗುವುದು. ದೃಷ್ಟಿಯಂತೆ ಸೃಷ್ಟಿ ಎನ್ನುವ ಹಾಗೆ ಆತ ನೋಡುವ ದೃಷ್ಟಿ ವಿಶಾಲವೂ ಪವಿತ್ರವೂ ಆಗುವುದು. ಜಗತ್ತೇ ಆತನಿಗೆ ಶಿವನ ಪ್ರಸಾದದಂತೆ ಗೋಚರವಾಗುವುದು. ತನ್ಮೂಲಕ ಆತನ ಕಾಯ ಪ್ರಸಾದಕಾಯವಾಗುವುದು. ಮುಂದೆ ಆತನಲ್ಲಿ ಯೌಗಿಕ ಶಕ್ತಿ ಅಳವಡುವುದೇ ಪ್ರಾಣಲಿಂಗಿ ಸ್ಥಲ. ಈ ಸ್ಥಲದಲ್ಲಿ ಆತನು ತನ್ನ ದೃಷ್ಟಿಯನ್ನು

ಶಿವನ ಮೇಲೆ ಅಂದರೆ ಲಿಂಗದ ಮೇಲೆ ಏಕಾಗ್ರಗೊಳಿಸುವನು. ಚಿತ್ತದ ಏಕಾಗ್ರತೆಯಿಂದ ಆತ ಅಂತರ್ಮುಖಿಯಾಗುವನು. ಯೌಗಿಕ ಶಕ್ತಿಯಿಂದ ಆತನಲ್ಲಿ ಶಿವಶಕ್ತಿ ಸಂಚಯಗೊಳ್ಳತೊಡಗುವುದು. ಮುಂದೆ ಆತ ಶರಣನಾಗುವನು. ಶರಣಸ್ಥಲದಲ್ಲಿ ಆತ ಸ್ಥಿತಪ್ರಜ್ಞನೇ ಆಗುವನು. ಆತನಿಗೆ ಸುಖವೇ ಬರಲಿ ದುಃಖವೇ ಬರಲಿ ಎರಡನ್ನೂ ಸಮಸ್ಥಿತಿಯಲ್ಲಿ ನಿರ್ವಿಕಾರ ಭಾವನೆಯಿಂದ ಸ್ವೀಕರಿಸುವ ಶಕ್ತಿ ಆತನಿಗೆ ಬರುವುದು. ಕಮಲ ಕೆಸರಿನಲ್ಲಿ ಬೆಳೆದರೂ ಆ ಕೆಸರಿನ ಹೊಲಸನ್ನು ಹೇಗೆ ಅಂಟಿಸಿಕೊಳ್ಳುವುದಿಲ್ಲವೋ ಹಾಗೆ ಶರಣರು ಈ ಪಂಕದೋಪಾದಿ ಸಮಾಜದ ಮಧ್ಯೆ ಹುಟ್ಟಿ ಬೆಳೆದರೂ ಅದನ್ನು ಲವಲೇಶವೂ ಅಂಟಿಸಿಕೊಳ್ಳದೆ ಸುತ್ತಣ ಪರಿಸರಕ್ಕೆ ಒಳ್ಳೆಯದನ್ನೇ ನೀಡುವರು. ಈ ಅವಸ್ಥೆಯಲ್ಲಿ ಆತ ಪರಮಾತ್ಮನ ಚಿಂತನೆಯ ನಿಬ್ಬೆರಗಿನ ಸ್ಥಿತಿಯಲ್ಲಿರುವನು. ಮುಂದಿನದೇ ಐಕ್ಯಸ್ಥಲ. ಇಲ್ಲಿ ಆಲಿಕಲ್ಲು ಕೂಡಿಸಿ ತಿಕ್ಕಿದಾಗ ಹೇಗೆ ಕರಗಿ ನೀರಾಗುವುದೋ ಹಾಗೆ ಜೀವ ಶಿವರ ಮಿಲನದಿಂದ ಅಂದರೆ ಐಕ್ಯದಿಂದ ದ್ವೈತಭಾವ ಅಳಿದು ಒಂದೇ ಆಗುವುದು. ಅಹಂ ಬ್ರಹ್ಮಾಸ್ಮಿ - ನಾನೇ ದೇವರು - ತನ್ನರಿವೇ ತನಗೆ ಗುರು. ಮಾನವನೇ ಮಹಾಂತನಾಗುವ ಸ್ಥಿತಿಗೆ ಭಕ್ತ ತಲುಪುವನು. ತಾನೇ ಶಿವನಾಗುವ ಅವಕಾಶ ವೀರಶೈವಧರ್ಮದಲ್ಲಿರುವುದು ಅತ್ಯಂತ ವಿಶಿಷ್ಟವಾಗಿದೆ. ಭಕ್ತಿಸಾಧನೆಯ ಮೂಲಕ ಪ್ರತಿಯೊಬ್ಬರೂ ಶಿವನಾಗುವ ಅವಕಾಶವಿದೆಯೆಂದು ವೀರಶೈವ ಧರ್ಮ ಸಾರಿದೆ. ಆದರೆ ಅದನ್ನು ಪವಿತ್ರವಾದ ಭಕ್ತಿಸಾಧನೆಯಿಂದ ಸಾಧಿಸಿಕೊಳ್ಳಬಹುದಾಗಿದೆ.

ಭಕ್ತಿ ಎಂಬುದು ಪರಮಾತ್ಮನ ಮೇಲಿಟ್ಟ ಪವಿತ್ರವಾದ ನಿರ್ಮಲವಾದ ಪ್ರೇಮವೇ ಆಗಿದೆ. ಭಕ್ತಿಯಲ್ಲಿ ಅನೇಕ ಮಜಲುಗಳುಂಟು. ಅವುಗಳಲ್ಲಿ ಜ್ಞಾನ, ಕ್ರಿಯೆ, ಮಧುರಭಾವ, ಸತಿ-ಪತಿಭಾವ ಮುಂತಾದ ಸ್ತರಗಳನ್ನು ಗುರುತಿಸಬಹುದು. ಭಕ್ತಿಸ್ಥಲದಲ್ಲಿ ತತ್ವಜಿಜ್ಞಾಸೆಯ ಜ್ಞಾನಮಾರ್ಗ, ಕ್ರಿಯಾಚರಣೆಯ ಕರ್ಮಮಾರ್ಗ ಹಾಗೂ ಉಪಾಸನೆಯ ಭಕ್ತಿಮಾರ್ಗ ಇವು ಮುಪ್ಪುರಿಗೊಂಡುದನ್ನು ಗುರುತಿಸುವೆವು.

'ಭಕ್ತಿ' ಎಂಬುದು ಒಂದು ಸದ್ಗುಣ. ಪರಮಾತ್ಮನ ಮೇಲಿರಿಸಿದ ಅಚಲ ವಿಶ್ವಾಸ, ಶ್ರದ್ಧೆ, ನಿಷ್ಠೆಗಳೇ ಭಕ್ತಿ. ಈ ಶ್ರದ್ಧೆ ಅಂಧಶ್ರದ್ಧೆಯಲ್ಲ. ಅಜ್ಞಾನದಿಂದ ಪ್ರೇರಿತವಾದಂಥದೂ ಅಲ್ಲ. ಶುದ್ಧವಾದ ಮಾನವಾಂತಃಕರಣದಿಂದ ಮೂಡಿ ನಿಂತ ಶ್ರದ್ಧೆಯೇ ಆಗಿದೆ. ಇಲ್ಲಿ ಕುರುಡು ನಂಬಿಕೆಗೆ ಸ್ಥಾನವಿಲ್ಲ. ಭಕ್ತನಲ್ಲಿ ಕ್ರಮಕ್ರಮೇಣ ಪರಮಾತ್ಮನ ಬಗ್ಗೆ ವಿಶ್ವಾಸ ಬೆಳೆಯಬೇಕು. ವಿಶ್ವಾಸ ಬೆಳೆಸುವುದೇ ಭಕ್ತಿಮಾರ್ಗ. ಭಕ್ತನು ನಂಬಿ ಕರೆದರೆ ಶಿವ ಓಗೊಡುವನು. ಶಿವನು ಡಂಭಾಚಾರದ ಭಕ್ತಿಗೆ ಒಲಿಯನು. ಅವನು ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ, ಭಕ್ತಿಪ್ರಿಯನು. ಇಂಥ ಭಕ್ತಿ ಪ್ರೇಮಪೂರಿತವಾದುದು, ನಿಸ್ವಾರ್ಥದಿಂದ ಕೂಡಿದಂಥದ್ದು.

ಭಕ್ತಿಯ ಪರಿಕಲ್ಪನೆ ಹಾಗೂ ಅದರ ಸ್ವರೂಪಗಳ ಪರಾಮರ್ಶೆಯನ್ನೊಳಗೊಂಡ ಆದಯ್ಯನ ವಚನವೊಂದನ್ನಿಲ್ಲಿ ನೋಡಬಹುದು.



ಶಿವಭಕ್ತಿ ಎಂಬುದು, ಮುಕ್ತಿಯ ಪರಿಯಂತಲ್ಲ
ಮೂಗರು ಕಂಡ ಕನಸಿನಂತಿಪ್ಪುದು ಕಾಣಿರೋ
ಹೇಳಿ ಕೇಳಿ ಮಾಡುವುದು ಯುಕ್ತಿ ಭಕ್ತಿ
ಸಾಧಕನಿಂದ ಮಾಡುವುದು ಅಭ್ಯಾಸ ಭಕ್ತಿ
ಮನ ಕೂರ್ತು ಮಾಡುವುದು ಮುಕ್ತಿ ಭಕ್ತಿ
ಇದ್ದಂತಿದ್ದು ನಿಜವಪ್ಪುದು ನಿಜಭಕ್ತಿ
ಈ ನಿಜಭಕ್ತಿಯಲ್ಲಿ ಭರಿತರು ಸೌರಾಷ್ಟ್ರಸೋಮೇಶ್ವರಾ ನಿಮ್ಮ ಶರಣರು

ಭಕ್ತನಾದವನು ಬೆಟ್ಟಗುಡ್ಡಕ್ಕೇನೂ ಹೋಗಬೇಕಾಗಿಲ್ಲ. ಈ ಪ್ರಪಂಚ, ಸಂಸಾರವನ್ನು ಸಂಪೂರ್ಣವಾಗಿ ತ್ಯಜಿಸಬೇಕಾಗಿಲ್ಲ. ಪೂಜೆ ಪುನಸ್ಕಾರಗಳನ್ನು ಆಡಂಬರದಿಂದ ಮಾಡಬೇಕಾಗಿಯೂ ಇಲ್ಲ. ತಾನು ಸಹಜವಾಗಿ ಎಲ್ಲರಂತೆ ಸಮಾಜದಲ್ಲಿದ್ದುಕೊಂಡು ನಿಜವಾದ ಭಕ್ತಿಯಾಚರಣೆಯನ್ನು ಮಾಡುತ್ತ ಹೋಗಬೇಕು. ಗುರು ಕೊಟ್ಟ ಇಷ್ಟಲಿಂಗವನ್ನು ದೇಹದ ಮೇಲೆ ಧರಿಸಿ ಪೂಜೆ ಮಾಡುತ್ತ, ಕಾಯಕ ಮಾಡುತ್ತ ನಡೆಯಬೇಕು. ಕಾಯಕದಿಂದ ಬಂದ ಧನ ಧಾನ್ಯವನ್ನು ದಾಸೋಹಕ್ಕಾಗಿ ವಿನಿಯೋಗಿಸಬೇಕು. ಪ್ರಸಾದವನ್ನು ಎಲ್ಲರೊಂದಿಗೆ ಹಂಚಿಕೊಂಡು ಸ್ವೀಕರಿಸುವ ವಿಶಾಲ ಮನೋಭಾವವನ್ನು ಭಕ್ತ ಬೆಳೆಸಿಕೊಳ್ಳಬೇಕು. ಇದೇ ನಿಜವಾದ ಭಕ್ತಿಯಾಗಿದೆ.

ಇಂಥ ಭಕ್ತಿಯನ್ನು ಎಲ್ಲರಿಗೂ ಸುಲಭವಾಗಿ ಸಾಧಿಸಲಿಕ್ಕೆ, ಮಾಡಲಿಕ್ಕೆ ಆಗದು. ಅತ್ಯಂತ ಶ್ರದ್ಧೆ, ನಿಷ್ಠೆಯಿಂದ ಇದನ್ನು ಆಚರಣೆಯಲ್ಲಿ ತರಬೇಕು. ಹಾಗೆ ಮಾಡುವಾಗ ಮೊದಮೊದಲು ಅನೇಕ ಅಡ್ಡಿ ಆತಂಕ ಅಡಚಣೆ ಆಲಸ್ಯಭಾವಗಳು ಸಾಮಾನ್ಯವಾಗಿ ತಲೆದೋರುವುವು. ಇದನ್ನು ಪರಿಭಾವಿಸಿ ಬಸವಣ್ಣನವರು ತಮ್ಮ ವಚನವೊಂದರಲ್ಲಿ ಭಕ್ತಿಯ ಪರಿಯು "ಮೊದಲ ದಿನ ಹಣೆ ಮುಟ್ಟಿ, ಮರುದಿನ ಕೈಯ ಮುಟ್ಟಿ, ಮೂರೆಂಬ ದಿನಕ್ಕೆ ತೂಕಡಿಕೆ ಕಾಣಿರಣ್ಣಾ" ಎಂದು ನುಡಿದುದನ್ನಿಲ್ಲಿ ಸ್ಮರಿಸಬಹುದು. ಅಂದರೆ ನಿರಂತರ ಭಕ್ತಿಯಾಚರಣೆ ಮಾಡುವುದು ಕಠಿಣವಾದುದು ಎಂದರ್ಥ. ಇದನ್ನು ಮನೋದಾರ್ಢ್ಯದಿಂದ, ಏಕಾಗ್ರಚಿತ್ತದಿಂದ, ನಿಷ್ಠೆಯಿಂದ ಮಾಡಬೇಕಾಗುವುದು. ಭಕ್ತನಲ್ಲಿ ಮೊದಲು ಅರ್ಪಣಾಮನೋಭಾವ, ಶರಣಾಗತ ಭಾವನೆ, ನಿರ್ಮಮಕಾರ, ವಿಶಾಲ ಮನೋಭಾವ, ಸದಾಚಾರ ಸದ್ವರ್ತನೆ ಸನ್ನಡತೆ ಇವೆಲ್ಲ ಅಳವಡಬೇಕು. ಒಟ್ಟಿನಲ್ಲಿ ಭಕ್ತನಿಗೆ ಶಿವನಿಷ್ಠೆ ಮುಖ್ಯವಾಗಿ ಬೇಕು. "ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿದ್ದಡೇನು ಅದು ಪಟ್ಟಣವೆನಿಸುವುದು. ನಿಷ್ಠೆ ಇಲ್ಲದ ಭಕ್ತ ಪಟ್ಟಣದಲ್ಲಿದ್ದರೂ ಅದು ನಟ್ಟಡವಿ ಎನ್ನಿಸುವುದು". ಇಲ್ಲಿ ಭಕ್ತಿಸಾಧನೆಯ ಬಗ್ಗೆ ವ್ಯಕ್ತಗೊಂಡ ವಿಚಾರಗಳು ಅತ್ಯಂತ ಮೌಲಿಕವಾದುವಾಗಿವೆ.

ವೈಷ್ಣವಧರ್ಮವನ್ನು ಪ್ರಚುರಪಡಿಸಿದ ಶ್ರೀರಾಮಾನುಜಾಚಾರ್ಯರು ಭಕ್ತಿಗೆ ಕರ್ಮಯೋಗ ಮತ್ತು ಜ್ಞಾನಯೋಗ ಎರಡೂ ಮುಖ್ಯವೇ ಎನ್ನುವರು. ಭಕ್ತಿಯೋಗವನ್ನು ಈ ಕೆಳಗಿನ ನಿಯಮ ವ್ರತಗಳಿಂದ ಸಾಧಿಸಬಹುದೆನ್ನುವರು.

1. ಶುದ್ಧ ಮತ್ತು ನಿಷಿದ್ಧವಲ್ಲದ ಆಹಾರದಿಂದ ಶರೀರವನ್ನು ಶುದ್ಧ ಮಾಡಿಕೊಳ್ಳುವುದು 2. ಬ್ರಹ್ಮಚರ್ಯ 3. ಸತತೋದ್ಯೋಗ 4. ಪಂಚ ಮಹಾಯಜ್ಞಗಳನ್ನು ಶಕ್ತ್ಯನುಸಾರ ಮಾಡುವುದು 5. ಸತ್ಯ, ಪ್ರಾಮಾಣಿಕತೆ, ದಯೆ, ಅಹಿಂಸೆ, ದಾನ ಮೊದಲಾದ ಸದ್ಗುಣಗಳನ್ನು ಅಳವಡಿಸಿಕೊಳ್ಳುವುದು 6. ನಿರಾಶನಾಗದಿರುವಿಕೆ ಮತ್ತು ಆಶಾವಾದಿತ್ವ 7. ನಿರ್ಗರ್ವಿತ್ವ.

ಈ ಏಳೂ ಪ್ರಕಾರದ ಗುಣಸ್ವಭಾವಗಳನ್ನು ಹೊಂದಿದ ಭಕ್ತರು ದೇವರನ್ನು ಪ್ರತ್ಯಕ್ಷವಾಗಿ ಕಾಣಲು ಸಾಧ್ಯವೆನ್ನುವರು. ಮತ್ತು ಮನಸ್ಸಿನಲ್ಲಿ ದೇವರನ್ನು ನೆಲೆಗೊಳಿಸಿಕೊಂಡು ಭಕ್ತಿ ಮಾರ್ಗವನ್ನು ಹೀಗೆ ಸಾಧಿಸಬಹುದೆನ್ನುವರು.

ವೈಷ್ಣವಧರ್ಮದಲ್ಲಿ ದೇವರನ್ನು ಹೀಗೆ ಕಾಣಬಹುದೆಂದು ಹೇಳಿದರೂ ವೀರಶೈವಧರ್ಮದಲ್ಲಿ ಹೇಳಿದಂತೆ ಕೊನೆಗೆ ಭಕ್ತನೇ ದೇವರಾಗುವ ಸ್ಥಿತಿಗೆ ತಲುಪುತ್ತಾನೆಂದು ಹೇಳಿದುದನ್ನು ಹೇಳಿಲ್ಲ. ಭಕ್ತ ವೈಷ್ಣವಧರ್ಮದ ಪ್ರಕಾರ ಭಕ್ತನಾಗಿಯೇ ಉಳೀತಾನೆ, ದೇವನಾಗಲಾರ. ಆತ ವಿಷ್ಣುವನ್ನು ಹದಿನಾರು ರೀತಿಯಲ್ಲಿ ಪೂಜಿಸುವನು: 1. ಸ್ಮರಣ 2. ನಾಮೋಚ್ಚಾರಣೆ 3. ನಮಸ್ಕಾರ 4. ಪಾದವನ್ನು ಮರೆಹೋಗುವುದು 5. ಸತತ ಭಕ್ತಿಯಿಂದ ಪೂಜೆ ಮಾಡುವುದು 6. ಪ್ರಪತ್ತಿ 7. ಶ್ರವಣ 8. ಸೇವೆ 9. ಶಂಖ, ಚಕ್ರ ಮೊದಲಾದ ವಿಷ್ಣುವಿನ ಆಯುಧಗಳನ್ನು ದೇಹದ ಮೇಲೆ ಧರಿಸುವುದು 10. ಊರ್ಧ್ವಪುಂಡ್ರಧಾರಣೆ 11. ಹಾಗೆ ಧರಿಸುವಾಗ ಮಂತ್ರಗಳನ್ನು ಉಚ್ಛರಿಸುವುದು 12. ಹರಿಯ ಪಾದತೀರ್ಥವನ್ನು ಸೇವಿಸುವುದು 13. ಹರಿಯ ಪ್ರಸಾದವನ್ನು ಸೇವಿಸುವುದು 14. ಹರಿಯ ಭಕ್ತರ ಸೇವೆ ಮಾಡುವುದು 15. ಏಕಾದಶಿ ಉಪವಾಸ ಮಾಡುವುದು 16. ಹರಿಗೆ ತುಲಸಿ ಪತ್ರವನ್ನು ಏರಿಸುವುದು.

ವೈಷ್ಣವ ಸಂಪ್ರದಾಯಗಳಲ್ಲಿ ದ್ವೈತಮತ ಬ್ರಹ್ಮಸಂಪ್ರದಾಯಕ್ಕೆ ಸೇರಿದೆ. ಇದು ಭಕ್ತಿ ಮಾರ್ಗದ ಪಂಥ. ಇದನ್ನು ಮಧ್ವಾಚಾರ್ಯರು ಸ್ಥಾಪಿಸಿದರು. ಮಾಧ್ವಮತ ಕರ್ನಾಟಕದಲ್ಲಿ ಹುಟ್ಟಿದಂಥದು. ಇದರ ತತ್ವಗಳು ಹೀಗಿವೆ: ಹರಿಯೇ ಪರಬ್ರಹ್ಮನು. ಜಗತ್ತು ಸತ್ಯವಾದುದು. ಜೀವಾತ್ಮರೆಲ್ಲ ಪರಮಾತ್ಮನ ಸೇವಕರು, ದಾಸರು. ಇವರೆಂದೂ ಪರಮಾತ್ಮ ಆಗಲಾರರು. ಎಷ್ಟೇ ಭಕ್ತರಾದರೂ ಆತನ ಕರುಣೆಗೆ ಪಾತ್ರರಾಗರು. ನಿರ್ಮಲವಾದ ಭಕ್ತಿಯೇ ಮುಕ್ತಿಗೆ ಸಾಧನ. ಪ್ರತ್ಯಕ್ಷ, ಅನುಮಾನ, ಆಗಮಗಳೆಂದು ಮೂರೇ ಪ್ರಮಾಣಗಳು. ಮಾಧ್ವಮತದ ತತ್ವಗಳನ್ನು ಹರಿದಾಸರು ತಮ್ಮ ಕೀರ್ತನೆ ಸುಳಾದಿಗಳ ಮೂಲಕ ಪ್ರಚಾರ ಮಾಡಿದರು. ವೀರಶೈವ ಶರಣರಂತೆ ಇವರೂ ಸಾಮಾನ್ಯ ಜನರೊಡನೆ ಬೆರೆತು "ಭಗವಂತನು ಒಬ್ಬನೇ, ಆತ ಪರಮ ದಯಾಳು, ಎಲ್ಲರಿಗೂ ತಂದೆಯಾಗಿರುವನು. ಎಲ್ಲರನ್ನೂ ಒಂದೇ ದೃಷ್ಟಿಯಲ್ಲಿ ನೋಡುವನು. ಆತನಲ್ಲಿ ಅಚಲವಾದ ಭಕ್ತಿಯನ್ನಿಟ್ಟು ಈಶ್ವರಾರ್ಪಣಬುದ್ಧಿಯಿಂದ ಸಂಸಾರವನ್ನು ಮಾಡಬೇಕು" ಎಂದು ಬೋಧಿಸಿದರು.

ಹರಿದಾಸರಲ್ಲಿ ದಾಸಕೂಟ, ವ್ಯಾಸಕೂಟ ಎಂಬೆರಡು ಪರಂಪರೆಗಳಿವೆ. ದಾಸಕೂಟವು ದಾಸರು ಮಾಧ್ವಮತದ ತತ್ವಗಳನ್ನು ಕನ್ನಡದಲ್ಲಿ ಹೇಳಿದರೆ, ಸಂಸ್ಕೃತ ಗ್ರಂಥ ಓದಿದ ವಿದ್ವಾಂಸರು ವ್ಯಾಸಕೂಟದವರು. ಇವೆರಡಕ್ಕೂ ಸೇರದೆ ಎಲ್ಲ ಮಾನವರಿಗೆ ತತ್ವಗಳನ್ನು



ಹೇಳಿದವರು ಪುರಂದರರು, ಕನಕದಾಸರು, ವಾದಿರಾಜರು, ಶ್ರೀಪಾದರಾಯರು ಮೊದಲಾದವರು.

ಹರಿದಾಸ ಪರಂಪರೆಯಲ್ಲಿ ಕನಕದಾಸರು ವಿಶಿಷ್ಟರಾಗಿ ಎದ್ದು ಕಾಣುವರು. ಉಡುಪಿಯ ಶ್ರೀಕೃಷ್ಣನನ್ನು ನಿರ್ಮಲ ಭಕ್ತಿಯಿಂದ ಭಜಿಸಿ ಪ್ರತ್ಯಕ್ಷಮಾಡಿಕೊಂಡವರು. ಯಾವುದೇ ಜಾತಿ-ಭೇದ ಮಾಡದೇ ಮನುಕುಲದ ಒಳಿತಿಗಾಗಿ ಭಕ್ತಿಮಾರ್ಗವನ್ನು ಬೋಧಿಸಿದವರು. ಕೀರ್ತನೆಗಳನ್ನು ರಚಿಸಿದವರು. ಇವರು ಜಾತಿಯಿಂದ ಹಂಡೆಕುರುಬರೆಂದು ಕೆಲವರು ಹೇಳುವರು. ವ್ಯಾಸರಾಯರ ಶಿಷ್ಯರಾದ ಇವರು ಕರ್ನಾಟಕವನ್ನೆಲ್ಲ ಸಂಚರಿಸಿದವರು. ಕೆಲಕಾಲ ಉಡುಪಿಯಲ್ಲಿದ್ದರು. ಇವರ ಕೀರ್ತನೆಗಳು ಅತ್ಯಂತ ಪ್ರಸಿದ್ಧಿ ಪಡೆದಿವೆ. ಮಾನವಕುಲಕ್ಕೆ ಒಳ್ಳೆಯ ದಾರಿದೀಪದಂತಿವೆ. ಕುಲದ ಮೇಲು-ಕೀಳು, ಮೌಢ್ಯ ಮುಂತಾದ ತಾರತಮ್ಯಭಾವವನ್ನು ಹೋಗಲಾಡಿಸಿ ಸಮಾಜದಲ್ಲಿ ಸಮಾನತೆ ತರುವಲ್ಲಿ ಇವರ ಕೀರ್ತನೆಗಳು ಮಹತ್ವದ ಪಾತ್ರ ವಹಿಸಿವೆ. ಕನಕದಾಸರು ಶ್ರೇಷ್ಠ ಭಕ್ತರು. ತಮ್ಮ ನಿರ್ಮಲವಾದ ಭಕ್ತಿಯಿಂದ ಉಡುಪಿಯ ಶ್ರೀಕೃಷ್ಣನ ದರ್ಶನವನ್ನು ತಾವಿದ್ದಲ್ಲಿಯೇ ಪಡೆದ ಮಹಾನುಭಾವರು.

ಅದ್ವೈತಮತದ ಪ್ರತಿಪಾದಕರಾದ ಶ್ರೀ ಶಂಕರಾಚಾರ್ಯರು ಇದನ್ನು ಶಾಶ್ವತಗೊಳಿಸಿದರು. ಅದ್ವೈತಮತವು ತುಂಬ ಪ್ರಾಚೀನವಾದುದು. ಜೈನ, ಬೌದ್ಧ ತತ್ವಗಳ ಪ್ರಭಾವ ಜನರ ಮೇಲೆ ಹೆಚ್ಚಾಗಿ ಆಗಿ ಅದ್ವೈತ ಸಿದ್ಧಾಂತವನ್ನು ಮರೆಯತೊಡಗಿದಾಗ ಪುನಃ ಶಂಕರಾಚಾರ್ಯರು ಇದನ್ನು ಬೆಳಕಿಗೆ ತಂದರು. ಇದು ಶಾಶ್ವತವಾಗಿ ನೆಲೆನಿಲ್ಲುವಂತೆ ಶ್ರಮಿಸಿದುದನ್ನು ಇತಿಹಾಸದಿಂದ ತಿಳಿಯುವೆವು. ಈ ಧರ್ಮವು 'ಬ್ರಹ್ಮಸತ್ಯ, ಜಗನ್ಮಿಥ್ಯಾ' ಎಂದು ಸಾರುತ್ತದೆ. ದೇವನೊಬ್ಬನೇ ಸತ್ಯ, ಆತನಿಂದಾದ ಜಗತ್ತು ಮಿಥ್ಯೆ, ಮಾಯೆ ಎನ್ನುತ್ತದೆ. ಜೀವಾತ್ಮ ಎಂದೂ ಪರಮಾತ್ಮನಾಗಲಾರ ಎಂದು ದ್ವೈತಮತ ಸಾರುತ್ತದೆ; ಅದ್ವೈತವು ಪರಮಾತ್ಮವೊಂದೇ ಸತ್ಯ, ಆತನಿಂದಾದ ಪ್ರತಿಛಾಯೆಯ ರೂಪದ ಜಗತ್ತು ಮಿಥ್ಯೆ ಆಗಿದೆ, ಕನಸು ಆಗಿದೆಯೆನ್ನುವುದು. ಇನ್ನು ವೀರಶೈವವು ಜೀವಾತ್ಮ-ಪರಮಾತ್ಮ ಇಬ್ಬರೂ ಸತ್ಯ, ಜೀವ-ಜಗತ್ತು-ಈಶ್ವರ ಈ ಮೂರು ಸತ್ಯವಾದುದೆಂದು ಹೇಳುವುದರ ಜೊತೆಗೆ ಜೀವಾತ್ಮನೇ ಭಕ್ತಿಮಾರ್ಗದಲ್ಲಿ ಮುನ್ನಡೆದು ಪರಮಾತ್ಮನಾಗುತ್ತಾನೆಂದು ಹೇಳುವುದು.

ಜೈನಧರ್ಮವು ಒಂದು ಸರ್ವತಂತ್ರ ಧರ್ಮವಾಗಿ ಬೆಳೆದು ಬಂದಿದೆ. ದೇಹಯುಕ್ತ ಆತ್ಮನಿಗೆ ಈ ಧರ್ಮದಲ್ಲಿ ದೇಹಿನ್ ಎನ್ನುವರು. ದೇಹಿ ಪರಿಪೂರ್ಣನಿರುವುದಿಲ್ಲ. ಆದರೆ ಪೂರ್ಣನಾಗಬಲ್ಲ. ಕರ್ಮಮಲವನ್ನು ನಿವಾರಿಸಿಕೊಂಡ ಶುದ್ಧವಾದ ದೇಹಿ ಸರ್ವಜ್ಞನೂ ಅನಂತಸುಖಿಯೂ ಆಗಬಲ್ಲನು. ಜೈನ ಧರ್ಮದಲ್ಲಿ ಮುಕ್ತಿಯನ್ನು ಪಡೆಯುವುದಕ್ಕೆ ಮಾನವನಿಗೆ ಸ್ವಾತಂತ್ರ್ಯವಿದೆ. ಆದರೆ ಭಕ್ತಿಮಾರ್ಗದಲ್ಲಿ ಆತ ಮುನ್ನಡೆಯುವುದು ತೀರ ಕಷ್ಟ. ಏಕೆಂದರೆ ದೇಹವನ್ನು ದಂಡಿಸುವುದರ ಮೂಲಕ, ಆಶೆಗಳನ್ನು ದಮನಿಸುವುದರ ಮೂಲಕ, ಉಪವಾಸ ವ್ರತಗಳನ್ನು ಮಾಡುವುದರ ಮೂಲಕ ದೇವನ ಸಾನ್ನಿಧ್ಯ ಪಡೆಯಬಹುದೆಂದು ಜೈನ ಧರ್ಮ ಹೇಳುತ್ತದೆ. ಸಮ್ಯಕ್‌ಜ್ಞಾನ, ಸಮ್ಯಕ್‌ದರ್ಶನ ಹಾಗೂ ಸಮ್ಯಕ್‌ಚಾರಿತ್ರಗಳು ಜೀವನಿಗೆ ಮೋಕ್ಷವನ್ನು ಒದಗಿಸಿಕೊಡುವುದರಲ್ಲಿ ಉಪಯುಕ್ತವಾಗುವುವು.

ಜೈನಧರ್ಮದಲ್ಲಿ ಕರ್ಮಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇದೆ. ಜೀವನಿಗೆ ಕರ್ಮವು ಜನ್ಮಾಂತರಗಳನ್ನು ಕಲ್ಪಿಸಿಕೊಡುವುದು. ಜೀವನು ತಾನು ಮಾಡಿದುದನ್ನು ಭೋಗಿಸಲೇಬೇಕು. ಇತರ ಧರ್ಮಗಳಲ್ಲಿಯಂತೆ ದೇವರು ಕರುಣಿಸಿ ಜೀವನನ್ನು ಕರ್ಮಬಂಧನದಿಂದ ಬಿಡಿಸುವುದು ಜೈನಧರ್ಮದಲ್ಲಿ ಇಲ್ಲ. ಜೀವನೇ ಕರ್ಮವನ್ನು ಸಂಪೂರ್ಣವಾಗಿ ಗೆಲ್ಲಬೇಕು. ಇದು ಜೈನಧರ್ಮದ ವೈಶಿಷ್ಟ್ಯ. ಆತ್ಮನು ಮುಕ್ತನಾಗಬೇಕಾದರೆ ಭಕ್ತಿಮಾರ್ಗದಲ್ಲಿ ಮುನ್ನಡೆದು ಹದಿನಾಲ್ಕು ಸ್ಥಾನಗಳನ್ನು ಏರಬೇಕಾಗುವುದು. ಅವು ಹೀಗಿವೆ: 1. ಮಿಥ್ಯಾತ್ವ 2. ಸಾಸದನ 3. ಮಿಶ್ರ 4. ಅವಿರತ ಸಮ್ಯಕ್ತ್ವ 5. ದೇಶವಿರತ 6. ಪ್ರಮತ್ತವಿರತ 7. ಅಪ್ರಮತ್ತವಿರತ, 8. ಅಪೂರ್ವಕರಣ 9. ಅನಿವೃತ್ತಿಕರಣ 10. ಸೂಕ್ಷ್ಮಸಂಪರಾಯ 11. ಉಪಶಾಂತಮೋಹ 12. ಕ್ಷೀಣಮೋಹ 13. ಸಯೋಗ ಕೇವಲಿನ್ 14. ಅಯೋಗ ಕೇವಲಿನ್.

ಬೌದ್ಧಧರ್ಮ ನಿರೀಶ್ವರಧರ್ಮವೆಂದೇ ಖ್ಯಾತಿ ಹೊಂದಿದೆ. ಬುದ್ಧನಿಂದ ಪ್ರಚಾರ ಪಡೆದ ಇದು ಜಗತ್ತಿನಾದ್ಯಂತ ವ್ಯಾಪಿಸಿದ ದೊಡ್ಡ ಧರ್ಮವಾಗಿದೆ. ಮೂರ್ತಿಪೂಜೆಯನ್ನು ನಿಷೇಧಿಸಿದ ಈ ಧರ್ಮವು ವ್ಯಕ್ತಿಗೆ ಗೌರವ ನೀಡಿದೆ. ಜಾತಿ ಮತ ಪಂಥಗಳ ಎಲ್ಲೆಯನ್ನು ಇದು ಮೀರಿ ಬೆಳೆದಿದೆ. ಬುದ್ಧನ ಮರಣಾನಂತರ ಆತನ ಬೋಧೆಗಳನ್ನು ತ್ರಿಪಿಟಕಗಳಲ್ಲಿ ಸಂಗ್ರಹಿಸಲಾಗಿದೆ.

ಬುದ್ಧನಿಗೆ ಜೀವಾತ್ಮ, ಪರಮಾತ್ಮ, ಜಗತ್ತು ಇವು ಮಹತ್ವದವು ಎನ್ನಿಸಲಿಲ್ಲ. ಇವುಗಳಲ್ಲಿ ಆತನಿಗೆ ನಂಬಿಕೆಯಿರಲಿಲ್ಲ. ದುಃಖದಿಂದ ಕೂಡಿದ ಈ ಪ್ರಪಂಚದಿಂದ ಹೇಗೆ ಪಾರಾಗಬೇಕೆಂಬ ಒಂದೇ ಪ್ರಶ್ನೆ ಆತನನ್ನು ಕಾಡುತ್ತಿತ್ತು. ಇದಕ್ಕೆ ಕ್ರಮೇಣ ಆತನೇ ಉತ್ತರಿಸುವನು. ಶಾಶ್ವತವಾದುದಾವುದೂ ಪ್ರಪಂಚದಲ್ಲಿಲ್ಲ. ಚೇತನಾಚೇತನ ವಸ್ತುಗಳಲ್ಲಿ ದ್ರವ್ಯ ಇರದು. ಎಲ್ಲವೂ ಕ್ಷಣಿಕ, ನಶ್ವರ. ಆದ್ದರಿಂದ ಬುದ್ಧನಿಗೆ ದುಃಖ ಅನಿತ್ಯ ಹಾಗೂ ವ್ಯತಿರಿಕ್ತ ಎಂಬ ಮೂರೇ ವಿಶ್ವದಲ್ಲಿ ಕಂಡುವು. ಜೀವಾತ್ಮ ಇಲ್ಲವೇ ಇಲ್ಲ. ಚೇತನಾಯುಕ್ತ ಜೀವಿಯ ಶರೀರ ಪಂಚಸ್ಕಂದಗಳಿಂದ ಕೂಡಿದೆ. ಅವು – 1. ರೂಪ 2. ವೇದನಾ 3. ಸಂಜ್ಞೆ 4. ಸಂಸ್ಕಾರ 5. ವಿಜ್ಞಾನ. ಇವಕ್ಕೆ ನಾಮರೂಪವೆನ್ನುವರು.

ಬೌದ್ಧರು ನಿರ್ವಾಣಮಾರ್ಗವನ್ನು ಬೋಧಿಸಿದರು. ನಿರ್ವಾಣವೆಂದರೆ ಪೂರ್ಣವಾಗಿ ಇಲ್ಲದಂತಾಗುವುದು. ಪಣತಿಯಲ್ಲಿ ಎಣ್ಣೆ ಇರುವವರೆಗೆ ದೀಪ ಉರಿಯುವುದು. ಎಣ್ಣೆ ತೀರಿದಾಗ ದೀಪವು ನಂದಿಹೋಗುವುದು. ಪುನಃ ಹಚ್ಚಿದರೂ ಉರಿಯದು. ಕರ್ಮವನ್ನೂ ಅದರಿಂದಾದ ದುಃಖವನ್ನೂ ನೀಗಿದ ಅರುಹಂತನು ನಂದಿಹೋದ ದೀಪದಂತೆ ಇರುವನು. ಇದೇ ನಿರ್ವಾಣಬುದ್ಧನಂತೆ ಜೀವಿಸಿರುವಾಗ ನಿರ್ವಾಣವನ್ನು ಪಡೆಯುವುದು ಮಾನವನಿಗೆ ಸಾಧ್ಯವಿದೆ. ಬೌದ್ಧ ಪಂಡಿತರು ಈ ತತ್ವಗಳನ್ನೇ ಹೇಳುತ್ತ ಬಂದರು. ಮುಂದೆ ಬೌದ್ಧ ಧರ್ಮದಲ್ಲಿ ಹೀನಯಾನ ಮತ್ತು ಮಹಾಯಾನ ಎಂಬೆರಡು ಪಂಥಗಳು ಬೆಳೆದುವು. ಹೀನಯಾನ ಹಳೆ ಬೌದ್ಧ ಧರ್ಮ ಕುರಿತಾಗಿ ಹೇಳಿದರೆ, ಮಹಾಯಾನ ಹೊಸದು. ಹಿಂದೂ ಧರ್ಮದ ಪ್ರಭಾವದಿಂದ ಬರಬರುತ್ತ ಬುದ್ಧನೂ ದೇವನಾದನು. ಈತನ ಪೂಜೆಯನ್ನು ಜನ ಮಂತ್ರ



ತಂತ್ರ ಮೊದಲಾದವುಗಳಿಂದ ಹಿಂದೂ ದೇವತೆಗಳ ಪೂಜೆಯಂತೆ ಮಾಡುತ್ತ ಬಂದುದನ್ನು ಗುರುತಿಸುವೆವು. ಮಹಾಯಾನ ಪಂಥವು ಹಿಂದೂ ಧರ್ಮದ ಪ್ರತಿಬಿಂಬವಾಗಿದೆ. ಹಿಂದೂ ದೇವತೆಗಳ ಬದಲು ಇದರಲ್ಲಿ ಬೌದ್ಧ ದೇವತೆಗಳ ಉಪಾಸನೆಯನ್ನು ಅಳವಡಿಸಲಾಗಿದೆ. ಬುದ್ಧನು ವಿಷ್ಣುವಿನ ಅವತಾರವೆಂದೂ ಬರಬರುತ್ತ ಜನ ಉಪಾಸಿಸುತ್ತ, ಭಕ್ತಿ ತೋರಿಸುತ್ತ ಬಂದುದುಂಟು. ಆದರೆ ಈ ಧರ್ಮ ಭಾರತದಲ್ಲಿ ಉಳಿಯಲಿಲ್ಲ. ಅನಂತರ ಇದು ತನ್ನ ಅಸ್ತಿತ್ವವನ್ನು ಇಲ್ಲವಾಗಿಸಿಕೊಂಡಿತು. ಇದೀಗ ಬುದ್ಧನ ಆರಾಧನೆ, ಸ್ತೂಪ, ಮಂದಿರಗಳನ್ನು ನಿರ್ಮಿಸುವುದರ ಮೂಲಕ ಭಾರತದಲ್ಲಿ ಬೌದ್ಧಧರ್ಮದ ಅನುಯಾಯಿಗಳು, ಭಕ್ತರು ಬೆಳೆಯುತ್ತಿದ್ದಾರೆ. ಅದರ ಪ್ರಚಾರ ವಿಧವಿಧವಾಗಿ ನಡೆದಿದೆ.

ಕ್ರೈಸ್ತ ಧರ್ಮ ಜಾಗತಿಕ ಧರ್ಮವಾಗಿದ್ದು, ಇದರ ಅನುಯಾಯಿಗಳು ಪ್ರಪಂಚದಲ್ಲೆಲ್ಲ ವ್ಯಾಪಿಸಿದ್ದಾರೆ. 1800 ವರ್ಷಗಳ ಹಿಂದೆಯೇ ಈ ಧರ್ಮ ಭಾರತವನ್ನು ಪ್ರವೇಶಿಸಿ ಭಾರತದಲ್ಲಿ ಕ್ರಮಕ್ರಮೇಣ ಚೆನ್ನಾಗಿ ಬೆಳೆದಿದೆ. ಯೇಸು ಈ ಧರ್ಮದ ಸ್ಥಾಪಕನಾಗಿದ್ದು, ಆತನ ಸುವಾರ್ತೆಗಳು ಈ ಧರ್ಮದಲ್ಲಿವೆ. ಆತನ ಮರಣಾನಂತರ ಆತನ ಶಿಷ್ಯರಾದ ಮ್ಯಾಥ್ಯೂ, ಮಾರ್ಕ್, ಲ್ಯೂಕ್ ಹಾಗೂ ಜಾನ್ ಎಂಬ ಸಿದ್ಧರು (Saints) ಯೇಸುವಿನ ಸುವಾರ್ತೆಗಳನ್ನು ಜನರಿಗೆ ತಲುಪಿಸಿದರು. ಯೇಸು ಹೊಸ ಧರ್ಮವನ್ನಾಗಲೀ, ತತ್ವಗಳನ್ನಾಗಲೀ ಹೇಳಬೇಕೆಂದು ಹೇಳಿಲ್ಲ. ಆ ಕಾಲದ ಜನತೆಯಲ್ಲಿ ರೂಢಿಯಲ್ಲಿದ್ದ ಜೀವ, ಜಗತ್ತು, ದೇವರು ಈ ವಿಚಾರಗಳಿಗೆ ಪುಷ್ಟಿ ಕೊಟ್ಟಿದ್ದಾನೆ. ದೇವರು ನಿರಾಕಾರಿ, ಚೈತನ್ಯಸ್ವರೂಪ, ಪರಿಪೂರ್ಣ, ಅಚಿಂತ್ಯ, ಶಾಶ್ವತನು ಎಂದೆಲ್ಲ ಹೇಳುವುದರ ಮೂಲಕ ಆತನ ಸ್ವರೂಪವನ್ನು ತಿಳಿಸಿದ್ದಾನೆ. ದೇವರು ಸರ್ವಾಂತರ್ಯಾಮಿ, ಸರ್ವಶಕ್ತ, ವಿಕಾರರಹಿತ, ಜ್ಞಾನಮಯ, ಸ್ವಯಂಭೂ, ಕರುಣಾಮಯಿ ಎಂದೆಲ್ಲ ಆತನ ಗುಣ ಸ್ವಭಾವವನ್ನು ಹೇಳಿದ್ದು, ವೀರಶೈವ ಧರ್ಮದ ತತ್ವಗಳನ್ನೇ ಹೋಲುತ್ತದೆ. ಯೇಸು ದೇವರ ಮಗ, ಕ್ರೈಸ್ತರು ದೇವರು, ದೇವರ ಮಗ ಪವಿತ್ರಾತ್ಮ ಎಂದು ಈ ಮೂರನ್ನು ಕ್ರೈಸ್ತರು ನಂಬುವರು.

ಕ್ರೈಸ್ತ ಧರ್ಮದಲ್ಲಿ ಭಕ್ತ ಮತ್ತು ನೈತಿಕ ಆಚರಣೆಗಳು ತುಂಬ ಮಹತ್ವ ಪಡೆದಿವೆ. ಕ್ರೈಸ್ತರು ಆತ್ಮ ಅಮರವೆನ್ನುವರು. ಅದು ಕಣ್ಣಿಗೆ ಕಾಣದಿದ್ದರೂ ಅದರಲ್ಲಿ ಅವರ್ಣನೀಯವಾದ ಶಕ್ತಿ ಅಡಕವಾಗಿದೆಯೆನ್ನುವರು. ಆ ಶಕ್ತಿಯ ಸಾಧನೆಗಾಗಿ ಭಕ್ತಿಯನ್ನು ಆಚರಿಸಬೇಕು. ಈರ್ಷ್ಯೆ, ಅಸೂಯೆ, ನಿಂದೆ, ಅಹಂಮನ್ಯತೆ ಮೊದಲಾದವು ಪಾಪಕೃತಗಳಾಗಿವೆ. ಇವುಗಳಿಂದ ಯಾರು ದೂರ ಇರುವರೋ ಅವರು ದೇವರ ಪ್ರೀತಿಗೆ ಪಾತ್ರರಾಗುವರು. ಅವರೇ ನಿಜವಾದ ಭಕ್ತರು. ಈ ಧರ್ಮದಲ್ಲಿ, ಪಾಪಕೃತ್ಯಗಳನ್ನು ಮಾಡದೆ ದೇವರಲ್ಲಿ ನಿರ್ಮಲ ಪ್ರೀತಿ ತೋರಿಸುವುದೇ ಭಕ್ತಿಯಾಗಿದೆ. ಭಕ್ತಿಯ ಪರಿಕಲ್ಪನೆ ಕ್ರೈಸ್ತರಲ್ಲಿ ವಿನೂತನವಾದುದಾಗಿದೆ.

ಇಸ್ಲಾಂ ಧರ್ಮ ಮಹಮ್ಮದ್ ಪೈಗಂಬರ್ ಅವರಿಂದ ರೂಪುಪಡೆದು ಪ್ರಪಂಚದಾದ್ಯಂತ ಇಂದು ತನ್ನ ನೆಲೆಯನ್ನು ಕಂಡುಕೊಂಡಿದೆ. ಇಸ್ಲಾಂ ಎಂದರೆ ಶಾಂತಿಯನ್ನು ನೆಲೆಗೊಳಿಸುವ ಧರ್ಮ ಎಂಬರ್ಥವುಂಟು.

ಇಸ್ಲಾಂ ಏಕದೇವೋಪಾಸನೆಯ ಪಂಥ. ದೇವರು ಒಬ್ಬನೇ, ಆತನಲ್ಲಿ ಅಚಲ ನಂಬಿಕೆ ಇಡಬೇಕು. ಕುರಾನ್ ಅನ್ನು ದೇವರ ವಾಕ್ಯವೆಂದು ನಂಬಬೇಕು ಎನ್ನುತ್ತದೆ ಇಸ್ಲಾಂ ಧರ್ಮ. ಪ್ರಾರ್ಥನೆ, ಉಪವಾಸ, ತೀರ್ಥಯಾತ್ರೆಗಳನ್ನು ಮುಸ್ಲಿಮರು ಕಡ್ಡಾಯವಾಗಿ ಮಾಡಬೇಕು. ತಾಯಿ-ತಂದೆಗಳನ್ನು ದೇವರೆಂದು ಗೌರವಿಸಬೇಕು. ಅಲ್ಲಾನ ಹೊರತು ಯಾರನ್ನೂ ಪೂಜಿಸಬಾರದೆಂದು ಇಸ್ಲಾಂ ಧರ್ಮ ಹೇಳುತ್ತದೆ. ದಾನಧರ್ಮ ಮಾಡುವುದು, ದಾಸರನ್ನು ಸೇವಕರನ್ನು ದಾಸ್ಯದಿಂದ, ಸಾಲಗಾರರನ್ನು ಸಾಲದಿಂದ ಮುಕ್ತಗೊಳಿಸಿ ಕರುಣೆ ತೋರಿಸುವುದು, ಹಸಿದು ಬಂದವರಿಗೆ ಊಟಕ್ಕೆ ನೀಡುವುದು, ಪ್ರಾರ್ಥನೆ (ನಮಾಜ) ಮಾಡುವುದು ಇಸ್ಲಾಂ ಧರ್ಮದಲ್ಲಿ ಕಡ್ಡಾಯವಾಗಿದೆ. ಈ ನಿಯಮಗಳನ್ನು ಪಾಲಿಸುವುದೇ ಭಕ್ತಿಯಾಚರಣೆಯಾಗಿದೆ. ಅಲ್ಲಾನನ್ನು ಒಲಿಸುವ ದಾರಿಯಾಗಿದೆ.

ಇಸ್ಲಾಂ ಧರ್ಮದಲ್ಲಿ ಭಕ್ತಿಯ ಪರಿಕಲ್ಪನೆ ತುಂಬ ಸರಳವಾಗಿದೆ. ಎಲ್ಲರೂ ಈ ಮಾರ್ಗವನ್ನು ಅನುಸರಿಸಬಹುದಾಗಿದೆ. ಈ ಧರ್ಮದಲ್ಲಿ ಗೃಹಸ್ಥರು ಹೆಂಡತಿ ಮಕ್ಕಳನ್ನು ತ್ಯಜಿಸಿ ಬೆಟ್ಟಗುಡ್ಡಕ್ಕೆ ಹೋಗಿ ತಪಸ್ಸು ಮಾಡಬೇಕೆಂದು ಹೇಳಿಲ್ಲ. ಸಂಸಾರ ಮಾಡುತ್ತಲೇ ಅಲ್ಲಾನ ಸಾನ್ನಿಧ್ಯವನ್ನು ಪಡೆಯಬಹುದೆಂದು ಹೇಳಿದೆ. ದೇವರ ಮೇಲೆ ಪರಿಶುದ್ಧ ಭಕ್ತಿಯನ್ನಿರಿಸಿ ತಾವು ಮಾಡುತ್ತಿರುವ ಕೆಲಸದಲ್ಲಿ ತೃಪ್ತಿ ಪಡಬೇಕು. ಅಂದರೆ ಕಾಯಕದಿಂದ ಬಂದುದರಲ್ಲಿ ಕೆಲ ಭಾಗವನ್ನು ದಾಸೋಹ ಮಾಡಬೇಕು ಎಂಬರ್ಥ. ಹಸಿದು ಬಂದವರಿಗೆ ಉಣಲಿಕ್ಕುವುದೇ ಅಂದರೆ ಪ್ರಸಾದವನ್ನು ನೀಡುವುದೇ ಪವಿತ್ರವಾದ ಧರ್ಮವೆಂದೂ ಪವಿತ್ರವಾದ ಭಕ್ತಿಯೆಂದೂ ಇಸ್ಲಾಂ ಧರ್ಮ ಸಾರುತ್ತದೆ. ಮೆಕ್ಕ, ಮದೀನಾ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವುದು ಇಸ್ಲಾಂ ಧರ್ಮದಲ್ಲಿ ಭಕ್ತಿಮಾರ್ಗದ ಅಂಗವಾಗಿ ಆಚರಿಸುವ ಆಚರಣೆಯಾಗಿದೆ. ಆದರೆ ತೀರ್ಥಕ್ಷೇತ್ರಗಳಿಗೆ ಯಾತ್ರೆ ಕೈಗೊಳ್ಳುವುದನ್ನು ವೀರಶೈವಧರ್ಮ ವಿರೋಧಿಸುತ್ತದೆ. ಭಕ್ತನ ಅಂಗಳವೇ ವಾರಣಾಸಿ, ಭಕ್ತನಿದ್ದ ಠಾವೇ ದೇವಲೋಕವೆಂದು ಸಾರುತ್ತದೆ. ಭಕ್ತಿಯಾಚರಣೆ ಆಯಾ ಧರ್ಮದಲ್ಲಿ ಭಿನ್ನ ಭಿನ್ನವಾಗಿರುವುದಕ್ಕೆ ಇಂಥ ಅನೇಕ ನಿದರ್ಶನಗಳನ್ನು ಕೊಡಬಹುದು.

□

ಮೂಲದ್ವಾರದ ಬೇರ ಮೆಟ್ಟಿ ಭೂಮಂಡಲವನೇಱಿದೆ
ಆಚಾರದ ಬೇರ ಹಿಡಿದು, ಐಕ್ಯದ ತುದಿಯನೇಱಿದೆ
ವೈರಾಗ್ಯದ ಸೋಪಾನದಿಂದ ಶ್ರೀಗಿರಿಯನೇಱಿದೆ
ಕೈವಿಡಿದು ತೆಗೆದುಕೊಳ್ಳಾ, ಚನ್ನಮಲ್ಲಿಕಾರ್ಜುನಾ.

**ಅಕ್ಕಮಹಾದೇವಿ**

# ಶ್ರೀ ಜಚನಿಯವರ ವಚನಗಳಲ್ಲಿ ಸಾರ್ವಕಾಲಿಕ ಪ್ರಜ್ಞೆ

**ಡಾ. ರಾಜಶೇಖರ ಜಮದಂಡಿ**

12 ನೆಯ ಶತಮಾನದಲ್ಲಿ ಅತಿ ಹುಲುಸಾಗಿ ಬೆಳೆದಿದ್ದ 'ವಚನ' ಪ್ರಕಾರವು 21ನೇ ಶತಮಾನದಲ್ಲಿಯೂ ಸಹ ಅನೇಕ ಆಧುನಿಕ ವಚನಕಾರರಿಂದ ಅತ್ಯಂತ ಸಮೃದ್ಧವಾಗಿ ಬೆಳೆಯುತ್ತಾ ಸಾಗಿದೆ. ಸಮಸ್ತ ಅನುಭವಸಾರವನ್ನು ಸೂತ್ರಪ್ರಾಯವಾಗಿ ನಾಲ್ಕು ವಾಕ್ಯಗಳಲ್ಲಿ ಅಡಗಿಸಿ, ಚಿರಸ್ಮರಣೀಯವಾದ ರೀತಿಯಲ್ಲಿ ನಿರೂಪಿಸುವ ವೈಖರಿಯು ಭಾರತೀಯರಿಗೆ ಹೊಸದಲ್ಲ. ಅದರಲ್ಲೂ ಕನ್ನಡಿಗರಿಗೆ ಕಿಂಚಿತ್ತೂ ಸಾಹಸವೇನಲ್ಲ. ಕನ್ನಡಕ್ಕೆ ಈ 'ವಚನ' ಸಂಪ್ರದಾಯವನ್ನು ತಂದು ಅದನ್ನು ಅನ್ಯಾದೃಶವಾಗಿ ಬೆಳೆಸಿದ ಕೀರ್ತಿ ಅಂದಿನ ವಚನಕಾರರಂತೆ ಇಂದಿನ ವಚನಕಾರರಿಗೂ ಸಲ್ಲುತ್ತದೆ. ಈ ಶತಮಾನದಲ್ಲಿ ವಚನ ಸಾಹಿತ್ಯದ ಕೃಷಿಯನ್ನು ಅತ್ಯಂತ ಮೌಲ್ಯಯುತವಾಗಿ, ಅರ್ಥವತ್ತಾಗಿ ಹೆಚ್ಚಿನ ಸಂಖ್ಯೆಯಲ್ಲಿ ರಚಿಸಿರುವುದಲ್ಲದೆ ಆ ಮೂಲಕ ಈ ಪ್ರಕಾರವು ಇನ್ನಷ್ಟು ಬಲಗೊಳ್ಳುವಂತೆ ಮಾಡಿರುವವರು ಶ್ರೀಮನ್ನಿಡುಮಾಮಿಡಿ ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರ 1008 ಜಗದ್ಗುರು ಶ್ರೀ ಚನ್ನಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು ಎಂದರೆ ಅತಿಶಯೋಕ್ತಿಯಾಗಲಾರದು. ಇವರು ನಿಡುಮಾಮಿಡಿ ಗುರುಪೀಠ ಪರಂಪರೆಯಲ್ಲಿ ಮೂವತ್ತೊಂದನೆಯ ಪೀಠಾಧಿಕಾರಿಗಳಾಗಿದ್ದರು.

## ಪೂರ್ವಾಶ್ರಮ

ಕ್ರಿ.ಶ. 1911 ರಲ್ಲಿ ಅಡ್ನೂರು ಗ್ರಾಮದಲ್ಲಿ (ನವಿಲುಗುಂದ ತಾ.) ಜನಿಸಿದ ಶ್ರೀಗಳವರ ಮೊದಲ ಹೆಸರು ಚಂದ್ರಶೇಖರ. ತಮ್ಮ ಐದನೆಯ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದರು. ಆರಂಭದಲ್ಲಿಯೇ ಶಿಕ್ಷಣಕ್ಕೆ ವಿದಾಯ ಹೇಳಿ ದನಕಾಯುವ ವೃತ್ತಿ ಮಾಡಿದರು. ನಂತರ ಕೆಲವರ್ಷಗಳಲ್ಲಿ ಅದೇ ಊರಿನಲ್ಲಿದ್ದ ಶ್ರೀಮಂತರಾದ ಮಲ್ಲಿಕಾರ್ಜುನಗೌಡರ ಮನೆಯಲ್ಲಿದ್ದುಕೊಂಡು ಶಿಕ್ಷಣವನ್ನಾರಂಭಿಸಿದರು. 1924 ರಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಹಾನಗಲ್ಲಿನ ಶ್ರೀ ಕುಮಾರಸ್ವಾಮಿಗಳವರು ಸ್ಥಾಪಿಸಿದ್ದ ಶಿವಯೋಗ ಮಂದಿರಕ್ಕೆ ಆಗಮಿಸಿದರು. ಇಲ್ಲಿ ಸತತ 12 ವರ್ಷಗಳ ಕಾಲ ಬಿಡುವಿಲ್ಲದ ಅಭ್ಯಾಸದಲ್ಲಿ ನಿರತರಾದರು. ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳಲ್ಲಿ ಅವಶ್ಯಮಟ್ಟದ ಶಿಕ್ಷಣ ಪಡೆದುಕೊಂಡರು. ಕಲ್ಕತ್ತಾ ವಿಶ್ವವಿದ್ಯಾಲಯದಿಂದ ಸಾಹಿತ್ಯ, ವ್ಯಾಕರಣ, ಸಾಂಖ್ಯ, ವೇದಾಂತ, ತತ್ತ್ವಶಾಸ್ತ್ರಗಳ ಪರೀಕ್ಷೆಗಳಲ್ಲಿ ಉತ್ತೀರ್ಣರಾದರು. ಆಗಲೇ ವಚನಗಳ ಬರವಣಿಗೆ ಆರಂಭಿಸಿ

ಸುಮಾರು 4,000 ವಚನಗಳನ್ನು ರಚಿಸಿದ್ದಾರೆ (ವಚನಮಂಜರಿ, ವಚನಾಂಜಲಿ, ವಚನವಲ್ಲರಿ, ಮಣಿವಚನಗಳು ಇತ್ಯಾದಿ). ಅಲ್ಲದೆ ಆತ್ಮಕಥನರೂಪವಾಗಿ ಶ್ರೀ ಜಚನಿಯವರು ರಚಿಸಿರುವ ವೈಯಕ್ತಿಕ ವಚನಗಳಲ್ಲಿ ಅವರ ಸತ್ಯಪ್ರೇಮ, ಸಮನ್ವಯತೆಯ ಗುಣಗಳು ಜಾಜ್ವಲ್ಯಮಾನವಾಗಿ ಪ್ರಕಾಶಗೊಂಡಿವೆ.

ಶ್ರೀ ಜಚನಿಯವರು ದೇಶಸಂಚಾರ ಮಾಡುತ್ತಾ ತಮ್ಮ ಉಪದೇಶದಿಂದ ಜನತೆಯಲ್ಲಿ ಧರ್ಮಪ್ರಜ್ಞೆ ಹಾಗೂ ಸಮಾನತೆಯ ಪ್ರಜ್ಞೆಯನ್ನು ಜಾಗೃತಗೊಳಿಸಿದವರು. ಬಸವಣ್ಣನಂತೆ ಭಕ್ತಿಶೀಲರಾಗಿದ್ದರಲ್ಲದೆ ಮಾತು ಮೃದುಮಧುರವಾಗಿರಬೇಕು. ಮೂಲ ಮರ್ಮವನ್ನರಿತಿರಬೇಕೆಂಬ ಸದ್ಭಾವನೆಗಳನ್ನು ಸಮನ್ವಯತೆಯ ಹಿನ್ನೆಲೆಯಲ್ಲಿ ವಚನೀಕರಿಸಿದವರು. ಅವರು ಮಠದ ಜೀರ್ಣೋದ್ಧಾರವೆಂದು ಅದರ ಕಟ್ಟಡದ ಗೋಡೆಗಳ ಮೇಲೆ ಬೆಳ್ಳಿಯ ತಗಡು ಹಚ್ಚಿಸದಿರಬಹುದು; ಗೋಪುರ ಕಟ್ಟಿಸಿ, ಅದಕ್ಕೆ ಚಿನ್ನದ ಕಳಸಗಳನ್ನು ಹಾಕಿಸದಿರಬಹುದು. ಆದರೆ ನಿಷ್ಠೆಯಿಂದ ನಡೆದುಕೊಳ್ಳುವ ಭಕ್ತಕೋಟಿಯ ನಿತ್ಯ ದಾಸೋಹವನ್ನು ಮಾಡಿಕೊಂಡು, ಪೀಠದಲ್ಲಿ ಗುರುಪರಂಪರೆಯನ್ನು ಪ್ರಾಣಪ್ರತಿಷ್ಠೆ ಮಾಡಿಕೊಂಡವರು. ಮಠದ ಬೊಕ್ಕಸವನ್ನು ಸಾಹಿತ್ಯಿಕ ಮೌಲ್ಯದಿಂದ ಎತ್ತಿಹಿಡಿದವರು. ತಾವು ಪೀಠವೇರಿದ್ದು ಸಾರ್ಥಕವಾಯಿತ್ತೆಂಬಂತೆ ಅನೇಕ ವಚನಗಳನ್ನು ರಚನೆಗೈದು ಪೀಠದ 'ಜಡತ್ವ' ವನ್ನು 'ಜಂಗಮ' ರೂಪವಾಗಿ ಪರಿವರ್ತಿಸಿದವರು.

## ನಾಗರಿಕತೆ ಮತ್ತು ಸಮನ್ವಯತೆ

ಶ್ರೀ ಜಚನಿಯವರದು ಪ್ರತಿಭಾಪೂರ್ಣವಾದ, ಶುದ್ಧಾತ್ಮವಾದ ಬದುಕು. ಶಿವಯೋಗಾನಂದವನ್ನೇ ಹೆದ್ದಾರಿಯನ್ನಾಗಿ ಮಾಡಿಕೊಂಡ ಬದುಕು. ಪುರಾತನ ವಚನ ಪರಂಪರೆಗೆ ತಮ್ಮ ಜೀವಿತಾವಧಿಯಲ್ಲಿ ಹೊಸ ಬೆಳಕನ್ನು ಚೆಲ್ಲಿದ್ದಾರೆ. ಶರಣರ ನೆಲೆಯಲ್ಲಿದ್ದು, ಶರಣ ಸಂಸ್ಕೃತಿಗೆ ಅನುಗುಣವಾಗಿ ಸಮನ್ವಯತೆಯನ್ನು ಕಂಡರಿಸುವಲ್ಲಿ ವಚನ ಸೃಷ್ಟಿಯನ್ನು ಸಂಪದ್ಭರಿತವಾಗಿ ಈ ಶತಮಾನದಲ್ಲಿ ಮಾಡಿರುವರೆಂದರೆ ಶ್ರೀ ಜಚನಿಯವರೊಬ್ಬರೇ ಎಂದು ಹೇಳಬಹುದು.

ಇಂದಿನ ಆಧುನಿಕತೆಯ ಭರಾಟೆಯಲ್ಲಿ, ವೈಜ್ಞಾನಿಕತೆಯ ಹೊಸ ಶೋಧದ ಓಟದಲ್ಲಿ, ಪರಸ್ಪರರಲ್ಲಿರಬೇಕಾದ ಪ್ರೀತಿ, ನಾಗರಿಕತೆ ಮತ್ತು ಸಮನ್ವಯತೆಯನ್ನೇ ನಾವು ಕಳೆದುಕೊಂಡಿದ್ದೇವೆ. ಲೋಕದ ತುಂಬಾ ನೀತಿರಹಿತ ವ್ಯಾಪಾರ, ಸೀಮಾತೀತವಾದ ಸ್ವಾರ್ಥ ಬುದ್ಧಿ, ರಾಕ್ಷಸ ಪ್ರವೃತ್ತಿಗಳ ಬಳಕೆ ಮತ್ತು ನಿರ್ದಾಕ್ಷಿಣ್ಯ ಸ್ವಭಾವಗಳು – ಇವುಗಳನ್ನು ಶ್ರೀ ಜಚನಿಯವರು ತೀವ್ರವಾಗಿ ಖಂಡಿಸಿದ್ದಾರೆ. ಇಂತಹ ಪ್ರವೃತ್ತಿಗಳು ಈಗ ಹೆಚ್ಚಾಗಿದ್ದರೂ ಮತ್ತೆ ಒಳ್ಳೆಯ ಕಾಲ ಬರಬಹುದೆಂಬ ದೂರದೃಷ್ಟಿಯುಳ್ಳ ಅವರು ಆಶಾವಾದಿಯಾಗಿರುವುದೂ ಅವರ ವಚನಗಳಲ್ಲಿ ಕಂಡುಬರುತ್ತದೆ. ಅವರು ಮನಃಶುದ್ಧಿಗೆ, ಅಂತರಂಗವಿಕಾಸಕ್ಕೆ, ಉದಾತ್ತ



ವಿಚಾರಗಳಿಗೆ ಮುಖ್ಯವಾಗಿ ಉತ್ತಮ ನಾಗರಿಕತೆ ಹಾಗೂ ಸಮನ್ವಯತೆಯ ಗುಣಗಳು ಬೇಕೆಂದು ಪ್ರತಿಪಾದಿಸಿದರು.

ಇಂದಿನ ನವನಾಗರಿಕತೆಯನ್ನು, ಜನಜೀವನವನ್ನು, ರಾಜಕೀಯವನ್ನು, ರೀತಿನೀತಿಗಳನ್ನು ಕುರಿತಾಗಿ ಜಚನಿಯವರು ತಮ್ಮ ವಚನಗಳಲ್ಲಿ ವಸ್ತುನಿಷ್ಠವಾಗಿ ವಿಶ್ಲೇಷಣೆ ಮಾಡಿದ್ದಾರೆ. ವಚನಶೈಲಿ ಹಳೆಯದಾದರೂ ವಚನಗಳಲ್ಲಿ ಪ್ರತಿಪಾದಿಸಿರುವ ವಿಷಯಗಳು ನವೀನ ಯುಗದ್ದಾಗಿವೆ, ನವನಾಗರಿಕತೆಯನ್ನು ಕುರಿತದ್ದಾಗಿವೆ. ಅಲ್ಲದೆ ಮಾನವೀಯ ಗುಣಗಳಲ್ಲಿ ಒಂದಾದ ಸಮನ್ವಯತೆಗೆ ಅವಶ್ಯ ಬೇಕಾಗಿರುವುದು ಸ್ವಚ್ಛ ಮನದ ನಾಗರಿಕತೆ. ಶುದ್ಧ ನಾಗರಿಕತೆಯುಳ್ಳ ಸಮನ್ವಯತೆಯ ಬೀಜವು ಪ್ರತಿಯೊಬ್ಬರಲ್ಲಿ ಮೊಳಕೆಯೊಡೆಯಬೇಕು. ನಮ್ಮ ನಮ್ಮ ಮಕ್ಕಳಿಗೆ ಈ ಬಗೆಗೆ ಹೆಚ್ಚಿನ ತಿಳುವಳಿಕೆಯನ್ನುಂಟುಮಾಡಬೇಕು. ಈ ಕುರಿತು ಒಂದು ವಚನದಲ್ಲಿ ಶ್ರೀ ಜಚನಿಯವರು ಹೀಗೆ ಹೇಳಿದ್ದಾರೆ:

> ವ್ಯಕ್ತಿ ವ್ಯಕ್ತಿಗಳಲ್ಲಿ ಮತಮತಗಳಲ್ಲಿ ಸಂಘ-ಸಂಸ್ಥೆಗಳಲ್ಲಿ
> ವೈರವಳಿದು ಬಪ್ಪುದೆ ನಾಗರಿಕತೆಯ ಪ್ರಗತಿಯು ನೋಡಾ
> ಉಚ್ಚವರ್ಣದವರೆಂದು ಹೆಚ್ಚಿನ ಅಧಿಕಾರಿಗಳೆಂದು
> ಸೋಮಾರಿಗಳಾಗದೇ ಸಹಕಾರಿಗಳಾಗದೆ ವೃತ್ತಿವ್ಯವಸಾಯಗಳಲ್ಲಿ
> ಸಮಸ್ತರು ಶ್ರಮಿಸುವುದೇ ನಾಗರಿಕತೆಯ ಪ್ರಗತಿಯು ನೋಡಾ
> ಅಧಿಕ ಲಾಲಸೆ ಅಧಿಕ ಲಾಭದಾಸೆ ಕೈಯಾಸೆಗಳನು ಕಳಚಿ
> ಸುಳ್ಳ ಕಳ್ಳ ವ್ಯಾಪಾರಗಳ ತ್ಯಜಿಸಿ, ಶಾಂತಿ ಸಹನೆ ಸಹಕಾರ
> ಸಮತಾಭಾವ, ಶಿಷ್ಟಾಚಾರ ಸಂಪನ್ನರಾಗಿ ಸಚ್ಚಾರಿತ್ರ್ಯರಪ್ಪುದೆ
> ಅದು ನಿಜವಾದ ನಾಗರಿಕತೆಯ ಪ್ರಗತಿಯು ನೋಡಾ
> ಇಂತೀ ತ್ರಿವಿಧ ಆಚರಣೆಗಳ ನಾಗರಿಕನ ನಿಜ ರೀತಿ ನೋಡಾ
> ಸಹಜ ಪ್ರಗತಿ ನೋಡಾ.
> ಅಹಿಂಸೆಯೇ ಜೀವನ, ಸತ್ಯವೇ ದರ್ಶನ
> ಸೋದರತೆಯೇ ಶಿಕ್ಷಣ. ಇಂತಿವು ಮಾನವ ಲಕ್ಷ್ಯವಪ್ಪುದೆ
> ವಿಶ್ವದ ಅಶಾಂತಿ ಕಾಷ್ಠಕ್ಕೆ ಬೇರೆ ಕಿಚ್ಚೇಕೆ ಹೇಳಾ?

ಅವರವರಿಗೆ ರೂಢಿಮೂಲವಾಗಿ ಬಂದಿರುವ ಕಸುಬುಗಳಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕತೆಯ ಹೊಂದಾಣಿಕೆಗಳನ್ನು ಮಾಡಿಕೊಂಡು ಅಧಿಕ ಲಾಭದಾಸೆಗೆ ಹೋಗದೆ, ಇದ್ದುದರಲ್ಲಿಯೇ ಹೆಚ್ಚಿನ ತೃಪ್ತಿ ಹೊಂದುವುದು ನಾಗರಿಕತೆಯ ವಿಶಿಷ್ಟ ಲಕ್ಷಣ. ಇಂತಹ ನವನಾಗರಿಕತೆಯ ಗುಣವಿದ್ದಾಗಲೇ ಎಲ್ಲರೊಂದಿಗೆ ಸಮನ್ವಯತೆಯಲ್ಲಿ ಬಾಳುವ ಆಲೋಚನೆ ಮನದಲ್ಲಿ ಅಂಕುರಿಸುತ್ತದೆ. ಜೀವನದಲ್ಲಿ ಅಹಿಂಸೆ, ಸತ್ಯ, ಸೋದರತ್ವ ಈ ಮೂರು ಮುಖ್ಯ ಗುಣಗಳಿದ್ದಾಗಲೇ ಸಮನ್ವಯ ಭಾವನೆ ಮನದಲ್ಲಿ ಮೊಳಕೆಯೊಡೆಯಲು ಸಾಧ್ಯವೆಂಬ ವಿಚಾರವನ್ನು ಶ್ರೀ ಜಚನಿಯವರು ಇಲ್ಲಿ ವಿಶ್ಲೇಷಿಸಿದ್ದಾರೆ.

ಎಲ್ಲಿ ನಾಗರಿಕತೆಯು ಇರುವುದಿಲ್ಲವೋ ಅಲ್ಲಿ ಸಮಾನತೆ ಕಂಡುಬರುವುದಿಲ್ಲವೆಂಬುದು ನಿರ್ವಿವಾದ. ನಾಗರಿಕತೆಯ ಅನಿಶ್ಚಿತತೆಯಿಂದ ನಿಶ್ಚಿತತೆಯೆಡೆಗೆ, ಭಿನ್ನತೆಯಿಂದ ಸಮನ್ವಯದೆಡೆಗೆ, ಪಾಷಂಡಿತನದಿಂದ(ಧರ್ಮವಿರುದ್ಧ) ಧರ್ಮದೆಡೆಗೆ ಸಾಗುವ ಪ್ರಗತಿಯಾಗಿದೆ. ಎಲ್ಲರ ಸಂಗಡ ಎಲ್ಲರ ಒಳಿತಿಗಾಗಿ ಕೆಲಸ ಮಾಡುವವನು ನಿಸ್ವಾರ್ಥಿಯಾಗಿರುವುದಲ್ಲದೆ ಸಭ್ಯ ಮಾನವನ ನಾಗರಿಕತೆಯಲ್ಲಿರುವ ಹೊಂದಾಣಿಕೆಯ ಹೆಗ್ಗುರುತಾಗಿರುತ್ತಾನೆ. "ಏಕಾಂಗಿಯಾಗಿರುವುದಕ್ಕಿಂತ ಎಲ್ಲರ ಸಂಗಡ ಸಮನ್ವಯತೆಯ ಭಾವವನ್ನು ಬೆಳೆಸಿಕೊಂಡು ಬಾಳುವುದು ಉತ್ತಮ." ಹಿಂದಿನಿಂದ ಬಂದ ಒಳ್ಳೆಯ ಸಂಸ್ಕಾರಗುಣಗಳನ್ನು ಲೋಕಕ್ಕೆ ಬಾಧೆಯಾಗದಂತೆ, ಸಹಾಯವಾಗುವಂತೆ ಬೆಳೆಸಿಕೊಂಡು ತನ್ನ ಜೀವನವನ್ನು ಅದಕ್ಕೆ ತಕ್ಕಂತೆ ತಿದ್ದಿಕೊಂಡರೆ ಅಂತಹ ಸುಸಂಸ್ಕೃತ ಜೀವನಸಂವಿಧಾನಕ್ಕೆ ನಾಗರಿಕತೆ ಎನ್ನುತ್ತಾರೆ ಹಾಗೂ ಅಂಥವನು ನಾಗರಿಕ ಎನಿಸಿಕೊಳ್ಳುತ್ತಾನೆ.

ಸಂಸ್ಕಾರವಿಲ್ಲದೆ ಹೋದಾಗ, ಶಿಕ್ಷೆ ಇಲ್ಲದೆ ಹೋದಾಗ, ಸಮಗ್ರವಾದ ಸಮನ್ವಯತೆಗೆ ಕುಂದುಗಳು ಆವರಿಸಿಯಾವು. ಶ್ರೀ ಜಚನಿಯವರು ಹೇಳುವಂತೆ, "ಜಡವೆಂದು ಬಿದ್ದಿದ್ದ ಕಲ್ಲಿಗೆ ಒಂದೊಂದು ಸಂಸ್ಕಾರವಿತ್ತಾಗ ಅದರಲ್ಲಿ ಒಂದೊಂದು ಅದ್ಭುತವಾದ ಕಲೆ ಮೇಳವಾದೀತು. ಶಿಲ್ಪಿಯ ಕೈಗೆ ಸಿಕ್ಕಾಗ ಶಿವಲಿಂಗವಾದೀತು. ಶ್ರೀಗುರುವಿನ ಪ್ರಸಾದಕ್ಕೆ ಸಿಲುಕಿ ಆತ್ಮಲಿಂಗವಾದೀತು. ಶಿಲೆಯೇ ಹೀಗೆ ಚೈತನ್ಯದ ಆಗರವಾಗುವುದಾದರೆ, ಮಾನವ ಇದೇ ಸಂಸ್ಕಾರಕ್ಕೊಳಗಾದಾಗ ಮಹಾಲಿಂಗವಾಗದಿರುವನೆ?" ಬಾಳಿನ ಸಮಗ್ರತೆಗೆ ಹಾಗೂ ಸಮನ್ವಯತೆಗೆ ಬೇಕಾದ ಸುಸಂಸ್ಕಾರಗಳನ್ನು ನಿಸರ್ಗವು ತನ್ನ ಶಿಕ್ಷಾಕ್ರಮದಲ್ಲಿ ನಿಯೋಜಿಸಿದೆ. ನೈತಿಕ ನೈರ್ಮಲ್ಯ, ಸಹೃದಯಶಿಷ್ಟತೆ, ಕ್ರಿಯಾಶೀಲತೆ, ಸಮರಸಶೀಲತೆ, ಜ್ಞಾನಸೌಷ್ಠವ, ವಿಶ್ವಕಾರುಣ್ಯ ಇತ್ಯಾದಿಗಳ ಚಲನೆಯೇ ಆಯಾ ಸಮಗ್ರತೆಗೆ ಹಾಗೂ ಸಮನ್ವಯತೆಗೆ ಪುಷ್ಟಿದಾಯಕವಾದ ಅಂಶಗಳಾಗಿವೆ. ಹಾಗೆಯೇ ಬಡವರ, ನೊಂದವರ ಬಗೆಗೆ ಕಳಕಳಿ ವ್ಯಕ್ತಪಡಿಸುವ ನೈಜ ಗುಣಗಳನ್ನು ನಿಸರ್ಗದಿಂದ ತಿಳಿದುಕೊಳ್ಳಬೇಕಾಗಿದೆ. ಇದೂ ಸಹ ನಾಗರಿಕತೆಯನ್ನೊಳಗೊಂಡ ಸಮನ್ವಯತೆಯ ಗುಣಗಳಲ್ಲೊಂದಾಗಿದೆ.

ಬಡವರ ಮೇಲೆ ಭಾಗ್ಯವಂತರು
ಬುದ್ಧಿಹೀನರ ಮೇಲೆ ಬುದ್ಧಿವಂತರು
ಪ್ರಮದೆಯರ ಮೇಲೆ ಪುರುಷರು
ಒಡೆತನವ ತೋರುವುದೇ ನಾಗರಿಕ ಸಂಸ್ಕೃತಿವಲ್ಲವಯ್ಯ
ಎಲ್ಲರಲಿ ಆತ್ಮೈಕ್ಯತೆ ಮಾನವ್ಯ ಸಮತೆಗಳ ತೋರಿ
ತಾನಾಚರಿಪುದೆ ನಾಗರಿಕ ನಿಜ ಸಂಸ್ಕೃತಿಯಯ್ಯ

ಬಡವ-ಬಲ್ಲಿದ, ಬುದ್ಧಿಹೀನರು-ಬುದ್ಧಿವಂತರು, ಹೆಣ್ಣು-ಗಂಡು ಎಂಬೀ ಭೇದಭಾವಗಳು ವಿಶಾಲ ಸಮನ್ವಯತೆಯ ಹಾದಿಗೆ ಮಾರಕವಾದುವುಗಳೇ. ಹಣವುಳ್ಳವನನ್ನೇ ಶ್ರೀಮಂತ



ಎನ್ನುವುದಾದರೆ ಗುಣವುಳ್ಳವನನ್ನು ಅವನಿಗಿಂತಲೂ ಶ್ರೀಮಂತನೆನ್ನಬಹುದಲ್ಲವೆ? ಹಾಗಾಗಿ ಮೇಲು-ಕೀಳಿನ ಭಾವನೆಗಳಿಗೆ ಇವುಗಳೇ ಮಾನದಂಡಗಳಲ್ಲ ಎಂಬ ಅರಿವು ಮೊದಲು ನಮ್ಮದಾಗಬೇಕು. "ಎಲ್ಲರಿಗೂ ಎಲ್ಲರಿಗಾಗಿ ಎಲ್ಲರೂ" ಎಂಬ ಮಂತ್ರ ಆಚರಣೆಯಾದಾಗ ಮಾತ್ರ ನಿಜವಾದ ಸಂಸ್ಕೃತಿ ರೂಪುಗೊಳ್ಳಲು ಸಾಧ್ಯ.

ಇನ್ನು ನಮ್ಮ ನೈತಿಕ ಅಧಃಪತನಕ್ಕೆ ಕಾರಣ, ನಾವೆಲ್ಲಾ ಅಡ್ಡದಾರಿಗಳನ್ನು ತುಳಿಯುತ್ತಿರುವುದು, ಆ ಮೂಲಕ ದಿನದಿನಕ್ಕೂ ವಿನಾಶದತ್ತ ಸಾಗಿರುವುದು. ಸಹಸ್ರಾರು ವರ್ಷಗಳಿಂದ ಬೆಳೆದು ಬಂದಿರುವ ಈ ಪುಣ್ಯಭೂಮಿಯನ್ನು ಹೀಗೆ ನಾಶವಾಗಲು ನಾವುಗಳು ಬಿಡಬಾರದು. ಇದಕ್ಕೆ ಬೇಕಾಗಿರುವುದು ಸಮನ್ವಯತೆಯ ಅದ್ಭುತವಾದ ಗುಣ. ಶ್ರೀ ಜಚನಿಯವರು ಸಮಾಜವನ್ನು ತಿದ್ದುವ, ಮೇಲು-ಕೀಳಿನ ಭಾವನೆಗಳನ್ನು ಹೋಗಲಾಡಿಸುವ ಮತ್ತು ಸರ್ವಧರ್ಮ ಸಮನ್ವಯವನ್ನು ಸಾರುವ ಆ ಮೂಲಕ ಆತ್ಮಜ್ಞಾನವನ್ನು ನೀಡುವಂತಹ ವ್ಯಾಪಕ ದೃಷ್ಟಿಯನ್ನು ಸ್ಪಷ್ಟವಾಗಿ ನಿರ್ದೇಶಿಸುತ್ತಾರೆ. ಅವರ ಒಂದು ವಚನವು ಹೀಗಿದೆ :

ಮಾನವ ಸಮಾಜವೆಂಬ ಮರಕ್ಕೆ
ಮತಧರ್ಮಂಗಳೇ ರೆಂಬೆಗಳು ನೋಡಾ
ಆವ ರೆಂಬೆಯಾದಡೇನು?
ಮೂಲ ಒಂದೇ, ಫಲ ಒಂದೇ
ಮೇಲು-ಕೀಳೆಂಬ ಮರುಳರನೇನೆಂಬೆ
ಶ್ರೀ ನಿಡುಮಾಮಿಡಿ ಶ್ರೀಗಿರಿಸೂರ್ಯಸಿಂಹಾಸನಾಧೀಶ್ವರಾ ?

ಸಮನ್ವಯತೆಯನ್ನು ಎಲ್ಲರಲ್ಲಿ ಕಂಡುಕೊಳ್ಳುವ "ತನುವೆಂಬ ತೋಟದಲ್ಲಿ ಅಂತಃಕರಣವೆಂಬ ತುಂಬಿಗಳು ತುಂಬಿ ಝೇಂಕರಿಸುವಾಗ ಅದರಲ್ಲಿ ಭಿನ್ನ-ಭೇದ-ಭಾವಗಳು, ಈರ್ಷ್ಯೆ ರೋಷಗಳು, ಶೋಕ-ಮೋಹಗಳು ಮನೆಮಾಡಲು ಶಕ್ಯವೆ? ನಮ್ಮ ನಿತ್ಯಜೀವನಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳು, ಸಮಸ್ಯೆಗಳು, ಘರ್ಷಣೆಗಳ ಬಗ್ಗೆ 'ಮರ'ದ ಉದಾಹರಣೆಯೊಂದಿಗೆ ಶ್ರೀ ಜಚನಿಯವರು ಬಹು ಮಾರ್ಮಿಕವಾಗಿ ನುಡಿದಿದ್ದಾರೆ. ಸಮನ್ವಯತೆಯೆಂದರೆ ಕೇವಲ ಪುಸ್ತಕ ಪಾಂಡಿತ್ಯವಲ್ಲ. ಅವರಿವರಿಂದ ಕೇಳುವ ಬೋಧನೆಯೊಂದೇ ಅಲ್ಲ. ನಮ್ಮ ಆಚಾರ-ವಿಚಾರಗಳಲ್ಲಿ ಸಮನ್ವಯತೆಯೆಂಬುದು ಇರದಿದ್ದರೆ ಹೇಗೆ ನಮ್ಮ ಬಾಳು ಸರ್ವಾಂಗ ಸುಂದರವಾದೀತು? ಆಗ ನಮ್ಮ ಬಾಳುವೆ ನಿರರ್ಥಕ, ನಿಷ್ಪ್ರಯೋಜಕವಲ್ಲವೆ? ಹಾಗಾಗಿ ಮನುಷ್ಯ ತನ್ನ ಜೀವಿತಾವಧಿಯಲ್ಲಿ ಇದ್ದಷ್ಟೂ ಕಾಲ ತನ್ನ ಮನೆ, ನೆರೆಹೊರೆ, ಊರು, ನಾಡು, ದೇಶ ಹೀಗೆ ಮುಂದುವರೆದು ಅನಂತ ಪ್ರಜ್ಞೆಯನ್ನು ಮೂಡಿಸಿಕೊಳ್ಳಬೇಕು. ಅದೇ ವಿಶ್ವಪ್ರಜ್ಞೆ. ಈ ವಿಶ್ವವೇ ಒಂದು ಮನೆಯೆಂದು ಭಾವಿಸಿಕೊಂಡಾಗ ಎಲ್ಲರ ಮೇಲೂ ಸಮನ್ವಯತೆಯ ಪ್ರೀತಿ ಉಂಟಾಗಲು ಸಾಧ್ಯವೆಂಬುದು ಶ್ರೀ ಜಚನಿಯವರ ಅಭಿಮತವಾಗಿದೆ.

ವಿಶ್ವವೇ ಮನೆ ವಿಶ್ವೇಶ್ವರನೇ ತಂದೆ
ವಿಶ್ವೇಶ್ವರಿಯೇ ತಾಯಿ
ವಿಶ್ವದ ಮಾನವರೆಲ್ಲ ಮಕ್ಕಳು ಕಂಡಯ್ಯ
ಬಣ್ಣ-ಭಾಷೆ, ಧರ್ಮ-ಕರ್ಮ
ದಿಕ್ಕು-ದೇಶಗಳಾದಡೇನು?
ಮಾನವ್ಯ ಬಾಂಧವ್ಯವೇ ವಿಶ್ವೈಕ್ಯದ ಜೀವಾಳ ಕಂಡಯ್ಯ
ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರಾ !

ಶ್ರೀ ಕುವೆಂಪುರವರು ಹೇಳಿದಂತೆ "ಓ ನನ್ನ ಚೇತನ ಆಗು ನೀ ಅನಿಕೇತನ, ಮನೆಯನೆಂದು ಕಟ್ಟದಿರು, ಕೊನೆಯನೆಂದೂ ಮುಟ್ಟದಿರು ಓ ನೀನು ಅನಂತವಾಗಿರು" ಎಂಬ ವಿಶ್ವವಾಣಿಯಂತೆ ಶ್ರೀ ಜಚನಿಯವರೂ ಸಹ ಈ ವಚನದ ಮೂಲಕ ಅಂಥದೇ ಸಂದೇಶ ನೀಡುತ್ತಾರೆ. ಮನುಷ್ಯ ಮನುಷ್ಯರಲ್ಲಿ ಸಂಬಂಧಗಳು ಹೊಂದಾಣಿಕೆಯಾದಾಗ ಅಲ್ಲಿ ಯಾವ ನಿಕೃಷ್ಟ ಭಾವನೆಗಳೂ ಸುಳಿದಾಡುವುದಿಲ್ಲ. ಅಷ್ಟೇ ಅಲ್ಲ, ಬಣ್ಣ-ಭಾಷೆ, ಧರ್ಮಕರ್ಮಗಳೆಂಬ ಕೀಳು ಭಾವನೆಗಳನ್ನು ಮನದಿಂದ ತೊಡೆದುಹಾಕಿ ಅಲ್ಲಿ ವಿಶಾಲವಾದ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕಷ್ಟೆ. ಅತಿ ಬುದ್ಧಿವಂತರಾದ ನಾವುಗಳು ಇತರರ ಮೇಲ್ನೋಟದ ಬಣ್ಣ, ಭಾಷೆ, ಧರ್ಮಗಳ ಲೆಕ್ಕಾಚಾರ ಹಾಕುವುದು ಸರ್ವಥಾ ಸರಿಯಲ್ಲ.

ಆ ಮತ ಈ ಮತ ಎಂಬ ಭ್ರಾಂತಿ ಬಯಲಾಯಿತ್ತು.
ಆವ ಮತವಾದಡೇನು ಸುವಿಚಾರದಲ್ಲಿ ನುಡಿವಂಗೆ
ಆವ ಪಂಥವಾದಡೇನು ಸುವಿಚಾರದಲ್ಲಿ ನಡೆವಂಗೆ
ಆವ ಜಾತಿಯಾದಡೇನು ಜ್ಯೋತಿರೂಪಾಗಿ ಬೆಳಗುವಂಗೆ
ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾದೀಶ್ವರಾ !

ಶರಣರು ಹೇಳಿದಂತೆ "ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ?" ದಾಸರು ನುಡಿದಂತೆ "ಕುಲಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?" ಸತ್ಯದಲ್ಲಿ ನಡೆವವಗೆ ಯಾವ ಮತ-ಪಂಥಗಳಿರಲಾರವು. ಎಲ್ಲರಲ್ಲಿ ಪ್ರೀತಿ-ವಿಶ್ವಾಸಗಳಿಟ್ಟುಕೊಂಡು ಶುದ್ಧ ಮನದಿಂದ ಬಾಳುವವಗೆ ಮತ-ಪಂಥಗಳೆಂಬ ಭ್ರಮೆಗಳಿರಲಾರವು.

ವ್ಯಕ್ತಿಯುದಯವೆ ವಿಶ್ವದುದಯ
ವ್ಯಕ್ತಿವಿನಾಶವೇ ವಿಶ್ವನಾಶ
ಶಕ್ತಿ ಉದಯಕ್ಕೆ ವ್ಯಕ್ತಿಯತ್ನವು ಬೇಕು
ಸಮಾಜ ಸಹಕಾರವೂ ಬೇಕು.
ವ್ಯಕ್ತಿಯಿಂದ ಮನೆ ವ್ಯಕ್ತಿಯಿಂದ ಊರು
ವ್ಯಕ್ತಿಯಿಂದ ನಾಡು ವ್ಯಕ್ತಿಯಿಂದ ದೇಶ
ವ್ಯಕ್ತಿಯಿಂದ ವಿಶ್ವ ನೋಡಾ
ವ್ಯಕ್ತಿ ವಿಕಾಸವಪ್ಪೊಡೆ ಇವೆಲ್ಲ ಕಾಣಾ.....



ವ್ಯಕ್ತಿವೈಶಿಷ್ಟ್ಯತೆಯಲ್ಲಿ ಸಮನ್ವಯತೆಯನ್ನು ಬಿಂಬಿಸುವ ಈ ವಚನದ ಸಾಲುಗಳು ಬಹಳ ಮಾರ್ಮಿಕವಾಗಿವೆ. ವ್ಯಕ್ತಿಗೆ ವ್ಯಷ್ಟಿರೂಪದ ಪ್ರತಿಷ್ಠೆಗಿಂತ ಸಮಷ್ಟಿರೂಪದ ಸಮನ್ವಯತೆ ಬೇಕು. ವ್ಯಕ್ತಿ ತನ್ನ ವ್ಯಕ್ತಿತ್ವದಲ್ಲಿನ ಶ್ರದ್ಧೆ-ನಿಷ್ಠೆಗಳನ್ನು ಎಂದಿಗೂ ಕಳೆದುಕೊಳ್ಳಬಾರದು. ವೈಯಕ್ತಿಕತೆಯಲ್ಲಿ ಸಮನ್ವಯತೆಯ ವಿಶಾಲ ಭಾವನೆ ಅಡಗುವಂತಾಗಬೇಕು. ಆಗ ವ್ಯಕ್ತಿತ್ವದ ಮೌಲ್ಯ ಹೆಚ್ಚುತ್ತದೆ. ವ್ಯಕ್ತಿತ್ವದ ಸಮನ್ವಯತೆಯ ಸಾಧನೆಯಲ್ಲಿ ಆಚಾರ-ವಿಚಾರ, ನೀತಿ-ನಿಯಮ, ಧರ್ಮ-ಕರ್ಮಗಳ ಪುನರುತ್ಥಾನ ಪ್ರಕಾಶಗೊಳ್ಳುತ್ತವೆ.

ಹೀಗೆ ಶ್ರೀ ಜಚನಿಯವರ ವಚನಗಳ ರಚನೆಯ ಶೈಲಿಯಲ್ಲಿ ಸುಕುಮಾರತೆಯಿದೆ, ಅರ್ಥದಲ್ಲಿ ಸತ್ವವಿದೆ, ಭಾಷೆಯಲ್ಲಿ ಬೆಡಗಿದೆ, ಭಾವದಲ್ಲಿ ಸೌಂದರ್ಯವಿದೆ. ಎಲ್ಲಕ್ಕಿಂತ ಮಿಗಿಲಾಗಿ ವ್ಯಕ್ತಿಮೌಲ್ಯದ ಸಂದೇಶವಿದೆ. ನಾಗರಿಕತೆ ಮತ್ತು ಸಮಾನತೆಯ ತತ್ವಗಳ ನಿರೂಪಣೆಯೂ ಕಂಡುಬರುತ್ತದೆ. ಹೃದಯಪ್ರಧಾನವಾದ ಇವರ ವಚನಸಾಹಿತ್ಯ ಅದೊಂದು ಹಿಮಾಲಯದ ಗೌರೀಶಿಖರ. ಆದರೂ ಅದು ಮಾನವತೆಯಲ್ಲಿರಬೇಕಾದ ಸಮನ್ವಯತೆಯ ಸತ್ವವನ್ನು ಮರೆತಿಲ್ಲ. ಮಾನವರ ಸೇವೆಗಾಗಿ ಮೆರೆದಾಡಿದೆ. ಮಾನವರ ಉಪಾಸನೆಗಾಗಿ ಮಂಗಳಕರವಾಗಿ ಮೆರೆದಿದೆ.

ಶ್ರೀಗಳವರು ಸಂಸ್ಥಾನಾಧಿಪತಿಗಳಷ್ಟೇ ಅಲ್ಲ; ವಿದ್ಯೆ ವಿನಯಗಳಿಂದ ಸೌಜನ್ಯ ಸೌಹಾರ್ದಗಳಿಂದ, ಘನತೆ-ಗೌರವಾದರಗಳಿಂದ ಎಲ್ಲರ ಮನಸ್ಸನ್ನು ಸೆಳೆಯುವ ಸಾಮರ್ಥ್ಯವನ್ನು ಪಡೆದಿದ್ದರು. ಈ ಶತಮಾನದ ಏಕೈಕ ಸತ್ವಶಾಲಿ ವಚನಕಾರರಾಗಿದ್ದರು. ಸಂಖ್ಯೆ, ಸತ್ತ್ವಗಳೆರಡರ ದೃಷ್ಟಿಯಿಂದಲೂ ಸಾರ್ಥಕ ಸಾಹಿತ್ಯ ನೀಡಿದವರು. ಶರಣರ ಕಂದರಾಗಿ ಬಾಳುವ ಹಂಬಲವುಳ್ಳವರಾಗಿದ್ದರು. ಶ್ರೀ ಜಚನಿಯವರು ಪುರಾತನರ ವಚನರೂಪಕ್ಕೆ ವಿನೂತನ ಕಾಂತಿ ಚೆಲ್ಲಿದ ಮಹಾಪುರುಷರು. ಇಲ್ಲಿ ಕರುಣೆಯೇ ಶ್ರೀಗಳವರ ಭಾಷೆಯಾಗಿದೆ; ಕರುಳೇ ಲೆಕ್ಕಣಿಕೆಯಾಗಿದೆ. ಇವರ ವಚನಗಳ ಹೊನ್ನುಡಿಗಳಲ್ಲಿ ಒಳ್ನುಡಿಯಿದೆ, ಒಳ್ಗುರಿಯಿದೆ. ಒಟ್ಟಾರೆ ಎಲ್ಲರಲ್ಲಿ ಪ್ರತಿಸ್ಪಂದಿಸಬೇಕಾದ ನಾಗರಿಕತೆ ಮತ್ತು ಸಮನ್ವಯತೆಯ ಕಳಕಳಿ ಅವರಲ್ಲಿ ಅಗಾಧವಾಗಿತ್ತೆಂಬುದು ಅವರ ಕೆಲವು ವಚನಗಳ ಮೂಲಕ ನಮಗೆ ವೇದ್ಯವಾಗುತ್ತದೆ.

# ಬಸವಣ್ಣ ಕಂಡ ಕಲ್ಯಾಣ ರಾಜ್ಯ

**ಪ್ರೊ. ಎಸ್.ಎಸ್. ಕಬ್ಬಿನ**

ಭಾರತದ ಸಂವಿಧಾನದಲ್ಲಿ ಕಲ್ಯಾಣರಾಜ್ಯದ (Welfare State) ಉಲ್ಲೇಖವಿದೆ. ಅದನ್ನು ಕಾರ್ಯಗತಗೊಳಿಸುವ ಸಲುವಾಗಿ ಸಂವಿಧಾನದಲ್ಲಿ ನಿರ್ದೇಶನಸೂತ್ರಗಳನ್ನು ಅಳವಡಿಸಲಾಗಿದೆ. ಆದರೆ ಸಂವಿಧಾನ ಶಿಲ್ಪಿಗಳು ಕಂಡ ಕಲ್ಯಾಣರಾಜ್ಯದ ಕನಸು ಇನ್ನೂ ನನಸಾಗಿಲ್ಲ. ನನಸಾಗುವ ಸಂಭವವೂ ಕಾಣುತ್ತಿಲ್ಲ. ಈ ದೇಶದಲ್ಲಿ ಕಲ್ಯಾಣರಾಜ್ಯ ಅಥವಾ ಒಳ್ಳೆಯ ಸರಕಾರ ಒಂದು ಬಿಸಿಲ್ಗುದುರೆ. ಸಾಮಾನ್ಯವಾಗಿ ಮನುಷ್ಯ ಈ ಭೂಮಿಯ ಮೇಲೆ ಹುಟ್ಟಿದಂದಿನಿಂದ ಕಲ್ಯಾಣ ರಾಜ್ಯದ ಕನಸು ಕಾಣುತ್ತಲೇ ಇದ್ದಾನೆ. ಸಂತರು, ಮಹಾತ್ಮರು, ರಾಜರ್ಷಿಗಳು ಜನರ ಮುಂದೆ ಕಲ್ಯಾಣರಾಜ್ಯದ ಆದರ್ಶ ಇಡುತ್ತಲೇ ಬಂದಿದ್ದಾರೆ. ಪ್ಲೇಟೋನ ಆದರ್ಶ ಗಣರಾಜ್ಯ, ಏಸುಕ್ರಿಸ್ತನ ಭೂಮಿಯ ಮೇಲೆ ದೇವರ ರಾಜ್ಯ, ತುಲಸೀದಾಸರ ರಾಮರಾಜ್ಯ – ಎಲ್ಲವೂ ಕಲ್ಪನೆಯ ಕೂಸಾಗಿಯೇ ಉಳಿದಿವೆ. ಆದರೆ ಬಸವಣ್ಣನವರು ಕಂಡ ಕಲ್ಯಾಣರಾಜ್ಯ ಕನಸಿನ ಗಂಟಾಗಿರಲಿಲ್ಲ, ಅದು ವಾಸ್ತವಿಕವಾಗಿ ಇತ್ತು. ಬಸವಣ್ಣನವರ ಸಮಯದಲ್ಲಿಯೇ ಕಲ್ಯಾಣ ನಗರದಲ್ಲಿ ಕೆಲಕಾಲವಾದರೂ ಅದು ನೆಲೆಸಿತ್ತು. ಅಂದು ಕಲ್ಯಾಣನಗರ ಭೂಕೈಲಾಸ ವೆನಿಸಿಕೊಂಡಿತು. ಶರಣರು ದೇವಲೋಕವನ್ನು ಭೂಮಿಯ ಮೇಲೆ ತರಲಿಲ್ಲ. ಈ ಭೂಮಿಯನ್ನೇ ದೇವಲೋಕವನ್ನಾಗಿ ಮಾಡಿದರು. ಬಸವಣ್ಣನವರ ದೃಷ್ಟಿಯಲ್ಲಿ ಮೃತ್ಯುಲೋಕ, ದೇವಲೋಕ ಬೇರೆ ಎಲ್ಲಿಯೂ ಇರಲಿಲ್ಲ. ಸತ್ಯ ನುಡಿಯುವುದೇ ದೇವಲೋಕ, ಅಸತ್ಯ ನುಡಿಯುವುದೇ ಮೃತ್ಯುಲೋಕ. ಆಚಾರವೇ ಸ್ವರ್ಗ, ಅನಾಚಾರವೇ ನರಕ.

ಜಗತ್ತಿನ ಜನಜೀವನದಲ್ಲಿ ಅತ್ಯಂತ ಪ್ರಭಾವ ಬೀರಿದ ಎರಡು ಪ್ರಮುಖ ವಿಚಾರಧಾರೆಗಳು ನಮ್ಮ ಮುಂದೆ ಇವೆ. ಒಂದು ಧರ್ಮ, ಇನ್ನೊಂದು ಅರ್ಥ. ಐತಿಹಾಸಿಕವಾಗಿ ವಿಚಾರಿಸಿದಾಗ ಧರ್ಮ, ಸಂಸ್ಕೃತಿ, ಸಂಪ್ರದಾಯ, ಸಾಮಾಜಿಕ ಜೀವನ ಹಾಗೂ ರಾಜಕೀಯ ವ್ಯವಸ್ಥೆ ಎಲ್ಲವೂ ಆರ್ಥಿಕ ವ್ಯವಸ್ಥೆಯ ಮೇಲೆ ನಿಂತಿವೆ. ಹಣದ ಉತ್ಪಾದನೆಯ ರೀತಿನೀತಿಗಳ ಮೇಲೆ ಸಮಾಜದ ವ್ಯವಸ್ಥೆ ರೂಪುಗೊಳ್ಳುತ್ತದೆ, ಬದಲಾಗುತ್ತದೆ. ಅರ್ಥವ್ಯವಸ್ಥೆಯ ಎರಡು ಪ್ರಮುಖ ವಿಚಾರಧಾರೆಗಳಿವೆ – ಒಂದು ಬಂಡವಾಳಶಾಹಿ, ಇನ್ನೊಂದು ಸಮತಾವಾದಿ. ಬಂಡವಾಳಶಾಹಿಯಲ್ಲಿ ಹಣ ಶೇಖರಣೆಗೆ ಒತ್ತುಕೊಡಲಾಗಿದ್ದು, ಸಮತಾವಾದದಲ್ಲಿ ಸಂಪತ್ತಿನ ಸಮಾನ ಹಂಚಿಕೆಯಾಗಬೇಕು. ಎರಡೂ ಅರ್ಥವ್ಯವಸ್ಥೆಗಳು ಮಾನವಸುಖವನ್ನೇ ಬಯಸುತ್ತವೆ. ಶೋಷಣೆರಹಿತ ಸಮಾಜದ ನಿರ್ಮಾಣಕ್ಕಾಗಿ ಎರಡೂ ಅರ್ಥವ್ಯವಸ್ಥೆಗಳು ಹೆಣಗುತ್ತಲೇ



ಇವೆ. ಆದರೆ ಅಂತಹ ಸಮಾಜದ ನಿರ್ಮಾಣ ಇನ್ನೂವರೆಗೂ ಸಾಧ್ಯವಾಗಿಲ್ಲ.

ಸಂಗ್ರಹ ಪ್ರವೃತ್ತಿ ಮನುಷ್ಯನ ಹುಟ್ಟುಗುಣ. ಅವನಿಗೆ ನಾಳೆಯ ಚಿಂತೆ. ಅವನು ತನಗಾಗಿ, ತನ್ನ ಹೆಂಡಿರು ಮಕ್ಕಳಿಗಾಗಿ ಹಣ ಕೂಡಿಸುತ್ತಾನೆ. ಆಸ್ತಿ ಮಾಡುತ್ತಾನೆ. ಅವರ ಆಸೆಗೆ ಕಡಿವಾಣವಿಲ್ಲ. ಎಷ್ಟೋ ಸಂಪತ್ತು ಕೂಡ ಹಾಕಿದರೂ ಅವನಿಗೆ ತೃಪ್ತಿಯಾಗುವುದಿಲ್ಲ. ಇಲ್ಲಿ ಶೋಷಣೆ ಇದೆ. ಒಬ್ಬ ಸಿರಿವಂತನಾದರೆ ಸಾವಿರಾರು ಜನ ಬಡವರಾಗುತ್ತಾರೆ. ಬಸವಣ್ಣನವರು ಸಂಗ್ರಹ ಪ್ರವೃತ್ತಿಯನ್ನು ಮೂಲದಲ್ಲಿಯೇ ಚಿವುಟಿಹಾಕಲು ನಿರ್ಧರಿಸಿದರು. ಅದಕ್ಕಾಗಿ ಅವರು –

> ಹೊನ್ನಿನೊಳಗೊಂದೊರೆಯ ಸೀರೆಯೊಳಗೊಂದೆಳೆಯ
> ಅನ್ನದೊಳಗೊಂದಗುಳ, ಇಂದಿಂಗೆ ನಾಳಿಂಗೆ ಬೇಕೆಂದೆನಾದೊಡೆ
> ನಿಮ್ಮಾಣೆ ನಿಮ್ಮ ಪುರಾತನರಾಣೆ

ಎಂದು ಹೇಳಿ ಅಗತ್ಯ ವಸ್ತುಗಳನ್ನು ನಾಳೆಗೆಂದು ಕೂಡಿ ಇಡದೇ ಅದನ್ನು ಸಮಾಜದ ಹಿತಕ್ಕೆ ಬಳಸಬೇಕೆಂದು ಹೇಳಿದ್ದಾರೆ. ಸಿರಿ ಎಂಬುದು ಶಾಶ್ವತವಲ್ಲ. ಅದು ಭಕ್ತಿಯಿಂದ ದೇವರನ್ನು ತಿಳಿಯುವ ಸಾಧನವಾಗಬೇಕು. ಹಣ ಕೂಡಿಡುವವರನ್ನು ಕುರಿತು ಬಸವಣ್ಣನವರು –?

> ಆಯುಷ್ಯ ಉಂಟು ಪ್ರಳಯವಿಲ್ಲವೆಂದು ಅರ್ಥವ ಮಡುಗುವಿರಿ,
> ಆಯುಷ್ಯ ತೀರಿ ಪ್ರಳಯ ಬಂದರೆ ಅರ್ಥವ ನಂಬುವವರಿಲ್ಲ
> ನೆಲನಗಿದು ಮಡುಗದಿರಿ, ನೆಲ ನುಂಗಿದೊಡೆ ಉಗುಳುವುದೆ?
> ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆನಹಿ, ಉಣ್ಣದೆ ಹೊಗದಿರಿ.

ಎಂದು ಸಂಗ್ರಹಪ್ರವೃತ್ತಿಯನ್ನು ಸಮೂಲವಾಗಿ ಕಿತ್ತುಹಾಕಲು ಪ್ರೇರಕರಾಗಿದ್ದಾರೆ. ಬಸವಣ್ಣನವರು ಕೇವಲ ಬಾಯಿಂದ ಹೇಳಿ ಸುಮ್ಮನಿರಲಿಲ್ಲ. ಅವರು ಮಾಡಿ ತೋರಿಸಿದರು. "ನುಡಿದಂತೆ ನಡೆ" ಇದು ಬಸವ ಧರ್ಮ. ಇದು ಶರಣ ಧರ್ಮವೂ ಹೌದು. ಮಹಾಶರಣೆ ಆಯ್ದಕ್ಕಿ ಲಕ್ಕಮ್ಮ ಒಂದು ಹೆಜ್ಜೆ ಮುಂದೆ ಹೋಗಿ ತನ್ನ ಗಂಡನು ದಿನಕ್ಕೆ ಬೇಕಾದಕ್ಕಿಂತ ಹೆಚ್ಚಿಗೆ ಅಕ್ಕಿಯನ್ನು ತಂದಾಗ "ಆಸೆ ಅರಸಂಗಲ್ಲದೆ ಶಿವಶರಣರಿಗಲ್ಲ. ಈಸಕ್ಕಿಯ ಆಸೆ ಏಕೆ?" ಎಂದು ಹೆಚ್ಚಿನ ಅಕ್ಕಿಯನ್ನು ತಿರುಗಿ ಕಳುಹಿಸಿದಳು. ಹೀಗೆ ಬಸವಣ್ಣನವರ ಮಾರ್ಗದರ್ಶನದಲ್ಲಿ ಪ್ರತಿಯೊಬ್ಬ ಶರಣ ಹಾಗೂ ಶರಣೆಯರು ಶುದ್ಧ ಕಾಯಕದಿಂದ ಬಂದದ್ದರಲ್ಲಿ ತಮ್ಮ ದಿನನಿತ್ಯ ಜೀವನಕ್ಕೆ ಬೇಕಾದಷ್ಟು ಇರಿಸಿಕೊಂಡು ಹೆಚ್ಚಿನದನ್ನು ದಾಸೋಹಕ್ಕಾಗಿ ಖರ್ಚು ಮಾಡುತ್ತಿದ್ದರು.

ಬಸವಣ್ಣನವರು ಹಾಗೂ ಶರಣರು ತಮ್ಮ ಸಂಪತ್ತಿನ ಅಧಿಕಾರಿ ಶಿವನೆಂದು, ತಾವು ಆ ಸಂಪತ್ತಿನ ಧರ್ಮದರ್ಶಿಯೆಂದು ತಿಳಿದಿದ್ದರು. ಕೊಡುವಾತಂ ಸಂಗ, ಕೊಳ್ವಾತಂ ಸಂಗ, ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರಿಯೆ ಮಾಡೆನು ಎಂದು ಶರಣರೆಲ್ಲರೂ ನಂಬಿದ್ದರು.

ಒಂದು ಸಲ ಬಸವಣ್ಣನವರ ಮನೆಗೆ ಕಳ್ಳನು ನುಗ್ಗಿದಾಗ ಬಸವಣ್ಣನವರಿಗೆ ಎಚ್ಚರಾಗಿ – ನಮ್ಮಯ್ಯನ ಕೈ ನೊಂದಿತು ಎಂದು ತಮ್ಮ ಹೆಂಡತಿಗೆ ಬಯ್ದು, ಆಕೆಯ ಮೈಮೇಲಿನ ಆಭರಣಗಳನ್ನು ಕಳ್ಳನಿಗೆ ಕೊಡಿಸಿದರು. ಯಾಕೆಂದರೆ "ಕಳ್ಳನ ಮನೆಗೆ ಬಲುಗಳ್ಳ ಬಂದರೆ, ಕೂಡಲಸಂಗಮದೇವನಲ್ಲದೆ ಮತ್ತಾರೂ ಅಲ್ಲ" ಎಂಬುದು ಬಸವಣ್ಣನವರ ಭಾವನೆ. ತನಗೆ ಅವಶ್ಯವೆನಿಸಿದ್ದಕ್ಕಿಂತ ಹೆಚ್ಚಿನದನ್ನು ಇಟ್ಟುಕೊಳ್ಳುವುದು ಕಳ್ಳತನವೆಂದು ಬಸವಣ್ಣನವರ ವಿಚಾರ. ಇನ್ನೊಂದು ಸಲ ಕೆಲ ಪುಂಡರು ಬಸವಣ್ಣನವರ ಆಕಳುಗಳನ್ನು ಅಪಹರಿಸಿಕೊಂಡು ಹೋದರು. ಆದರೆ ಹಾಲು ಕುಡಿಯುವ ಕರುಗಳನ್ನೇ ಬಿಟ್ಟುಹೋಗಿದ್ದರು. ಆಗ ಬಸವಣ್ಣನವರು "ಅಲ್ಲಿ ಉಂಬವವನು ಸಂಗನೇ, ಇಲ್ಲಿ ಉಂಬವವನು ಸಂಗನೇ" ಎಂದು ಭಾವಿಸಿ ಕರುಗಳನ್ನೊಯ್ದು ಆಕಳುಗಳ ಬಳಿ ಬಿಟ್ಟುಬರಲು ಹೇಳುತ್ತಾರೆ. ಆದ್ದರಿಂದ ಮನುಷ್ಯನ ಸಂಗ್ರಹಪ್ರವೃತ್ತಿ ಸಂಪತ್ತಿನ ಬೆಳವಣಿಗೆಗೆ ಕಾರಣವಾದರೂ ಅದರಿಂದ ಸಾಮಾಜಿಕ ವಿಷಮತೆ ಬೆಳೆಯುತ್ತದೆ. ಸಂಪತ್ತು ಕೆಲವೇ ಜನರಲ್ಲಿ ಸಂಚಯವಾಗಿ ಬಡವ, ಶ್ರೀಮಂತ ಎಂದು ವರ್ಗಕಲಹ ಮೂಡಿ ಕೊಲೆ, ಸುಲಿಗೆ, ದರೋಡೆ ನಡೆದು ಸಮಾಜದಲ್ಲಿ ಅಶಾಂತಿ ತಲೆ ಎತ್ತುತ್ತದೆ. ಅದಕ್ಕಾಗಿ ಬಸವಣ್ಣನವರು ಸಂಪತ್ತು ಶಿವನಿಗೆ ಸೇರಿದ್ದು, ದಿನನಿತ್ಯದ ಅಗತ್ಯಕ್ಕೆ ಬೇಕಾದುದಕ್ಕಿಂತ ಹೆಚ್ಚಿಗೆ ಸಂಗ್ರಹಿಸಬಾರದು. ಹಾಗೆ ಸಂಗ್ರಹ ಮಾಡಿದರೆ ಅದು ಕಳ್ಳತನ. ಆ ಸಂಪತ್ತು ದಾಸೋಹಕ್ಕೆ ಸಲ್ಲಬೇಕು.

ಹೀಗೆ ಮನುಷ್ಯನನ್ನು ಆಶೆ-ಆಮಿಷಗಳ ದುರ್ಬಲತೆಗಳಿಂದ ಮೇಲೆತ್ತಿ ಅವನಲ್ಲಿ ಶಿವಾರ್ಪಿತ ಭಾವನೆ ಮೂಡಿಸಿ, ಅವನ ನುಡಿಯೊಳಗೆ ನಡೆ ತುಂಬಿ, ನಡೆಯೊಳಗೆ ನುಡಿ ತುಂಬಿ, ನಡೆ-ನುಡಿ ಎರಡೂ ಪರಿಪೂರ್ಣ ತುಂಬಿ, ಮನುಷ್ಯನ ಹುಟ್ಟುಗುಣವನ್ನೆ ಬದಲಿಸಿದ ಮಹಾಮಾಂತ್ರಿಕ ಬಸವಣ್ಣನವರು.

ಪ್ರತಿಯೊಬ್ಬ ಮನುಷ್ಯನಿಗೂ ಉಪಜೀವನಾರ್ಥವಾಗಿ ಒಂದು ಉದ್ಯೋಗ ಬೇಕು. ಬಸವಣ್ಣನವರು ವಿಶಾಲಾರ್ಥದಲ್ಲಿ ಈ ಉದ್ಯೋಗವನ್ನು ಕಾಯಕವೆಂದು ಕರೆದರು. ಪ್ರತಿಯೊಬ್ಬನು ಕಾಯಕವನ್ನು ಅಂದರೆ ಉದ್ಯೋಗವನ್ನು ಸದ್ಭಾವನೆಯಿಂದ ಮಾಡಬೇಕು. ಕಾಯಕದ ಮಹತ್ವವನ್ನು ಧರ್ಮದಲ್ಲಿ ಮೊಟ್ಟಮೊದಲು ಬೋಧಿಸಿ ಆಚರಣೆಯಲ್ಲಿ ತಂದವರು ಬಸವಣ್ಣನವರು. ಬಸವಣ್ಣನವರ ದೃಷ್ಟಿಯಲ್ಲಿ ಕಾಯಕವೇ ಕೈಲಾಸ, ಅದು ಮೋಕ್ಷದ ಮಾರ್ಗವೂ ಹೌದು. ಕಾಯಕವೆಂಬುದು ವೈಯಕ್ತಿಕ ಸ್ವಾರ್ಥಕ್ಕಾಗಿ ಅಲ್ಲ. ತಮ್ಮ ಹೆಂಡಿರು ಮಕ್ಕಳಿಗಾಗಿಯೂ ಅಲ್ಲ. ಅದಕ್ಕಾಗಿ ಬಸವಣ್ಣನವರು "ನಾನು ಆರಂಭವ ಮಾಡುವೆನಯ್ಯ ಲಿಂಗಾರ್ಚನೆಗೆಂದು, ನಾನು ಪರಸೇವೆಯ ಮಾಡುವೆನಯ್ಯ ಜಂಗಮ ದಾಸೋಹಕ್ಕೆಂದು, ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರಿಯೆಗೆ ಮಾಡೆನು, ನಮ್ಮ ಸೊಮ್ಮು ನಿಮಗೆ ಸಲ್ಲಿಸುವೆನು ಎಂದು ತಮ್ಮ ಇಷ್ಟದೈವ ಕೂಡಲಸಂಗಮದೇವನಿಗೆ ಮಾತು ಕೊಟ್ಟಿದ್ದಾರೆ. ಅದೇ ಕೂಡಲಸಂಗಮದೇವರ ಸಾಕ್ಷಿಯಾಗಿ "ಹೊತ್ತಾರೆಯೆದ್ದು ಕಣ್ಣು ಹೊಸೆಯುತ್ತಾ ಎನ್ನ



ಒಡಲಿಂಗೆ, ಎನ್ನ ಒಡವೆಗೆ ಎನ್ನ ಮಡದಿಮಕ್ಕಳಿಗೆಂದು ಕುದಿದೆನಾದಡೆ ಎನ್ನ ಮನಕ್ಕೆ ಮನವೇ ಸಾಕ್ಷಿ" ಎಂದು ನುಡಿದಿದ್ದಾರೆ. ಆದ್ದರಿಂದ ಭಕ್ತನಾದವನು ತಾನು ಗಳಿಸಿದ ಹಣವನ್ನು ಹೇಗೆ ವಿನಿಯೋಗಿಸಬೇಕೆಂಬುದಕ್ಕೆ ಬಸವಣ್ಣನ ಬದುಕು ದಾಸೋಹಕ್ಕಾಗಿ ವಿನಿಯೋಗಿಸಿ ಅವರು ಸುಖಿಯಾಗಿದ್ದರು. ಶರಣರು ಭಗವಂತನಲ್ಲಿ ಪೂರ್ಣ ವಿಶ್ವಾಸವುಳ್ಳವರು. ಅವರು ನಾಳೆಗಾಗಿ ಚಿಂತಿಸಿದವರಲ್ಲ. ತಮ್ಮ ದುಡಿಮೆಯ ಫಲವನ್ನು ಗುರುಲಿಂಗ ಜಂಗಮಕ್ಕೆ ದಾಸೋಹ ಮಾಡಿ ಅದನ್ನು ಪ್ರಸಾದರೂಪದಲ್ಲಿ ಸ್ವೀಕರಿಸಬೇಕೆಂಬುದೇ ಅವರ ಸಿದ್ಧಾಂತ.

ಕಾರ್ಯನಿಷ್ಠೆ ಶರಣರ ಬಾಳಿನ ಜೀವಾಳ. ಧಾರ್ಮಿಕ ಜೀವನವು ಪರಿತ್ಯಾಗದ ಹೆಸರಿನಲ್ಲಿ ಪರೋಪಜೀವನಕ್ಕೆ ಎಡೆಯಾಗದಂತೆ ಪ್ರತಿಯೊಬ್ಬ ವ್ಯಕ್ತಿಯು ಸ್ವಾವಲಂಬಿಯಾಗಿರುವಂತೆ ಕಾಯಕವು ಕಡ್ಡಾಯವಾಗಿತ್ತು. ಧರ್ಮದ ಸಂಕೇತವು ಲಿಂಗವೆಂಬುದು ಎಷ್ಟು ಸತ್ಯವೋ, ಧರ್ಮದ ಸಾಧನವು ಕಾಯಕವೆಂಬುದೂ ಅಷ್ಟೇ ಸತ್ಯವೂ, ಅನಿವಾರ್ಯವೂ ಆಗಿತ್ತು. ಅದಕ್ಕಾಗಿ "ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ. ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲ ಹರಿಯುವುದು. ಜಂಗಮನಾದಡೂ ಕಾಯಕದಿಂದಲೇ ವೇಷಪಾಶ ಹರಿಯುವುದು." ಆದ್ದರಿಂದ ದೇವರಿಗೂ ಸಹ ಕಾಯಕದ ವಿನಾಯಿತಿ ಇರಬೇಕಿಲ್ಲ.

ಕಾಯಕಜೀವಿ ಪರೋಪಜೀವಿಯಲ್ಲ, ಅವನು ಸ್ವಾವಲಂಬಿ. ಯಾವನು ಸ್ವಾವಲಂಬಿಯೋ ಅವನು ಸ್ವಾಭಿಮಾನಿ. ಯಾವನು ಸ್ವಾಭಿಮಾನಿಯೋ ಅವನು ಸ್ವತಂತ್ರನು. ಬಸವಣ್ಣನವರು ಇಂತಹ ನಾಗರಿಕತೆಯನ್ನು ರೂಪಿಸಿದರು. ಅವರ ಈ ನಿರೂಪಣೆಯಲ್ಲಿ ವ್ಯಕ್ತಿಸ್ವಾತಂತ್ರ್ಯವಿದೆ. ವಿಚಾರಸ್ವಾತಂತ್ರ್ಯವಿದೆ. ಅಂತೆಯೇ ಪ್ರತಿಯೊಬ್ಬ ವ್ಯಕ್ತಿಗೂ ಸಾಮಾಜಿಕ, ಆರ್ಥಿಕ ಸಮಾನತೆಗಳು ಇವೆ. ಬಸವಣ್ಣನವರಿಗೆ ಇಹ-ಪರದಲ್ಲಿ ಅಂತರ ಕಾಣಿಸಲಿಲ್ಲ. ಅವರು ಇಹವನ್ನು ಕಡೆಗಣಿಸಿ ಪರವನ್ನು ಮೆಚ್ಚಿದವರಲ್ಲ. ಇಹವು ಪರದ ವಿರೋಧಿಯಲ್ಲ. ಇಹವು ಪರದ ಸಿದ್ಧಿಗೆ ಸಾಧನ. ಯಾವನು ಇಹದಲ್ಲಿ ತೃಪ್ತನೊ ಅವನು ಮಾತ್ರ ಓದಬಲ್ಲನು, ತಿಳಿಯಬಲ್ಲನು, ಆಚರಿಸಬಲ್ಲನು, ಬೋಧಿಸಬಲ್ಲನು ಮತ್ತು ಮುಕ್ತಿಯನ್ನು ಪಡೆಯಬಲ್ಲನು.

ಅದಕ್ಕಾಗಿಯೇ ಬಸವಣ್ಣನವರು ಹೇಳಿದ್ದು –

ಮೃತ್ಯುಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ.

ಮನುಷ್ಯನ ಜೀವನದ ಎರಡು ಮುಖಗಳಾದ ಇಹ-ಪರಗಳೆರಡರಲ್ಲಿಯೂ ತುಂಬು ಜೀವನ ಬದುಕಬೇಕೆಂಬುದೇ ಈ ಸೂತ್ರದ ಅರ್ಥ. ಬಸವಣ್ಣನವರು ಇದನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡು ಸಮಾಜವನ್ನು ಪುನರ್ರಚಿಸಿದರು. ಧಾರ್ಮಿಕರಂಗದಲ್ಲಿ ಪ್ರವೇಶ ಬಯಸಿದವರಿಗೆ ಲಿಂಗವೆಂಬುದು ಪ್ರವೇಶಾನುಮತಿಯ ಪತ್ರವಾಗಿರಲಿಲ್ಲ. ಕಾಯಕವೇ ಪ್ರವೇಶಾನುಮತಿಯ ಪತ್ರವಾಗಿತ್ತು. ಹೀಗೆ ಕಾಯಕವು ಶರಣರ ಜೀವನದ ಅವಿಭಾಜ್ಯ

ಅಂಗವಾಗಿತ್ತು. ಕಾಯಕ ಮತ್ತು ಯೋಗ ಎರಡೂ ಬೇರೆ ಎಂಬ ಭಾವ ಬಸವಣ್ಣನವರಿಗೆ ಇರಲಿಲ್ಲ. ಸರ್ವ ಕಾಯಕವನ್ನು ಮಾಡುವಾಗ ಅವು ಶಿವನ ಪೂಜೆ, ಶಿವನ ಕಾರ್ಯವೆಂದೆ ಅವರು ತಿಳಿದವರು. ಕರ್ಮ ಅವರ ದೃಷ್ಟಿಯಲ್ಲಿ ಪೂಜೆ. ಕರ್ಮ ಮಾಡುವವನು ಅತ್ಯಂತ ಪೂಜನೀಯ. ಅದಕ್ಕಾಗಿ ಬಸವಣ್ಣನವರು –

> ಕೃಷಿಕೃತ್ಯ ಕಾಯಕದಿಂದಾದಡೇನು?
> ತನುಮನವ ಬಳಸಿ ತಂದು ದಾಸೋಹ ಮಾಡುವ
> ಪರಮ ಸದ್ಭಕ್ತನ ಪಾದವ ತೋರಯ್ಯ ಎನಗೆ
> ಅದೆಂತೆಂದರೆ ಆತನ ತನು ಶುದ್ಧ, ಆತನ ಮನ ಶುದ್ಧ,
> ಆತನ ನಡೆ ಶುದ್ಧ, ನುಡಿ ಎಲ್ಲ ಪಾವನ

ಎಂದು ಕಾಯಕಕ್ಕೆ ಗೌರವ ನೀಡಿದ್ದಾರೆ. ಅದರ ಹಿರಿಮೆಯನ್ನು ಕೊಂಡಾಡಿದ್ದಾರೆ. ಕಾಯಕದಲ್ಲಿ ಮೇಲು-ಕೀಳು ಎಂಬುದು ಇಲ್ಲವೇ ಇಲ್ಲ. "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸಲಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ" ಎಂದು ಕಾಯಕನಿರತರೆಲ್ಲರೂ ಸಮಾನರೆಂದು ಬಸವಣ್ಣನವರು ಸಾರಿ ಹೇಳಿದರು.

ಬಸವಣ್ಣನವರು ವರ್ಣಬದ್ಧ ಸಮಾಜವನ್ನು ಖಂಡಿಸಿ ವರ್ಣಾತೀತ, ಜಾತ್ಯತೀತ ಸಮಾಜವನ್ನು ಕಟ್ಟಿ ಅದರ ಪ್ರಚಾರ, ಪ್ರಸಾರಗಳಿಗಾಗಿ ಹೋರಾಡಿದರು. ಬಸವಣ್ಣನವರು ಪ್ರತಿಯೊಬ್ಬ ವ್ಯಕ್ತಿಯನ್ನು ಶಿವನ ಸ್ವರೂಪವೆಂದು ತಿಳಿದಿದ್ದರು. ಶಿವಭಕ್ತರಿಗೆ ಕುಲಗೋತ್ರಗಳ ಹಂಗಿಲ್ಲ. ಮನುಷ್ಯನ ಕುಲಗೋತ್ರ, ಜಾತಿ, ಮತ ಯಾವುವೂ ಅಡ್ಡಿ ಬರಲಾರವು. ಆದ್ದರಿಂದ ವ್ಯಕ್ತಿಗಳು ಯಾವುದೇ ಕುಲದಲ್ಲಿ ಜನಿಸಿರಲಿ, ಯಾವುದೇ ಉದ್ಯೋಗದಲ್ಲಿರಲಿ, ಅಂಥವರೆಲ್ಲರೂ ಸಮಾನರು. ಅದಕ್ಕಾಗಿ ಬಸವಣ್ಣನವರು "ವಿಪ್ರ ಮೊದಲು ಅಂತ್ಯಜ ಕಡೆಯಾಗಿ, ಶಿವಭಕ್ತರೆಲ್ಲ ಒಂದೇ ಎಂಬೆ" ಎಂದು ಹೇಳಿದರು. ಬಸವಣ್ಣನವರು ವ್ಯಕ್ತಿಯ ಆಚಾರಕ್ಕೆ ಮಹತ್ವ ಕೊಟ್ಟರು, ಜಾತಿಗಲ್ಲ. ಸದ್ವರ್ತನೆಯಿಂದ ಜಾತಿಯ ನಿರ್ಣಯವಾಗಬೇಕು, ಹಣ ಮತ್ತು ಹುಟ್ಟಿನಿಂದಲ್ಲ. ಅದಕ್ಕಾಗಿ ಬಸವಣ್ಣನವರು –

> ಕೊಲ್ಲುವವನೆ ಮಾದಿಗ, ಹೊಲಸು ತಿಂಬುವವನೆ ಹೊಲೆಯ
> ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
> ನಮ್ಮ ಕೂಡಲಸಂಗನ ಶರಣರೆ ಕುಲಜರು.

ಎಂದು ಹೇಳಿ ಬೇರೆ ಬೇರೆ ಜಾತಿಯವರನ್ನು ಅವರ ಜಾತಿಯನ್ನು ನೋಡದೆ ಅವರ ಗುಣ, ಅವರ ಆಚಾರ, ಅವರ ವಿಚಾರ ನೋಡಿ ಗೌರವಿಸಿದರು. ಬಸವಣ್ಣನವರು "ಅಪ್ಪನು ನಮ್ಮ ಮಾದರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ, ಅಣ್ಣನು ಕಿನ್ನರ ಬೊಮ್ಮಯ್ಯ, ಹಿರಿಯಯ್ಯ ಶ್ವಪಚಯ್ಯ, ಅಯ್ಯಗಳ ಅಯ್ಯನು ನಮ್ಮ ಮಾದರ ಚೆನ್ನಯ್ಯ" ಎಂದು ಹೇಳಿ



ಈ ಎಲ್ಲ ಶರಣರೊಂದಿಗೆ ಆತ್ಮೀಯ ಸಂಬಂಧ ಇರಿಸಿಕೊಂಡಿದ್ದರು. ಜಾತೀಯತೆ ಹೋಗಬೇಕೆಂದು ಎಲ್ಲರೂ ಹೇಳುತ್ತಾರೆ, ಭಾಷಣ ಮಾಡುತ್ತಾರೆ, ಬರೆಯುತ್ತಾರೆ. ಆದರೆ ನಡೆಯಲ್ಲಿ ಜಾತೀಯತೆ ಇದ್ದೇ ಇರುತ್ತದೆ. ಆದರೆ ಬಸವಣ್ಣನವರು ತಮ್ಮ ನಡೆ-ನುಡಿಗಳಿಂದ ಜಾತೀಯತೆಯನ್ನು ತಮ್ಮ ಕಾಲದಲ್ಲಿ ನಿರ್ಮೂಲ ಮಾಡಿದ್ದರು. ಬಸವಣ್ಣನವರ ಕಾಲದಲ್ಲಿಯೇ ಮಾದರ ಹುಡುಗನನ್ನು ಬ್ರಾಹ್ಮಣ ಕನ್ಯೆ ರಾಜಾರೋಷವಾಗಿ ಮದುವೆಯಾದಳು. ಅವರಿಗೆ ಬಸವಣ್ಣ ಮತ್ತು ಶರಣರು ಸರಿಸಮಾನ ಸ್ಥಾನವನ್ನು ಯಾವ ಒತ್ತಾಯವಿಲ್ಲದೆ ಕೊಟ್ಟರು. ಹರಳಯ್ಯನಿಗೆ ಅನುಭವ ಮಂಟಪದಲ್ಲಿ ಯಾವ ತಾರತಮ್ಯವು ಇಲ್ಲದೆ ಸಮಾನ ಸ್ಥಾನ ದೊರೆತಿತ್ತು. ಅಂದಿನ ಕಾಲದಲ್ಲಿ ಹರಿಜನರು, ಹಿಂದುಳಿದ ವರ್ಗದವರು ಗಣನೀಯ ಸಂಖ್ಯೆಯಲ್ಲಿ ಬೇರೆ ಬೇರೆ ಕಾಯಕ ಮಾಡುತ್ತಾ ತಮ್ಮ ಆಚಾರ-ವಿಚಾರಗಳಿಂದ ಸಮಾಜದಲ್ಲಿ ಮುಂದೆ ಬಂದು, ಪೂಜೆಯನ್ನು ಕೈಗೊಂಡು ಪೂಜಾಪೀಠದ ಮೇಲೆ ಕೂಡಲು ಅರ್ಹರಾದರು. ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ನುಲಿಯ ಚಂದಯ್ಯ, ಮೇದಾರ ಕೇತಯ್ಯ, ಮಡಿವಾಳ ಮಾಚಯ್ಯ, ಬಹುರೂಪಿ ಚೌಡಯ್ಯ, ಮೊದಲಾದ ಅನೇಕ ಶರಣ-ಶರಣೆಯರು ಸಮಾಜದಲ್ಲಿ ಪೂಜನೀಯ ಸ್ಥಾನ ಪಡೆದವರು. ಇದನ್ನು ನೋಡಿದಾಗ ಬಸವಣ್ಣನವರು ಕಂಡ ವರ್ಣಾತೀತ, ಜಾತ್ಯತೀತ ಸಮಾಜ ಕೇವಲ ಕನಸಾಗಿರಲಿಲ್ಲ. ಅದು ವಾಸ್ತವವಾಗಿತ್ತು.

ಸಮಾಜದಲ್ಲಿ ದೀನ-ದಲಿತರಂತೆ ಸ್ತ್ರೀಯರೂ ಅನೇಕ ಶತಮಾನಗಳಿಂದ ಶೋಷಣೆಗೆ ಒಳಗಾಗಿದ್ದಾರೆ. ಹೆಣ್ಣಿನ ಮಾನಭಂಗ, ಹೆಣ್ಣಿನ ಮೇಲೆ ಅತ್ಯಾಚಾರ, ಹೆಣ್ಣಿನ ಬಗ್ಗೆ ಅನಾದರ ಈಗಲೂ ಇದೆ. ಯಾವ ಸಮಾಜದಲ್ಲಿ, ಯಾವ ರಾಜ್ಯದಲ್ಲಿ ಸ್ತ್ರೀಗೆ ಸಮಾನವಾದ ಗೌರವ ಯುತವಾದ ಸ್ಥಾನವಿಲ್ಲವೋ ಆ ಸಮಾಜ, ಆ ರಾಜ್ಯ ಎಂದೂ ಒಳ್ಳೆಯದು ಆಗಲಾರದು. ಆದರೆ 12 ನೆಯ ಶತಮಾನದಲ್ಲಿ ಶರಣರು ವರ್ಣಭೇದ ಲಿಂಗಭೇದ ಕಿತ್ತೊಗೆದು ನಾಡಿಗೆ ಹೊಸ ಬೆಳಕನ್ನು ನೀಡಿದರು. ಸ್ತ್ರೀ-ಪುರುಷರ ನಡುವೆ ಯಾವ ಅಂತರವಿರಲಿಲ್ಲ. ಅವರಿಬ್ಬರೂ ಸಮಾನರು. ಅದಕ್ಕಾಗಿ –

> ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು
> ನಡುವೆ ಸುಳಿಯುವ ಆತ್ಮನು ಹೆಣ್ಣೂ ಅಲ್ಲ ಗಂಡೂ ಅಲ್ಲ

ಎಂದು ಹೇಳಿ ದೇವರ ದಾಸಿಮಯ್ಯನವರು ಸ್ತ್ರೀ-ಪುರುಷರ ನಡುವಿನ ಅಂತರವನ್ನೇ ತೊಡೆದು ಹಾಕಿದ್ದಾರೆ. ಬಸವಣ್ಣನವರು ಸ್ತ್ರೀಯರಿಗೆ ಕೊಟ್ಟ ಮನ್ನಣೆಯನ್ನು ನೋಡಿದರೆ, ಭಾರತದಲ್ಲಿ ಸ್ತ್ರೀಯರಿಗೆ ಮೊದಲು ಗೌರವ ಸ್ಥಾನವನ್ನು ಕೊಟ್ಟ ಕೀರ್ತಿ ಬಸವಣ್ಣನವರಿಗೆ ಮಾತ್ರ ಸಲ್ಲಬೇಕು. ಬಸವಣ್ಣನವರು "ಪರವಧುವನು ಮಹಾದೇವಿಯೆಂಬೆನಯ್ಯ" ಎಂದರೆ ಶಿವಯೋಗಿ ಸಿದ್ಧರಾಮೇಶ್ವರರು "ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ ನೋಡಾ" ಎಂದು ಹೆಣ್ಣಿನಲ್ಲಿ ದೇವರನ್ನು ಕಂಡಿದ್ದಾರೆ. ಬಸವಣ್ಣನವರ ಕಾಲದಲ್ಲಿ ಅನೇಕ ಶಿವಶರಣೆಯರು ಅಡುಗೆ

ಮನೆಯಿಂದ ಅನುಭವಮಂಟಪಕ್ಕೆ ಬಂದರು. ಅನುಭವಮಂಟಪದಲ್ಲಿ ಧಾರ್ಮಿಕ ಚರ್ಚೆ ನಡೆದಾಗ ಅಕ್ಕಮಹಾದೇವಿ, ಮುಕ್ತಾಯಕ್ಕ, ನೀಲಕ್ಕ, ನಿಂಬೆಕ್ಕ, ಗಂಗಾದೇವಿ, ನಿಂಗಮ್ಮ ಮೊದಲಾದ 25-30 ಜನ ಹೆಣ್ಣುಮಕ್ಕಳು ಭಾಗವಹಿಸಿ ಚರ್ಚೆಗಳನ್ನು ಮಾಡಿದ್ದು ಸಾಮಾನ್ಯವಲ್ಲ. ಇವರೆಲ್ಲರೂ ವಚನಗಳನ್ನು ರಚಿಸಿರುತ್ತಾರೆ. ಇವರಲ್ಲಿ ಕೆಲವರ ವಚನಗಳು ಉತ್ತಮವಾಗಿದೆ. ಅಕ್ಕಮಹಾದೇವಿ, ಮುಕ್ತಾಯಕ್ಕ, ಲಕ್ಕಮ್ಮರ ವಚನಗಳಾಗಲಿ, ವಾದ-ವಿವಾದಗಳಾಗಲಿ ಗಂಭೀರವಾಗಿದ್ದು, ಓದುಗರನ್ನು ಮುಗ್ಧಮಾಡುವ ಮೋಹಕ ಗುಣ ಅವುಗಳಲ್ಲಿದೆ. ಮುಕ್ತಾಯಕ್ಕಗಳು ಪ್ರಭುದೇವರ ಕೂಡ ಮಾಡಿದ ಸಂಭಾಷಣೆ ಎಂತಹ ಪಂಡಿತರನ್ನೂ ಕೂಡ ತಲೆದೂಗುವಂತೆ ಮಾಡುತ್ತದೆ. ಅನುಭವಮಂಟಪದಲ್ಲಿ ಮಹಾದೇವಿಯಕ್ಕ ಭಕ್ತಿ, ಜ್ಞಾನ, ವೈರಾಗ್ಯದಲ್ಲಿ ತನ್ನ ಹೆಬ್ಬಳ್ಳವ ತೋರಿಸಿ ಶರಣರಿಗೆ ಸರಿದೊರೆಯಾದ ಸ್ಥಾನ ಪಡೆದಳು. ಅನುಭವಮಂಟಪದಲ್ಲಿ ಶರಣರಿಗೆ ಮಹಾದೇವಿಯ ಪರಿಚಯ ಮಾಡಿಕೊಡುತ್ತಾ ಬಸವಣ್ಣನವರು "ಎನ್ನ ಹೆತ್ತತಾಯಿ ಮಹಾದೇವಿ ಅಕ್ಕನ ನಿಲುವ ನೋಡಾ, ಮಹಾದೇವಿಯಕ್ಕನೆಂಬ ಭಕ್ತಿಗೆ ಯಾವ ಹೊರೆಯೂ ಇಲ್ಲ ನೋಡಾ" ಎಂದು ಅಕ್ಕನ ನಿಲುವನ್ನು ನಿಚ್ಚಳಗೊಳಿಸಿದ್ದಾರೆ. ಶರಣರು ಅಕ್ಕನನ್ನು ಪರಿಪರಿಯ ಪರೀಕ್ಷೆಗೆ ಒಳಪಡಿಸಿದರು. ಅಕ್ಕ ಎಲ್ಲ ಪ್ರಶ್ನೆಗಳಿಗೂ ಸಮರ್ಪಕ ಉತ್ತರ ಕೊಟ್ಟು ತನ್ನ ಹಿರಿಮೆ ಮೆರೆದಳು. ಆಗ "ಅಕ್ಕನ ಶ್ರೀಪಾದಕ್ಕೆ ನಮೋ ನಮೋ" ಎಂದರು ಪ್ರಭುದೇವರು. ಎಲ್ಲ ಶರಣರೂ ಅಕ್ಕನನ್ನು ಮನತುಂಬಿ ಕೊಂಡಾಡಿದರು. ಅಂದು ಬಸವಣ್ಣನವರ ಮಾರ್ಗದರ್ಶನ ಹಾಗೂ ಪ್ರೋತ್ಸಾಹದಿಂದ ಸ್ತ್ರೀಯರು ಒಬ್ಬರಿಗಿಂತ ಒಬ್ಬರು ಸಮಾಜದಲ್ಲಿ ಹಿರಿಯ ಸ್ಥಾನ ಪಡೆದರು. ಆಯ್ದಕ್ಕಿ ಲಕ್ಕಮ್ಮನವರು ತಮ್ಮ ಪತಿ ಮಾರಯ್ಯನವರಿಗೆ ಕಾಯಕ ಕುರಿತು ಹೇಳಿದ ವಚನವನ್ನು ನೋಡಿದರೆ ವೀರಶೈವ ಹೆಣ್ಣುಮಕ್ಕಳು ಆ ಕಾಲದಲ್ಲಿ ಅಧ್ಯಾತ್ಮ ವಿಷಯದಲ್ಲಿ ಎಂತಹ ಶ್ರೇಷ್ಠ ಸ್ಥಾನ ಪಡೆದಿದ್ದರೆಂಬುದು ಗೊತ್ತಾಗುತ್ತದೆ. ಅವರ ನಿಷ್ಕಾಮ ಕಾಯಕಗಳು ಆಧುನಿಕ ಯುಗದ ಜನಗಳನ್ನು ಬೆರಗುಗೊಳಿಸುತ್ತದೆ. ಕಲ್ಯಾಣ ಕ್ರಾಂತಿಯಿಂದ ಬೇಸರಗೊಂಡ ಬಸವಣ್ಣನವರು ಕಲ್ಯಾಣ ಬಿಟ್ಟು ಕೂಡಲಸಂಗಮ ಸೇರಿದ ಮೇಲೆ ಅವರಿಗೆ ತಮ್ಮ ಪತ್ನಿ ನೀಲಲೋಚನೆಯ ನೆನಪು ಬಂದಿತು. ಅವಳನ್ನು ಕರೆದುಕೊಂಡು ಬರಲು ಹಡಪದ ಅಪ್ಪಯ್ಯನನ್ನು ಅಟ್ಟಿದರು. ಇಂತಹ ವಿಷಮ ಗಳಿಗೆಯಲ್ಲೂ ನೀಲಾಂಬಿಕೆಯ ಅಂತರಂಗ ನಲುಗಲಿಲ್ಲ, ಅಲುಗಲಿಲ್ಲ. ಬಂದದ್ದನ್ನು ಪ್ರಸಾದವೆಂದು ಸ್ವೀಕರಿಸುವ ನಿಲುವು ಅವಳದು. ಆದರೆ ಬಸವಣ್ಣನವರು ಹೀಗೆ ಮಾಡಿದ್ದು ಅವರಿಗೆ ಸರಿಕಾಣಲಿಲ್ಲ. ಆಗ ಸಾತ್ವಿಕ ಸಂತಾಪದಿಂದ ಇಷ್ಟಲಿಂಗವನ್ನುದ್ದೇಶಿಸಿ ವಚನ "ನೋಡು ನೋಡು ನೋಡು ನೋಡು ಲಿಂಗವೇ ನೋಡು ಬಸವಯ್ಯನ ಮಾಡಿದಾಟವ....." ಎಂದು ಸ್ವಗತ ನುಡಿಯುತ್ತಾ "ಅಲ್ಲಿರುವ ಸಂಗಯ್ಯ ಇಲ್ಲಿಲ್ಲವೆ, ಉಭಯವಳಿದ ಬಸವಣ್ಣಂಗೆ ಇದು ತಿಳಿಯಲಿಲ್ಲವೇ" ಎಂದು ಆ ಕ್ಷಣದಲ್ಲಿ ತನ್ನ ಆತ್ಮವನ್ನು ಇಷ್ಟಲಿಂಗದಲ್ಲಿ ಬೆರೆಸಿಬಿಟ್ಟಳು. ಈ ಕ್ಷಣದಲ್ಲಿ ನೀಲಾಂಬಿಕೆಯ ನಿಲುವು



ಬಸವಣ್ಣನವರಿಗಿಂತ ಎತ್ತರದಲ್ಲಿ ಕಾಣಿಸಿದರೆ ಆಶ್ಚರ್ಯವಲ್ಲ. ಅಲ್ಪಾವಧಿಯಲ್ಲಿ ದೊರೆತ ಅವಕಾಶದಲ್ಲಿ ಸ್ತ್ರೀಯ ವ್ಯಕ್ತಿತ್ವ ಇಷ್ಟರ ಮಟ್ಟಿಗೆ ಪ್ರಕಾಶಿಸಬೇಕಾದರೆ ಅವಳ ಅಂತರಂಗದ ಯೋಗ್ಯತೆಯನ್ನು ಸಮಾಜ ಇನ್ನೂ ಅರಿಯಬೇಕಾಗಿದೆ. ಬಸವಣ್ಣನವರು ಸ್ತ್ರೀಯ ಅರ್ಹತೆಯನ್ನು ಅರಿತೇ ಅವಳಿಗೆ ಶರಣ ಸಮಾಜದಲ್ಲಿ ಸಮಾನವಾದ ಗೌರವವನ್ನು ನೀಡಿದ್ದರು ಎನ್ನುವ ಮಾತಿನಂತೆ ಸ್ತ್ರೀಯರು ಸಹ ತಮ್ಮ ಯೋಗ್ಯತೆಯ ಬಲದಿಂದ ಸರಿಸಮಾನವಾದ ಸ್ಥಾನ ಪಡೆದರು ಎನ್ನುವ ಮಾತು ಅಷ್ಟೇ ಸತ್ಯ. ಅನುಭವ ಮಂಟಪ ಬಸವಣ್ಣನವರ ಮಹತ್ವದ ಸಾಧನೆಗಳಲ್ಲಿ ಒಂದು. ಅದು ಶರಣರ ಅನುಭಾವಗೋಷ್ಠಿಯ ವಿಚಾರಮಂಟಪ. ಮಾನವನ ಆಧ್ಯಾತ್ಮಿಕ ಇತಿಹಾಸದಲ್ಲಿ ಅನುಭವಮಂಟಪದಂತದ್ದು ಇನ್ನೊಂದಿಲ್ಲ. ಅನುಭವಮಂಟಪ ಒಂದು ಸ್ವಯಂಪೂರ್ಣ ಪ್ರಜಾಸಂಸ್ಥೆ. ಬಸವಣ್ಣನವರು ಕಂಡ ಕಲ್ಯಾಣರಾಜ್ಯದ ಸಂಚಾಲಕ ಅನುಭವಮಂಟಪವಾಗಿತ್ತು.

ಕಾರ್ಯನಿರತರಾದ ನೀತಿನಿಪುಣರಾದ ಲಿಂಗಧಾರಿಗಳಿಗೆಲ್ಲರಿಗೂ ಮೇಲು-ಕೀಳು, ಬಡವ-ಬಲ್ಲಿದ, ಸ್ತ್ರೀ-ಪುರುಷ ಎಂಬ ಭೇದಭಾವವಿಲ್ಲದೆ ಅನುಭವಮಂಟಪದಲ್ಲಿ ಪ್ರವೇಶವಿದ್ದಿತು. ಅನುಭವಮಂಟಪ ಪ್ರವೇಶಿಸುವಾಗ ಹಾಗೂ ಪ್ರವೇಶ ಪಡೆದ ಮೇಲೂ ಶರಣರು ಅಗ್ನಿಪರೀಕ್ಷೆಗೆ ಒಳಗಾಗಬೇಕಾಗುತ್ತಿದ್ದಿತು. ಅನುಭವಮಂಟಪದ ಬಾಗಿಲಿಗೆ ಬಂದ ವೈರಾಗ್ಯನಿಧಿ ಅಕ್ಕಮಹಾದೇವಿ ಇಂತಹ ಪರೀಕ್ಷೆಗೆ ಒಳಗಾಗಿದ್ದಳು. ವೇಷಭೂಷಣಕ್ಕೆ ಶರಣರು ಗೌರವ ಕೊಡುತ್ತಿದ್ದರೂ ವೇಷಕ್ಕೆ ತಕ್ಕ ಆಚರಣೆ ಇಲ್ಲದಿದ್ದರೆ ಅಂಥವರನ್ನು ತಿರಸ್ಕರಿಸುತ್ತಿದ್ದರು. ಬಸವಣ್ಣನವರು "ಲಾಂಛನಕ್ಕೆ ಶರಣೆಂಬೆ, ಲಾಂಛನಕ್ಕೆ ತಕ್ಕ ಆಚಾರವಿರದೊಡೆ ನೀ ಸಾಕ್ಷಿಯಾಗಿ ಛೀ ಎಂಬೆ" ಎಂದು ಆಚಾರಕ್ಕೆ ಮಹತ್ವ ಕೊಟ್ಟಿದ್ದಾರೆ. ಅನುಭವಮಂಟಪದ ಶರಣರು ತಮ್ಮ ಆಚಾರ-ವಿಚಾರಗಳಲ್ಲಿ ಸಂಪೂರ್ಣ ಸ್ವತಂತ್ರರಾಗಿದ್ದರು. ಅವರು ತಮ್ಮ ಇಷ್ಟದೈವವನ್ನು ಕೂಡಲಸಂಗಮದೇವಾ, ಗುಹೇಶ್ವರ, ಚೆನ್ನಮಲ್ಲಿಕಾರ್ಜುನಯ್ಯ – ಹೀಗೆ ಅನೇಕ ಹೆಸರಿನಿಂದ ಕರೆದಿದ್ದಾರೆ. ಶರಣರೆಲ್ಲರೂ ಒಂದಿಲ್ಲೊಂದು ಕಾಯಕ ಮಾಡಿ ಸ್ವಾವಲಂಬಿಯಾಗಿದ್ದರು. ಅವರಿಗೆ ಯಾರ ಹಂಗು ಇರಲಿಲ್ಲ. ಶಿವಭಕ್ತರೆಲ್ಲ ಒಂದು. ಅವರೆಲ್ಲ ಒಂದೇ ಕುಲದವರು. ಅವರ ಮಾರ್ಗ ಒಂದೇ. ಯಾರೂ ಅಲ್ಲಿ ಶಿವಭಕ್ತರ ಕುಲ ಕೇಳುತ್ತಿರಲಿಲ್ಲ. ಎಲ್ಲರೂ ಗೌರವಸ್ಥರು. ಎಲ್ಲರೂ ಸರಿಸಮಾನರು. ಬಸವಣ್ಣನವರ ಕೀರ್ತಿಯನ್ನು ಕೇಳಿ ಭಾರತದ ನಾನಾ ಭಾಗಗಳಿಂದ ಅನೇಕ ಶರಣರು ಕಲ್ಯಾಣಕ್ಕೆ ಬಂದಿದ್ದರು. ಅವರಲ್ಲಿ ಕಾಶ್ಮೀರದಿಂದ ಅಲ್ಲಿಯ ರಾಜವಂಶದ ಮಾರಯ್ಯ, ದಕ್ಷಿಣ ದೇಶದ ಅರಸು ಕಲ್ಲುಕುರಿಕೆಯ ಸಕಲೇಶ ಮಾದರಸ, ಸೌರಾಷ್ಟ್ರದಿಂದ .... ಇವರಲ್ಲಿ ಪ್ರಮುಖರಾಗಿದ್ದಾರೆ. ಅಲ್ಲದೇ ಆಂಧ್ರ, ಕಳಿಂಗ, ಸಿಂಹಳ, ಚೋಳ, ಪಾಂಡ್ಯ, ಕೇರಳ, ಮಾಳವ, ಬಂಗಾಳ, ಮಹಾರಾಷ್ಟ್ರ ಮೊದಲಾದ ರಾಜ್ಯಗಳಿಂದಲೂ ಅಲ್ಲಿಗೆ ಶರಣರು ಬಂದಿದ್ದರು.

ಶರಣರು ತಮ್ಮಲ್ಲಿ ಪರಸ್ಪರ ಸಂಬೋಧನೆ ಮಾಡುವಾಗ ಅಯ್ಯ, ಅಕ್ಕ, ಅಣ್ಣ ಎಂದು

ಕರೆದುಕೊಂಡಿದ್ದಾರೆ. ನುಲಿಯ ಚಂದಯ್ಯ, ಡೋಹರ ಕಕ್ಕಯ್ಯ, ಹರಳಯ್ಯ, ಹಡಪದ ಅಪ್ಪಣ್ಣ, ಬಸವಣ್ಣ, ಚೆನ್ನಬಸವಣ್ಣ, ಮಹಾದೇವಿಯಕ್ಕ, ಮುಕ್ತಾಯಕ್ಕ ಇತ್ಯಾದಿ. ಇದನ್ನು ನೋಡಿದಾಗ ಶರಣರಲ್ಲಿದ್ದ ಪರಸ್ಪರ ಭ್ರಾತೃಭಾವನೆ ಒಡೆದು ಕಾಣುತ್ತದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಇವು ಫ್ರೆಂಚ್ ಕ್ರಾಂತಿಯ ಕೊಡುಗೆಯೆಂದು ನಾವು ಇತಿಹಾಸದ ಓದಿನಿಂದ ತಿಳಿದಿದ್ದೇವೆ. ಆದರೆ 800 ವರ್ಷಗಳ ಹಿಂದೆಯೇ ಈ ತತ್ವಗಳು ಅನುಭವಮಂಟಪದ ಭಾಗವಾಗಿ ಶರಣರ ಜೀವಾಳವಾಗಿದ್ದವು. ಮಾನವಜೀವನದ ಈ ಅಮೂಲ್ಯ ಮೌಲ್ಯಗಳು ಬಸವಣ್ಣನವರ ಕಲ್ಯಾಣರಾಜ್ಯದ ತಳಹದಿಯಾಗಿದ್ದವು.

ವ್ಯಕ್ತಿವಿಕಾಸಕ್ಕೆ ಅನುಭವಮಂಟಪ ಅತ್ಯಂತ ಮಹತ್ವದ ವೇದಿಕೆಯಾಗಿತ್ತು. ಶರಣರು ಸಮಾಜದಲ್ಲಿ ತಮ್ಮ ಸ್ಥಾನ, ತಮ್ಮ ಹಕ್ಕುಗಳನ್ನು ತಿಳಿದವರಾಗಿದ್ದರು. ಅದಕ್ಕಾಗಿ ಅವರು ಲೋಕದ ಡೊಂಕ ತಿದ್ದಲು ಹೋಗಲಿಲ್ಲ. ತಮ್ಮ ತನುವ, ತಮ್ಮ ಮನವ ಸಂತೈಸಿಕೊಂಡರು. ಬದುಕಿನ ಪಾವಿತ್ರ್ಯತೆಗೆ ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ ಅವಶ್ಯವೆಂದು ನಂಬಿದ್ದರು. ಸಾಮಾಜಿಕವಾಗಿ ಪ್ರಗತಿಯಾಗಬೇಕಾಗಿದ್ದರೆ ಪ್ರತಿಯೊಬ್ಬ ವ್ಯಕ್ತಿಯು ಹಿತವಾಗುವಂಥದನ್ನೆ ಬಯಸಬೇಕು ಮತ್ತು ಮಾಡಬೇಕು ಎಂಬುದು ಬಸವಣ್ಣನವರ ಅಭಿಲಾಷೆಯಾಗಿತ್ತು. ಆದ್ದರಿಂದ ಸಮಾಜದಲ್ಲಿ ಒಬ್ಬ ವ್ಯಕ್ತಿಗೆ ನೋವಾದರೆ, ಆ ನೋವಿನಿಂದ ಇಡೀ ಸಮಾಜವೇ ಬಳಲುತ್ತದೆ ಎಂಬ ಭಾವನೆ ಎಲ್ಲರಲ್ಲಿಯೂ ಮೂಡಬೇಕೆನ್ನುವುದು ಬಸವಣ್ಣನವರ ಅಪೇಕ್ಷೆಯಾಗಿತ್ತು. ವ್ಯಕ್ತಿಯ ನೋವಿಗೆ ಸಮಾಜ ಸ್ಪಂದಿಸಬೇಕು, ಹಾಗೆ ಸ್ಪಂದಿಸದಿದ್ದರೆ ಅದು ಸಮಾಜವಲ್ಲ. ಅದಕ್ಕಾಗಿ ಬಸವಣ್ಣನವರು "ಶಿವಭಕ್ತರ ನೋವೇ, ಅದುವೆ ಲಿಂಗದ ನೋವು" ಎಂದು ಹೇಳಿದರು. ಬಸವಣ್ಣನವರು ವ್ಯಕ್ತಿಗೆ ಇಷ್ಟೊಂದು ಮಹತ್ವ ಕೊಟ್ಟಿದ್ದರಿಂದಲೇ ಅವರ ಕಾಲದಲ್ಲಿ ಅಷ್ಟೊಂದು ಜನ ಮೇಲೆದ್ದು ಕಾಣಿಸಿದ್ದರು.

ಬಿಜ್ಜಳನ ರಾಜ್ಯದಲ್ಲಿ ಬಸವಣ್ಣನವರ ಈ ಕಲ್ಯಾಣರಾಜ್ಯ ಸಮಾನಾಂತರದಲ್ಲಿ ಬೆಳೆದುಬಂದಿತು. ಬಿಜ್ಜಳನ ರಾಜ್ಯದಲ್ಲಿ ಬಸವಣ್ಣನವರು ಯಾವುದೇ ಹಸ್ತಕ್ಷೇಪ ಮಾಡಲಿಲ್ಲ. ಏಕೆಂದರೆ, ಮೊದಮೊದಲು ಬಿಜ್ಜಳನಿಗೆ ತನ್ನ ಅಧಿಕಾರವನ್ನು ಬಲಪಡಿಸಿಕೊಳ್ಳಲು ಶರಣರ ನೆರವು ಬೇಕಾಗಿತ್ತು. ಆದರೆ 800 ವರ್ಷಗಳ ಹಿಂದೆ, ಕಲ್ಯಾಣದಲ್ಲಿ ಒಂದು ಐತಿಹಾಸಿಕ ಘಟನೆ ನಡೆಯಿತು. ಅಸ್ಪೃಶ್ಯ ಹರಳಯ್ಯನ ಮಗ ಮತ್ತು ಬ್ರಾಹ್ಮಣ ಮಧುವರಸನ ಮಗಳು ಇವರ ಮದುವೆಯೇ ಐತಿಹಾಸಿಕ ಘಟನೆ. ಎರಡೂ ಕಡೆ ಹಿರಿಯರು ಹಾಗೂ ವಧುವರರು ಪರಸ್ಪರ ಪ್ರೀತಿಯಿಂದ ಒಪ್ಪಿಕೊಂಡ ಮದುವೆ ಇದಾಗಿತ್ತು. ಆದರೆ ಈ ಮದುವೆ ಸಂಪ್ರದಾಯವಾದಿಗಳಿಗೆ ಸನಾತನರಿಗೆ ಒಂದು ಸವಾಲಾಯಿತು. ಕೆರಳಿ ಕೆಂಡವಾದ ಅವರು ಬಿಜ್ಜಳನ ತಲೆ ಕೆಡಿಸಿದರು. ಬಿಜ್ಜಳನು ಹರಳಯ್ಯ ಮಧುವಯ್ಯರನ್ನು ಅಮಾನುಷವಾಗಿ ಕೊಲ್ಲಿಸಿದ. ಕೊನೆಗೆ ಬಿಜ್ಜಳನ ಕೊಲೆಯೂ ಆಯಿತು. ಕಲ್ಯಾಣ ಹಾಳಾಯಿತು. ಬಸವಣ್ಣನವರ ಕಲ್ಯಾಣರಾಜ್ಯ ರೂಪಗೊಂಡು ನೆಲೆಸುತ್ತಿರುವಾಗಲೇ ಅವಸಾನಹೊಂದಿತು. ಮಾನವನ



ಇತಿಹಾಸದ ಒಂದು ಹಂತದಲ್ಲಿ ಅಂತಹ ರಾಜ್ಯ ಈ ಭೂಮಿಯ ಮೇಲೆ ಇದ್ದಿತು ಎಂದು ನಂಬುವುದು ಇಂದು ಕಷ್ಟ. ಆದರೆ ಅದೊಂದು ಶೋಷಣೆರಹಿತ ವರ್ಣಾತೀತ, ಜಾತ್ಯತೀತ, ವರ್ಗರಹಿತ, ಸ್ವಾತಂತ್ರ ಸಮತೆ ಭ್ರಾತೃತ್ವದ ತಳಹದಿಯ ಮೇಲೆ ಬೆಳೆದುನಿಂತ ಸಂಪೂರ್ಣ ಸ್ವಾವಲಂಬಿ ಪ್ರಜಾರಾಜ್ಯ ಆಗಿತ್ತು. ಜಗತ್ತಿನ ಇತಿಹಾಸದಲ್ಲಿ ಮಾನವ ಜನಾಂಗದ ಮೇಲೆ ದೂರಗಾಮಿ ಪ್ರಭಾವ ಬೀರಬಲ್ಲ ಬಸವಣ್ಣನಂಥ ವಿಚಾರವಾದಿಗಳು ಬಹಳ ಕಡಿಮೆ. ಆರ್ಥರ್‌ಮೈಲಸ್ ಎಂಬ ಇಂಗ್ಲಿಷ್ ಲೇಖಕನ ಮಾತಿನಲ್ಲಿ ಹೇಳಬೇಕಾದರೆ ಬಸವಣ್ಣನವರು ಭಾರತದ ಪ್ರಥಮ ವಿಚಾರವಾದಿಗಳಾಗಿದ್ದರು. ಸರ್ ಜೇಮ್ಸ್ ಕ್ಯಾಂಬೆಲ್ ಹೇಳುವಂತೆ ಇಂದಿನ ಸಮಾಜ ಸುಧಾಕರೆಲ್ಲರೂ ಬಸವಣ್ಣನವರ ಭಾಷೆಯಲ್ಲಿಯೇ ಮಾತನಾಡುತ್ತಾರೆ. ಬಸವಣ್ಣನವರ ವಿಚಾರವನ್ನೇ ಕೃತಿಗೆ ಇಳಿಸುತ್ತಾರೆ. ಗಾಂಧಿ ಮತ್ತು ಕಾರ್ಲ್ ಮಾರ್ಕ್ಸ್ ಅವರು ಬಸವಣ್ಣನವರ ವಿಚಾರಧಾರೆಗೆ ಸಮೀಪವಾದವರು. ಗಾಂಧೀಜಿಯ ಜೀವನವೆಲ್ಲ ಭಾರತಕ್ಕೆ ಸ್ವಾತಂತ್ರ್ಯ ದೊರಕಿಸುವಲ್ಲಿಯೇ ಹೋಯಿತು. ಸ್ವಾತಂತ್ರ್ಯ ದೊರೆತ ಕೆಲವೇ ದಿನಗಳಲ್ಲಿ ಗಾಂಧೀಜಿಯವರು ಸನಾತನಿಗಳ ಗುಂಡಿಗೆ ಬಲಿಯಾದರು. ಹಾಗೆಯೇ ಸನಾತನಿಗಳ ಕಾರ್ಯವನ್ನು ನೋಡಲಾಗದೆ ಬಸವಣ್ಣ ಕಲ್ಯಾಣ ಬಿಟ್ಟಿದ್ದರು. ರಸ್ಕಿನ್ನರ ಅಂಟು ದಿ ಲಾಸ್ಟ್ (Unto the Last) ಪುಸ್ತಕದಿಂದ, ತುಳಸೀದಾಸರ ರಾಮಾಯಣ ಗ್ರಂಥದಿಂದ ಪ್ರಭಾವಿತರಾದ ಗಾಂಧೀಜಿಯವರು ಭಾರತದಲ್ಲಿ ಸರ್ವೋದಯ ಸಮಾಜದ ರಾಮರಾಜ್ಯದ ಕನಸು ಕಂಡಿದ್ದರು. ಕೊನೆಯ ಹಂತದಲ್ಲಿ ಕಮ್ಯುನಿಸಂ ವ್ಯವಸ್ಥೆಯಲ್ಲಿ ರಾಜ್ಯವೇ ಉಳಿಯಲಾರದು (State will wither away) ಎಂದು ಕಾರ್ಲ್ ಮಾರ್ಕ್ಸ್‌ರು ಭಾವಿಸಿದ್ದರು. ಆದರೆ ರಾಜ್ಯ ಮತ್ತಷ್ಟು ಗಟ್ಟಿಯಾಯಿತು. ಸರ್ವಾಧಿಕಾರಿ ಆಡಳಿತದಲ್ಲಿ ಕೆಳಗಿನ ವ್ಯಕ್ತಿ ತುಳಿತಕ್ಕೆ ಅವನ ಸ್ವಾತಂತ್ರ್ಯ ಉಳಿಯಲಿಲ್ಲ. ಸರ್ವಾಧಿಕಾರಿಯ ಆಡಳಿತ ನೆಲಕಚ್ಚಿತು. ಅದರೊಂದಿಗೆ ಕಮ್ಯುನಿಸಂ ಅನ್ನೂ ಮಣ್ಣುಗೂಡಿಸಿದರು. ಆದರೆ ಬಸವಣ್ಣನವರು ಕಂಡ ವರ್ಗರಹಿತ ಸಮಾಜ, ಕಲ್ಯಾಣರಾಜ್ಯ ಕೇವಲ ಭೌತಿಕ ಆರ್ಥಿಕ ತಳಹದಿಯ ಮೇಲೆ ನಿಂತುದಲ್ಲ. ಅದು ಪರಮಾರ್ಥದ, ನೀತಿಯ, ಧರ್ಮದ, ಸತ್ಯದ ತಳಹದಿಯ ಮೇಲೆ ಬೆಳೆಯಿತು. ಬಸವಣ್ಣನವರ ಈ ಕಲ್ಯಾಣರಾಜ್ಯದಲ್ಲಿ ಸರ್ಕಾರವಿರಲಿಲ್ಲ. ಅದರ ಅವಶ್ಯಕತೆಯೂ ಇರಲಿಲ್ಲ. ಅನುಭವಮಂಟಪವೆಂದರೆ ಶರಣರ ಪಾರ್ಲಿಮೆಂಟ್ ಇದ್ದಂತೆ. ಅದೇ ಅವರ ಸರಕಾರ. ಶರಣರು ಅನುಭವಮಂಟಪದಲ್ಲಿ ಸೇರಿ ಯಾವುದೇ ವಿಷಯ ಪ್ರಸ್ತಾವಕ್ಕೆ ಬಂದಾಗ, ಅದರ ಸಾಧಕ-ಬಾಧಕಗಳನ್ನು ಚರ್ಚಿಸಿ, ನಿರ್ಣಯ ತೆಗೆದುಕೊಳ್ಳುತ್ತಿದ್ದರು. ಆ ನಿರ್ಣಯಕ್ಕೆ ಅಧ್ಯಕ್ಷರ ಅಪ್ಪಣೆ ದೊರೆತ ಕೂಡಲೆ ಪ್ರಚಾರಕರಾದ ಕಾಯಕದ ಪ್ರಮಥರು ಆ ನಿರ್ಣಯವನ್ನು ಎಲ್ಲರಿಗೂ ತಿಳಿಸುತ್ತಿದ್ದರು ಮತ್ತು ಅದು ಕಾರ್ಯಗತವಾಗುತ್ತಿತ್ತು. ತಾವು ಮಾಡಿದ ನಿರ್ಣಯಗಳಿಗೆ ಶರಣರು ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಬದ್ಧರಾಗಿದ್ದರು. ಅವರೇ ಶಾಸಕರು, ಅವರೇ ಶಾಸನಕರ್ತರು. ಮತ್ತು ಆ ಶಾಸನವನ್ನು ಜಾರಿಗೊಳಿಸುವವರೂ ಅವರೇ. ಅಲ್ಲಿ ಎಲ್ಲರೂ ಸಕಲ ಜೀವಾತ್ಮರಿಗೆ ಲೇಸನೇ

ಬಯಸುವರು. ಅದರಿಂದ ಅಲ್ಲಿ ಹಿಂಸೆ, ಅಪರಾಧ, ಕಳ್ಳತನ ಯಾವುದೂ ಇರಲಿಲ್ಲ. ಅವರೆಲ್ಲ ತ್ಯಾಗಿಗಳು, ದಾಸೋಹಮೂರ್ತಿಗಳು. ಅದರಿಂದ ಶೋಷಣೆಗೆ ಸ್ಥಾನವಿರಲಿಲ್ಲ. ಎಲ್ಲರೂ ಅನುಶಾಸನಪ್ರಿಯರು. ಆದ್ದರಿಂದ ದಂಡಾಧಿಕಾರದ ಪ್ರಯೋಗವೇ ಇರಲಿಲ್ಲ. ಮೃದುವಚನಗಳೆ ಜಪ-ತಪಗಳು. ಅಯ್ಯ ಎಂದರೆ ಸ್ವರ್ಗ, ಎಲವೋ ಎಂದರೆ ನರಕ ಎಂದು ತಿಳಿದ ಅವರು ಬಿರುನುಡಿಗಳಿಂದ ಇನ್ನೊಬ್ಬರನ್ನು ನೋಯಿಸುವ ಪ್ರಶ್ನೆಯೇ ಇರಲಿಲ್ಲ.

ಹೀಗೆ ಬಸವಣ್ಣನವರ ಕಲ್ಯಾಣರಾಜ್ಯ ಒಂದು ಸ್ವಯಂಪೂರ್ಣ ಆದರ್ಶ ಪ್ರಜಾಪ್ರಭುತ್ವ. ಅಂತಹದು ವಿಶ್ವದಲ್ಲಿ ಬೇರೊಂದಿಲ್ಲ. ಕಾರ್ಲ್ ಮಾರ್ಕ್ಸ್ ಮತ್ತು ಅವನ ಸಿದ್ಧಾಂತಗಳು ಸದ್ಯದ ಮಟ್ಟಿಗೆ ಅಪ್ರಸ್ತುತವಾಗಿರಬಹುದು. ಆದರೆ ಬಸವಣ್ಣನವರು ಮತ್ತು ಅವರ ತತ್ವಗಳು ಸಾರ್ವಕಾಲಿಕವಾದವುಗಳು. ಅವು ಎಂದೂ ಅಪ್ರಸ್ತುತವಾಗಲಾರವು. ಜಗತ್ತು ಇಂದು ಕವಲು ದಾರಿಯಲ್ಲಿದೆ. ಜಗತ್ತಿನ ಎಲ್ಲ ಸಮಸ್ಯೆಗಳಿಗೂ ಬಸವಣ್ಣನವರ ವಚನಗಳಲ್ಲಿ ಪರಿಹಾರ ಇದೆ. ಆದರೆ ಮೊದಲು ನಾವು ಬಸವಣ್ಣನವರನ್ನು ಅರಿಯಬೇಕು. ವಿಶ್ವಕ್ಕೆ ಅವನ ಪರಿಚಯ ಮಾಡಿಕೊಡಬೇಕು.

□

ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ
ಬೆಳೆದೆನು ಅಸಂಖ್ಯಾತರ ಕರುಣದೊಳಗೆ
ಭಾವವೆಂಬ ಹಾಲು ಸುಜ್ಞಾನವೆಂಬ ತುಪ್ಪ
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ !
ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದು ಸಲಹಿದರೆನ್ನ
ವಿವಾಹವ ಮಾಡಿದಿರಿ, ಸ್ವಯವಪ್ಪ ಗಂಡಂಗೆ ಕೊಟ್ಟಿರಿ
ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ
ಬಸವಣ್ಣ ಮೆಚ್ಚಲು ಒಗೆತನವ ಮಾಡುವೆ
ಚನ್ನಮಲ್ಲಿಕಾರ್ಜುನನ ಕೈವಿಡಿದು
ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು
ಅವಧರಿಸಿ ನಿಮ್ಮಡಿಗಳೆಲ್ಲರೂ ಮರಳಿ ಬಿಜಯಂಗೈವುದು ಶರಣಾರ್ಥಿ !

**- ಅಕ್ಕಮಹಾದೇವಿ**

# ದರ್ಶನವಿಶಾರದ, ಶಿವಧರ್ಮಭೂಷಣ ಪಂ. ನಾಗಭೂಷಣ ಶಾಸ್ತ್ರಿಗಳು

**ಡಾ. ಪಂಚಾಕ್ಷರಿ ಹಿರೇಮಠ**

ಮುಖದ ತುಂಬ ಮಂದಹಾಸ, ನಿರ್ಮಾತ್ಸರ್ಯ, ತ್ರಿಪುಂಡ್ರದಿಂದ ಸುಶೋಭಿತವಾದ ವಿಶಾಲ ಲಲಾಟ, ದೈವೀ ಕಳೆಯಿಂದ ಹೊಳೆಯುವ ಪ್ರಶಾಂತ ಮುಖಮುದ್ರೆ, ನಿರಾಡಂಬರ, ನಿರ್ವಿಕಾರ, ನಿರಹಂಕಾರ, ಉಡುಪು ಶುಭ್ರ, ಬದುಕು ಇನ್ನೂ ಶುಭ್ರ, ನಗೆ ಬೆಳದಿಂಗಳು, ನಡೆದರೆ ಗಂಭೀರವಾಗಿ ಸಾಗುವ ಸಾಗರದ ನೆನಪು, ವಿಷಯವನ್ನೆಲ್ಲ ಗೆದ್ದ ನಿಲುವು, ಎಲ್ಲ ವಿದ್ಯೆ, ತತ್ತ್ವ ಅಂಗೈಯ ನೆಲ್ಲಿಕಾಯಿ, ಇವರು ಇನ್ನಾರೂ ಅಲ್ಲ ಮಹಾನ್ ಪಂಡಿತೋತ್ತಮ ನಾಗಭೂಷಣ ಶಾಸ್ತ್ರಿಗಳು.

ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲ್ಲೂಕಿನಲ್ಲಿರುವ ಪುಟ್ಟ ಗ್ರಾಮ ಸಂಗನಾಳ. ಸುತ್ತಲಿನ ಹಳ್ಳಿಗಳಿಗೆಲ್ಲ ಸುಪ್ರಸಿದ್ಧವಾದ ಶಾಸ್ತ್ರೀಮಠ. ಅಲ್ಲಿ ಶಾಸ್ತ್ರಪುರಾಣ ಹೇಳುವುದರಲ್ಲಿ ಈ ಮಠದ ಮಾಹೇಶ್ವರರು ಬಲ್ಲಿದರಾಗಿದ್ದರು. ಅಂಥ ಸುಸಂಸ್ಕೃತ, ಆಚಾರನಿಷ್ಠ ಮಠ 8.4.1906 ರಂದು ರವಿವಾರ ಜನ್ಮತಳೆದ ನವಜಾತ ಶಿಶುವಿನ ಸ್ವಾಗತದಲ್ಲಿ ತನ್ಮಯವಾಗಿತ್ತು. ಆ ಮಗುವೇ ಪಂಡಿತ ಶಿವಾದ್ವೈತರತ್ನ, ಶಿವಧರ್ಮಭೂಷಣ ಇತ್ಯಾದಿ ಬಿರುದಾಂಕಿತ ನಾಗಭೂಷಣ ಶಾಸ್ತ್ರಿಗಳು.

ಇಂಥ ಘನ ವಿದ್ವಾಂಸನ ತಾಯಿ ಲಿಂಗಮ್ಮ,ತಂದೆ ವೇದಮೂರ್ತಿ ಪರ್ವತರಾಜಯ್ಯ. ನಾಗಭೂಷಣರಿಗೆ ಬಾಲ್ಯದಲ್ಲಿಯೇ ಸೋದರತ್ತೆಯ ಮಗಳು ಆರು ತಿಂಗಳ ಹಾಲುಗಲ್ಲದ ಹಸುಗೂಸು ಶಿವಗಂಗಮ್ಮನೊಂದಿಗೆ ಮದುವೆ ನಡೆಯಿತು. ಈಗ ಶಕ್ತಿಸಮೇತ ಶಿವನಾದ, ನಾಗಭೂಷಣ.

ಸಂಗನಾಳ, ನಿಡಗುಂದಿ, ಹಾಲಕೆರೆಯ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸ. ಹಾಲಕೆರೆಯ ಗುರುಕುಲದ ಓದು ಮುಗಿದಾಗ ಜ್ಞಾನದಾಹ ಇನ್ನೂ ಹೆಚ್ಚಿತು. ಅವರ ಈ ಜ್ಞಾನದ ಹಸಿವನ್ನು ಅರಿತ ಪರಮಪೂಜ್ಯ ಮಹಾತಪಸ್ವಿ ಶ್ರೀ ನಿ.ಪ್ರ. ಅನ್ನದಾನ ಮಹಾಸ್ವಾಮಿಗಳು ಅವರನ್ನು ಕಾಶಿಗೆ ಕಳಿಸಲು ಸಿದ್ಧರಾದರು. ಎಪ್ಪತ್ತು ವರುಷಗಳ ಹಿಂದೆ ದೂರದ ಕಾಶಿಗೆ ಹೋಗುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಆದರೆ ಜ್ಞಾನಸಂಚಯಕ್ಕಾಗಿ ಎಲ್ಲಿಗೆ ಬೇಕಾದರೂ ಹೋಗಲು ಅವರು ಸಿದ್ಧರಾಗಿದ್ದರು. ಆಗಲೇ ಅಂಥ ನಿರ್ಲಿಪ್ತತೆ. ಬಾಲ್ಯದಲ್ಲಿಯೇ ತಾಯಿ, ತಂದೆ,

ಇದ್ದೊಬ್ಬ ಅಕ್ಕ ಎಲ್ಲರನ್ನೂ ಕಳೆದುಕೊಂಡು ಅಜ್ಜಿ ವೀರಮ್ಮನ ಕಣ್ಣು ಕಾಪಿನಲ್ಲಿ ಬೆಳೆದು, ಆಗಲೇ ಭಿಕ್ಷಾಟನೆಗೈದುದರ ಫಲವಾಗಿ ಅಹಂಕಾರದ ಹೆಡೆ ಮೆಟ್ಟಿದುದರಿಂದ ಒಂದು ರೀತಿಯ ನಿರ್ಮೋಹ, ಕೇವಲಜ್ಞಾನದ ಅನುಭಾವದ ಮೋಹ. ಅನುಭಾವಿಗಳ ಸಂಗದ ಆಶೆ.

ಕಾಶಿಗೆ ಹೋದ ನಾಗಭೂಷಣರು ಅಲ್ಲಿ ಆರು ವರ್ಷಗಳ ಕಾಲವಿದ್ದು ಕಲಕತ್ತಾ ಹಾಗೂ ಕಾಶೀ ವಿದ್ಯಾಪೀಠಗಳ ವೇದಾಂತ, ಸಾಹಿತ್ಯ, ನ್ಯಾಯ, ತರ್ಕ, ಮೀಮಾಂಸೆಗೆ ಸಂಬಂಧಿಸಿದ ಪರೀಕ್ಷೆಗಳನ್ನು ಬಹು ಸಮರ್ಥ ರೀತಿಯಲ್ಲಿ ಮುಗಿಸಿ, ಗುರುಗಳ ಹಾಗೂ ಆ ಕಾಲದ ಕಾಶಿಯ ವಿದ್ವಾಂಸರ ಮೆಚ್ಚಿಕೆ, ಪ್ರಶಂಸೆ ಸಂಪಾದಿಸಿದರು. ಅವರ ವಿದ್ಯಾಗುರುಗಳಲ್ಲೊಬ್ಬರೂ, ಆಗಿನ ವಿದ್ವಾಂಸರಲ್ಲಿಯೇ ಪ್ರಕಾಂಡ ಪಂಡಿತರೂ ಆಗಿದ್ದ ಮಹಾಮಹೋಪಾಧ್ಯಾಯ ಪಂಡಿತ ಗೋಪೀನಾಥ ಕವಿರಾಜರು ನಾಗಭೂಷಣರ ಪಾಂಡಿತ್ಯ ಹಾಗೂ ಸರಳ ಸಜ್ಜನಿಕೆ, ಸೇವಾಧರ್ಮಕ್ಕೆ ಮಾರುಹೋಗಿದ್ದರು. ಅವರೊಮ್ಮೆ ಅಪಾರ ಅಭಿಮಾನದಿಂದ ನಾಗಭೂಷಣರನ್ನು ಕುರಿತು ಹೀಗೆ ಹೇಳಿದರು – "ನಾಗಭೂಷಣಜಿ, ತುಮ್ ಪರ್ ಹಮೆ ಗರ್ವ್ ಹೈ" (ನಿಮ್ಮ ಬಗೆಗೆ ನಮಗೆ ಅಭಿಮಾನವಿದೆ). ನಾಗಭೂಷಣರ ಘನ ವ್ಯಕ್ತಿತ್ವಕ್ಕೆ ಅವರ ಗುರುವಿನ ಇದೊಂದು ಮಾತು ಸಾಕೆಂದು ತೋರುತ್ತದೆ. ಅಂಥ ಗುರುವನ್ನು ಪಡೆದ ಶಿಷ್ಯ, ಇಂಥ ಶಿಷ್ಯನನ್ನು ಪಡೆದ ಗುರು ಇಬ್ಬರೂ ಭಾಗ್ಯಶಾಲಿಗಳು.

ಕಾಶಿಗೆ ಹೋಗುವಾಗ ಜ್ಞಾನದ ಹಸಿವು, ಮರಳಿ ಬಂದಾಗ ಜ್ಞಾನದ ಪಿಪಾಸೆಯನ್ನು ತಣಿಸಿಕೊಂಡು ಬಂದ ಸಂತೃಪ್ತಿ. ಈಗ ಅವರಿಗೆ ತಮ್ಮಂತೆ ಜ್ಞಾನದ ಹಸಿವೆಯಲ್ಲಿರುವವರಿಗೆ ತಾವು ಶ್ರದ್ಧೆಯಿಂದ ಗಳಿಸಿಕೊಂಡು ಬಂದ ಜ್ಞಾನವನ್ನು ಹಂಚುವ ಆತುರ. ವಿದ್ಯೆಯ ಕಡಲಾಗಿ ಬಂದ ಶಾಸ್ತ್ರಿಗಳಿಗೆ ಜಿಜ್ಞಾಸುಗಳನ್ನು ತಮ್ಮ ತಟಕ್ಕೆ ಕರೆದುತರುವ ಹವಣಿಕೆ.

ಈ ಹವಣಿಕೆಯಲ್ಲಿ ಕಾಶಿಯಿಂದ ತಾಯ್ನಾಡಿಗೆ ಮರಳಿದ ನಾಗಭೂಷಣರು ವಿಶ್ವನಾಥನ ಸಂಪೂರ್ಣ ಕರುಣೆಯನ್ನು ಪಡೆದುಕೊಂಡೇ ಬಂದರು – ಕನ್ನಡ ತಾಯಿಯ ಸೇವೆಗೆ ಸನ್ನದ್ಧರಾಗಿ ಬಂದ ವೀರ ಯೋಧನಂತೆ. ಧರ್ಮ, ಧರ್ಮವೂ ತಾಯಿಯೇ; ಅಂಥ ತಾಯಿಯ ಸೇವೆಗೆ ಪೂರ್ಣ ರೀತಿಯಲ್ಲಿ ಸಮರ್ಪಿಸಿಕೊಳ್ಳುವ ಬಯಕೆ ಹೊತ್ತು ಬಂದರು. ಹೀಗೆ ಅವರು ಈ ನಾಡಿಗೆ ಬಂದಾಗ ಪರಮ ಶಿವಯೋಗಿ ತೋಂಟದ ಶ್ರೀ ಸಿದ್ಧಲಿಂಗನ ಪಾದಸ್ಪರ್ಶದಿಂದ ಪುನೀತವಾದ ಶ್ರೀ ವೀರನಾರಾಯಣಸ್ವಾಮಿಯ ನೆಲೆಸುವಿಕೆಯಿಂದ ಕ್ಷೇತ್ರವಾಗಿರುವ ಗದುಗು ನಿಜಕ್ಕೂ ಪುಣ್ಯ ಮಾಡಿತ್ತು. ಸರಿ, ಅಲ್ಲಿಂದಾಚೆಗೆ ಗದುಗು ಶಾಸ್ತ್ರಿಗಳ ಸೇವಾಕ್ಷೇತ್ರವಾಯಿತು.

ಶಾಸ್ತ್ರಿಗಳ ಬದುಕನ್ನು ರೂಪಿಸಿದ ಹಾಲಕೆರೆಯ ಮಹಾತಪಸ್ವಿಗಳ ಆಶ್ರಯ ಮತ್ತೆ ಇಲ್ಲಿಯೂ ಅವರ ನೆರವಿಗೆ ಬಂತು. ಆನಂದಾಶ್ರಮ ಹಾಗೂ ಹಡಗಲಿಮಠ ಅದರ ಸುತ್ತಮುತ್ತಲಿನ ಪರಿಸರ ದಿನನಿತ್ಯ ಬೆಳಕು-ಬೈಗಿನಲ್ಲಿ ನಡೆಯುತ್ತಿದ್ದ ಶಾಸ್ತ್ರಿಗಳ ಪ್ರವಚನಗಳಿಂದ ಹೊಸ ಜೀವಕಳೆ ಪಡೆಯಿತು. ಗದುಗಿನಲ್ಲಿ ಧಾರ್ಮಿಕ, ಸಾಹಿತ್ಯ ಕ್ಷೇತ್ರದಲ್ಲಿ ಶಾಸ್ತ್ರಿಗಳ ಈ



ಪ್ರವಚನಗಳಿಂದ ಹೊಸ ಮನ್ವಂತರವೊಂದು ಆರಂಭವಾಯಿತು. ಕೆಲವೇ ಜನರು ಬರುತ್ತಿದ್ದ ಪ್ರವಚನ ಬರಬರುತ್ತ ಸಾವಿರಾರು ಜನ ಆಸಕ್ತರಿಂದ ತುಂಬಿಹೋಯಿತು. ಶಾಸ್ತ್ರಿಗಳ ಪ್ರವಚನದ ರೀತಿಯೇ ಹಾಗೆ. ಸುಲಿದ ಬಾಳೆಯ ಹಣ್ಣಿನಂದದಿ ಲೀಲಾಜಾಲವಾಗಿ ಷಡ್ದರ್ಶನಗಳ ವ್ಯಾಖ್ಯಾನ, ಉಪನಿಷತ್ತುಗಳ ವಿವೇಚನೆ, ಶಿವಯೋಗಿ ಶಿವಾಚಾರ್ಯರ ಸಿದ್ಧಾಂತ ಶಿಖಾಮಣಿಯ ತಾತ್ವಿಕ ವಿಶ್ಲೇಷಣೆ, ಭಗವದ್ಗೀತೆಯ ಎಲ್ಲ ಕಗ್ಗಂಟುಗಳನ್ನೂ ಬಿಡಿಸಿ ತೋರುವ ಜಾಣ್ಮೆ, ಬಸವಾದಿ ಪ್ರಮಥರ ವಚನಗಳಲ್ಲಿಯ ಬೆಡಗನ್ನು ವೀರಶೈವ ಸಿದ್ಧಾಂತ, ಶಿವಾಗಮಗಳ ಹಿನ್ನೆಲೆಯಲ್ಲಿ ವಿಶದೀಕರಿಸುವ ವಿದ್ವತ್ತು, ಮಗ್ಗೆಯ ಮಾಯಿದೇವರ ಶತಕತ್ರಯ, ವಿಶೇಷಾರ್ಥ ಪ್ರಕಾಶಿಕಾ, ಶಿವಾನುಭವ ಸೂತ್ರದ ತತ್ವಾನುಬೋಧನ, ಶಾಸ್ತ್ರಿಗಳ ನಿರರ್ಗಳವಾದ ಆ ಪ್ರವಚನ, ಅದೊಂದು ಪ್ರಶಾಂತ ನಿರ್ಝರಿಣಿ !

ಅವರು ಅಖಿಲ ಭಾರತ ವೀರಶೈವ ವಿದ್ಯಾಪೀಠವನ್ನು ಸ್ಥಾಪಿಸಿ ಅದರ ಮುಖಾಂತರ ಯುವಕರಿಗೆ ಪರೀಕ್ಷೆಗಳನ್ನು ನಡೆಯಿಸಿದರು. ಸಾಹಿತ್ಯ ಪ್ರವೇಶ, ಸಾಹಿತ್ಯ ಮಧುಕರ, ಸಾಹಿತ್ಯ ಭೂಷಣ, ಸಾಹಿತ್ಯ ಶಿರೋಮಣಿ ಹೀಗೆ ತರಗತಿಗಳನ್ನು ಏರ್ಪಡಿಸಿ ಅದಕ್ಕೆ ಬೇಕಾಗುವ ಪಠ್ಯಪುಸ್ತಕಗಳನ್ನು ಯೋಜಿಸಿದರು. ಈ ಯೋಜನೆಯ ಅಂಗವಾಗಿ ವಚನಮಧು-ಭಾಗ 1-2, ವೀರಶೈವ ತತ್ವಪ್ರವೇಶ, ಸರ್ವಜ್ಞನ ವಚನಸಂಗ್ರಹ, ಗದ್ಯಸಂಗ್ರಹ, ಮೈಲಾರ ಬಸವಲಿಂಗ ಶರಣರ ಅಷ್ಟಾವರಣ, ಪಂಚಾಚಾರ, ಧರ್ಮಾಚಾರ ಮುಂತಾದ ಗ್ರಂಥಗಳನ್ನು ಸಂಪಾದಿಸಿದರಲ್ಲದೆ ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ಅನೇಕ ಮೌಲಿಕ ಕೃತಿಗಳನ್ನು ರಚಿಸಿದರು. ಈ ವಿದ್ಯಾಪೀಠದ ಕೇಂದ್ರಗಳು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ರಾಜ್ಯಗಳಲ್ಲೂ ಸ್ಥಾಪಿತವಾಗಿ ಅಲ್ಲೆಲ್ಲ ಈ ಪರೀಕ್ಷೆಗಳು ನಡೆಯತೊಡಗಿದವು. ಈ ಪರೀಕ್ಷೆಗಳ ವಿಶೇಷತೆಯೆಂದರೆ ವಿದ್ಯಾರ್ಥಿಗಳಲ್ಲಿ ಎಲ್ಲ ಧರ್ಮೀಯರೂ ಇದ್ದುದು. ಕಾಶಿಯಲ್ಲಿದ್ದ ಕನ್ನಡ ಜನ ಕೂಡ ಅಲ್ಲಿ ಒಂದು ಕೇಂದ್ರ ಸ್ಥಾಪಿಸಿ, ಈ ಪರೀಕ್ಷೆಗಳಿಗಾಗಿ ವಿದ್ಯಾರ್ಥಿಗಳನ್ನು ಕೂಡಿಸುತ್ತಿದ್ದರೆಂದರೆ ಇವುಗಳ ಮಹತ್ವ ಹಾಗೂ ಜನಪ್ರಿಯತೆ ವೇದ್ಯವಾಗುತ್ತದೆ. ಶಾಸ್ತ್ರಿಗಳ ಈ ನವಮನ್ವಂತರದ ಪರೀಕ್ಷೆಯಲ್ಲಿ ತೇರ್ಗಡೆಯಾದವರು ಒಳ್ಳೆಯ ಜೀವನ ನಡೆಯಿಸಿ, ತಮ್ಮ ಸಮಾಜಕ್ಕೂ, ರಾಷ್ಟ್ರಕ್ಕೂ ಸೇವೆ ಸಲ್ಲಿಸಿದ್ದಾರೆ. ಅನಂತರ ಶಾಸ್ತ್ರಿಗಳು ನಮ್ಮ ಹೆಣ್ಣುಮಕ್ಕಳಿಗಾಗಿ ಒಂದು ಪ್ರತ್ಯೇಕ ವೇದಿಕೆ ಬೇಕೆಂಬುದನ್ನು ಮನಗಂಡು, ಮೊದಲಿಗೆ ವೀರವಿರಾಗಿಣಿ ಅಕ್ಕಮಹಾದೇವಿಯ ಹೆಸರಿನಲ್ಲಿ "ಅಕ್ಕನ ಬಳಗ"ವನ್ನು ಸ್ಥಾಪಿಸಿ, ಅನುಭವದ ವಿನಿಮಯಕ್ಕಾಗಿ ಮಹಿಳೆಯರಿಗೆ ಒಂದು ವೇದಿಕೆ ನಿರ್ಮಿಸಿಕೊಟ್ಟರು. ಆಗಲೇ ಅವರು "ಅಕ್ಕಮಹಾದೇವಿಯ ಆದರ್ಶ ಜೀವನ", "ಬಸವಣ್ಣನವರ ಆದರ್ಶ ಜೀವನ" ಮುಂತಾದ ಗ್ರಂಥಗಳನ್ನು ರಚಿಸಿದರು.

ಗದುಗಿನ ಜನ ಕೃತಜ್ಞತಾ ಮನೋಭಾವದವರು. ಅಂತೆಯೇ ಶಾಸ್ತ್ರಿಗಳ ಈ ಅಪೂರ್ವ ಸೇವೆಯನ್ನು ಮನಗಂಡು 1950 ರಲ್ಲಿ ಅಭೂತಪೂರ್ವ ಸಮಾರಂಭ ಏರ್ಪಡಿಸಿ ಸಿದ್ಧಗಂಗಾ

ಮಠಾಧ್ಯಕ್ಷರಾದ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಅವರಿಗೆ ಐದು ಸಹಸ್ರ ರೂಪಾಯಿಗಳನ್ನು, ಶಾಲು ಹೊದಿಸಿ "ಶಿವಾದ್ವೈತ ಸಿದ್ಧಾಂತ ರತ್ನ" ಎಂಬ ಪ್ರಶಸ್ತಿಯೊಂದಿಗೆ ಅರ್ಪಿಸಿದರು. ಆ ಹೊತ್ತಿಗಾಗಲೇ ಶಾಸ್ತ್ರಿಗಳ ಸಂಸಾರದ ಬಳ್ಳಿಗೆ ಆರು ಫಲಗಳು – ನಾಲ್ವರು ಹೆಣ್ಣುಮಕ್ಕಳು, ಇಬ್ಬರು ಗಂಡುಮಕ್ಕಳು. ಮನೆಗೆ ಬಂದುಹೋಗುವ ಅತಿಥಿಗಳು, ಬಡ ವಿದ್ಯಾರ್ಥಿಗಳು, ಇವರೆಲ್ಲರ ಹೊಣೆ, ಊಟ ಉಪಚಾರ, ಉಡುಗೆ ತೊಡುಗೆಗಳ ಖರ್ಚು. ಶಾಸ್ತ್ರಿಗಳಿಗೆ ಲವಲೇಶವೂ ಚಿಂತೆಯಿಲ್ಲ. ಕೊಡುವವನೂ ಸಂಗ, ಕೊಳ್ಳುವವನೂ ಸಂಗನೆಂಬ ಭಾವ. ಆ ಭಾವದಲ್ಲಿ ಅಚಲವಾದ ನಂಬಿಕೆ. ಗದುಗಿನ ಜನ ನೀಡಿದ ಐದು ಸಹಸ್ರ ರೂಪಾಯಿಗಳನ್ನು ಶಾಸ್ತ್ರಿಗಳು ತಮ್ಮ ಸುಖಕ್ಕೆ ಬಳಸದೆ ಸಮಾಜದ ಸರ್ವತೋಮುಖ ಏಳ್ಗೆಗಾಗಿ ಹೆಚ್ಚಿನ ರೀತಿಯಲ್ಲಿ ದುಡಿಯಲೆಂದು "ಶ್ರೀ ಸಿದ್ಧಲಿಂಗೇಶ್ವರ ಮುದ್ರಣಾಲಯ"ವನ್ನು ಸ್ಥಾಪಿಸಿದರು. ಆ ಮುದ್ರಣಾಲಯದಲ್ಲಿ ಮನೆಯ ಸದಸ್ಯರೆಲ್ಲರೂ ದುಡಿಯುತ್ತಿದ್ದುದನ್ನು ನಾನು ಕಣ್ಣಾರೆ ಕಂಡು ಅವರೆಲ್ಲರ ಕಾಯಕನಿಷ್ಠೆಗೆ ಮಾರುಹೋಗಿದ್ದೆ. ಶ್ರೀಮತಿ ಶಿವಗಂಗಮ್ಮನವರು ಶಾಸ್ತ್ರಿಗಳ ಶಕ್ತಿಯಾಗಿ, ಬಲವಾಗಿ ಸಂಸಾರ ಸಾಗಿಸಿಕೊಂಡು ಬಂದರು. ಎಪ್ಪತ್ತೆರಡು ವರ್ಷಗಳ ಅವರ ದಾಂಪತ್ಯ ಜೀವನ ಬಹು ಆದರ್ಶವಾದುದಾಗಿತ್ತು.

ಸ್ವಂತದ ಮುದ್ರಣಾಲಯ ಹಾಕಿದ ನಂತರ ಶಾಸ್ತ್ರಿಗಳು ಸಾಕಷ್ಟು ಗ್ರಂಥಗಳನ್ನು ಪ್ರಕಟಿಸಿದರು. ಅವುಗಳಲ್ಲಿ ಪ್ರಮುಖವಾದವುಗಳು – ಸೊಗಸಿನ ಬಾಳು, ಜೀವನಯಾತ್ರೆ, ಅನುಭವಮುದ್ರೆ, ಚೆನ್ನಬಸವಣ್ಣನ ನೂರೆಂಟು ವಚನಗಳ ಸಂಗ್ರಹ, ತೋಂಟದ ಸಿದ್ಧಲಿಂಗ ಶಿವಯೋಗೀಶ್ವರರ ನೂರೆಂಟು ವಚನಗಳ ಸಂಗ್ರಹಗಳು. ಈ ಯುಗದ ಮಹಾಮಹಿಮರೂ, ಅಪಾರ ಅಂತಃಕರಣಿಗಳೂ, ತ್ರಿವಿಧದಾಸೋಹಮೂರ್ತಿಗಳೂ, ಧಾರವಾಡದ ಶ್ರೀ ಮುರುಘಾಮಠಾಧ್ಯಕ್ಷರೂ ಆದ ಶ್ರೀ ನಿ.ಪ್ರ. ಮೃತ್ಯುಂಜಯ ಅಪ್ಪಗಳ ಕೃಪೆ ಶಾಸ್ತ್ರಿಗಳ ಮೇಲೆ ಮೊದಲಿನಿಂದಲೂ ಇದ್ದುದರಿಂದ, ಅವರು ಶಾಸ್ತ್ರಿಗಳಿಗೆ ಮತ್ತೊಂದು ಜವಾಬ್ದಾರಿಯನ್ನು ಹೊರಿಸಿದರು. ಅಖಿಲ ಭಾರತ ಶಿವಾನುಭವ ಸಂಸ್ಥೆ ಧಾರವಾಡದ ಮುರುಘಾಮಠದಲ್ಲಿದ್ದು, ಅದರ ಮುಖಪತ್ರಿಕೆ ಗದುಗಿನಲ್ಲಿ ಶಾಸ್ತ್ರಿಗಳ ಸಂಪಾದಕತ್ವದಲ್ಲಿ ಸಿದ್ಧಗೊಂಡು ಧಾರವಾಡದಲ್ಲಿ ಪ್ರಕಟಗೊಳ್ಳತೊಡಗಿತು. ಹೀಗೆ ಶಾಸ್ತ್ರಿಗಳ ಸೇವಾಕ್ಷೇತ್ರ ವಿಶಾಲವಾಗುತ್ತ ಹೋಯಿತು. ಸುಮಾರು ಐವತ್ತು ವರ್ಷಗಳ ಕಾಲ, ಶ್ರೀ ಗುರುವಿನ ಕೃಪೆಯೆಂದೇ ಭಾವಿಸಿ ಆ ಪತ್ರಿಕೆಯನ್ನು ಸಮರ್ಥವಾಗಿ ನಡೆಯಿಸಿಕೊಂಡು ಬಂದರು.

ಪೂಜ್ಯಪಾದರಾದ ಶ್ರೀ ಮೃತ್ಯುಂಜಯ ಅಪ್ಪಗಳ ಹಾಗೂ ಶ್ರೀ ಮಹಾಂತಪ್ಪಗಳ ಕಾರುಣ್ಯಶರಧಿಯಲ್ಲಿ ಮಿಂದ ಪುಣ್ಯ ಶಾಸ್ತ್ರಿಗಳದು. ಉಭಯ ಶ್ರೀಗಳವರ ಆಣತಿಯಂತೆ ಅಷ್ಟು ದೀರ್ಘಕಾಲದ ಸೇವಾಕ್ಷೇತ್ರವಾದ ಗದುಗನ್ನು ತೊರೆದು, ಯಾವ ಆಮಿಷಕ್ಕೂ ಪಕ್ಕಾಗದೆ "ಜಂಗಮದ ಆಜ್ಞೆ, ಅದನ್ನು ಪಾಲಿಸಬೇಕು" ಎಂಬ ತತ್ತ್ವಕ್ಕೆ ಬಾಗಿ ಧಾರವಾಡಕ್ಕೆ ಕುಟುಂಬ ಸಮೇತ ಬಂದರು. ಅಂದಿನಿಂದ "ಸಾವಧಾನ" ಪತ್ರಿಕೆಯು ಶ್ರೀಮಠದ



ಮುದ್ರಣಾಲಯದಲ್ಲಿ ಅಚ್ಚುಗೊಂಡು, ಶಾಸ್ತ್ರಿಗಳು ಬದುಕಿರುವವರೆಗೂ ಅವರ ಸಂಪಾದಕತ್ವದಲ್ಲಿಯೇ ಪ್ರಕಟವಾಗುತ್ತಿತ್ತು. ಶಾಸ್ತ್ರಿಗಳು ಇಲ್ಲಿಗೆ ಬರುವ ಹೊತ್ತಿಗೆ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಸಮಗ್ರ ವಚನ ವಾಙ್ಮಯ ಸಂಶೋಧನೆ, ಸಂಪಾದನೆ, ಪ್ರಕಟನೆಯ ಕಾರ್ಯವು ವಿಭಾಗದ ಮುಖ್ಯಸ್ಥರಾಗಿದ್ದ ಡಾ. ಆರ್.ಸಿ. ಹಿರೇಮಠರ ನೇತೃತ್ವದಲ್ಲಿ ಆರಂಭವಾಗಲಿತ್ತು. ಶಾಸ್ತ್ರಿಗಳಂಥ ವಿದ್ವಾಂಸರ ಸೇವೆ ಆಗ ಆ ಕೆಲಸಕ್ಕೆ ತುಂಬ ಅವಶ್ಯವಾಗಿತ್ತು. "ಅವರ ಘನ ವ್ಯಕ್ತಿತ್ವಕ್ಕೆ ತಲೆಬಾಗಿದ್ದೇನೆ. ಶಾಸ್ತ್ರಿಗಳಿಗೆ ಈ ಕನ್ನಡ ವಿಭಾಗದ ಸೇವೆಯಿಂದ ಯಾವ ಲಾಭವಾಯಿತೋ ತಿಳಿಯದು. ಆದರೆ ಅವರಿಂದ ವಿಭಾಗಕ್ಕೆ, ವಚನವಾಙ್ಮಯಕ್ಕೆ ಮಾತ್ರ ಮಹತ್ವದ ಲಾಭ ತಟ್ಟಿತೆಂಬುದು ನಿಜ. ವಚನಗಳಲ್ಲಿ ಬರುವ ಸಂಸ್ಕೃತ ಶ್ಲೋಕಗಳು ಬಹಳಷ್ಟು ಲಿಪಿಕಾರರ ದೋಷದಿಂದಾಗಿ, ಅಜ್ಞಾನದಿಂದಾಗಿ ದೋಷಪೂರಿತವಾಗಿದ್ದವು. ಶಾಸ್ತ್ರಿಗಳ ಸ್ಮರಣಶಕ್ತಿ, ಅವರ ವಿದ್ವತ್ತಿನ ಆಳ ಹಾಗೂ ಹರವು ಆಯಾ ಶ್ಲೋಕಗಳ ಮೂಲ ಆಕರಗಳನ್ನು ಕಂಡುಹಿಡಿಯುವಲ್ಲಿ ಸಾರ್ಥಕತೆ ಹೊಂದಿದವು. ಉಪನಿಷತ್ತು ಹಾಗೂ ಶಿವಾಗಮಗಳ ಶ್ಲೋಕಗಳೆಲ್ಲ ಶಾಸ್ತ್ರಿಗಳ ನಾಲಗೆಯಲ್ಲಿಯೇ ನೆಲೆಸಿವೆಯೇನೋ ಎನ್ನಿಸುತ್ತಿತ್ತು. ನಮಗೆಲ್ಲ ಅವರು ಪಟಪಟನೆ ಮೂಲ ಶ್ಲೋಕಗಳನ್ನು ಹೇಳಿದಾಗ ಅಚ್ಚರಿ" ಎಂಬ ಡಾ. ಹಿರೇಮಠರ ಮಾತುಗಳು ಮನನೀಯವಾಗಿವೆ.

ಶ್ರೀ ಮುರುಘಾಮಠದ ಉಭಯ ಶ್ರೀಗಳು ಇನ್ನುಳಿದ ವೀರಶೈವ ಮಠಗಳ ಶ್ರೀಗಳು ಶಾಸ್ತ್ರಿಗಳನ್ನು ಚೆನ್ನಾಗಿಯೇ ನೋಡಿಕೊಂಡು ಬಂದರು. ಪೂಜ್ಯ ಶ್ರೀ ಮಹಾಂತಪ್ಪಗಳು ಶಾಸ್ತ್ರಿಗಳಿಗೆ ಯಾವ ತೊಂದರೆಯೂ ಆಗದಂತೆ ಗಮನಿಸಿಕೊಳ್ಳುತ್ತಿದ್ದರು. ಶಾಸ್ತ್ರಿಗಳ ಕುಟುಂಬಕ್ಕೆ ಎರಡು ದಶಕಗಳಿಂದಲೂ "ಶ್ರೀ ಮೃತ್ಯುಂಜಯ ನಿಲಯ"ವೇ ವಾಸಸ್ಥಾನ. ಶಾಸ್ತ್ರಿಗಳ ಷಷ್ಠಿಪೂರ್ತಿ ಸಮಾರಂಭದ ಕಾಲಕ್ಕೆ ಪೂಜ್ಯ ಅಪ್ಪಗಳ ಕೃಪಾಶೀರ್ವಾದ ಈ 'ಶ್ರೀ ಮೃತ್ಯುಂಜಯ ನಿಲಯ'. ತಮ್ಮ ಸುದೀರ್ಘ ಜೀವನದಲ್ಲಿ ಅವರು ಸುಖ-ದುಃಖ, ನೋವು-ನಲಿವು ಎಲ್ಲವನ್ನೂ ಕಂಡಿದ್ದರು, ಸಹಿಸಿದ್ದರು. ಯಾವುದಕ್ಕೂ ಬೇಸರಿಸದೆ, ಹಿಗ್ಗದೆ, ಕುಗ್ಗದೆ ಸಮಚಿತ್ತರಾಗಿ ಎಲ್ಲವನ್ನೂ ಶಿವಪ್ರಸಾದವೆಂದು ಸ್ವೀಕರಿಸಿದರು. ಗುರುಲಿಂಗಜಂಗಮಕ್ಕೆ ತನುಮನಧನವನರ್ಪಿಸಿ ಅವುಗಳಿಂದ ಬಂದ ಶುದ್ಧಸಿದ್ಧ ಪ್ರಸಾದವನ್ನು ಆರೋಗಿಸಿ, ಅನುಭವಿಸಿ, ಆನಂದತುಂದಿಲರಾಗಿಯೇ ಇದ್ದರು. ಆನಂದವಾಗಿರುವುದೇ ಬ್ರಹ್ಮಸ್ಥಿತಿಯೆನ್ನುವುದಕ್ಕೆ ಸಾಕ್ಷಿಯಾಗಿ, ಗುರುಲಿಂಗಜಂಗಮದ ಸದಾಕಾಲ ಆರಾಧನೆಯಲ್ಲಿದ್ದು ಅದರ ಅನುಭವದ ಸೊಗಸಿನಲ್ಲಿ ನಿರತರಾದ ಶಾಸ್ತ್ರಿಗಳು ಹೊರ ಜಗತ್ತಿನ ಹಗರಣ ತ್ಯಜಿಸಿ ಅಂತರ್ಮುಖಿಯಾಗಿದ್ದರು. ಅದರ ಫಲ "ಭಾರತೀಯ ದರ್ಶನ ಸಮೀಕ್ಷೆ'. ಅದೊಂದು ಅಮೋಘ ಕೃತಿ. ಅವರ ಘನೀಕೃತ ಪಾಂಡಿತ್ಯಕ್ಕೆ ಅದೊಂದು ದಿವ್ಯ ಸಾಕ್ಷಿ. ಶ್ರೀ ಮುರುಘಾಮಠದಲ್ಲಿ ಪೂಜ್ಯ ಮಹಾಂತಪ್ಪಗಳ ದಿವ್ಯ ಸಾನ್ನಿಧ್ಯದಲ್ಲಿ ಶ್ರೀಯುತರ ಅಮೃತ ಮಹೋತ್ಸವವೂ ನಡೆಯಿತು. ದಂಪತಿಗಳಿಗೆ ಪೂಜ್ಯ ಅಪ್ಪಗಳು ವಸ್ತ್ರ, ಧನ, ಫಲ

ಪುಷ್ಪಗಳನ್ನಿತ್ತುದಲ್ಲದೆ ಶಾಸ್ತ್ರಿಗಳಿಗೆ "ಶಿವಧರ್ಮಭೂಷಣ" ಪ್ರಶಸ್ತಿ, ಸನ್ಮಾನಪತ್ರಗಳನ್ನೂ ಅನುಗ್ರಹಿಸಿದರು.

ಪಂ. ನಾಗಭೂಷಣಶಾಸ್ತ್ರಿಗಳು ಒಬ್ಬ ಪರಿಪೂರ್ಣ ವೀರಶೈವರಾಗಿ ಬದುಕಿದವರು. ವೀರಶೈವ ಧರ್ಮವೆಂದರೇನೇ ಸಮನ್ವಯಧರ್ಮ. ಅಂತೇ ಅದಕ್ಕೆ ರೇಣುಕಾದಿ ಆಚಾರ್ಯರು, ಶರಣರು, ಶಾಸ್ತ್ರಕಾರರು ಸಮ ಸಮುಚ್ಚಯ ಧರ್ಮವೆಂದು ಕರೆದರು. ಇಂದಿನ ವೀರಶೈವ ಸಮಾಜದ ಸ್ಥಿತಿಗತಿಗಳನ್ನು ನೋಡಿದಾಗ ನಾಗಭೂಷಣ ಶಾಸ್ತ್ರಿಗಳು ಅಂಥ ಸಮನ್ವಯಧರ್ಮದ ಕೊನೆಯ ಸಂಸ್ಕೃತ ಪಂಡಿತರಾಗಿಬಿಡುತ್ತಾರೇನೋ ಎಂಬ ಭಯ ನನ್ನನ್ನು ಕಾಡುತ್ತಲಿತ್ತು. ನನ್ನ ಈ ಭಯ ಸುಳ್ಳಾಗಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಿದ್ದೆ. ಈ ಭಯ ಸುಳ್ಳಾಗುವಂತೆ ಮಾಡಲು ವೀರಶೈವ ಮಠಮಾನ್ಯಗಳು ಈ ಮೊದಲಿನಂತೆ ಸಂಸ್ಕೃತ ಪಾಠಶಾಲೆಗಳನ್ನು ಆರಂಭಿಸಬೇಕು. ಅಲ್ಲಿ ಪಂಡಿತರ ಪಡೆಯನ್ನೇ ನಿರ್ಮಿಸಬೇಕು.

ಪರಂಪರಾಗತ ಪಂಡಿತರ ಕೊರತೆಯಿಂದ ತತ್ತರಿಸುತ್ತಿರುವ ವೀರಶೈವ ಧರ್ಮಕ್ಕೆ ನಾಗಭೂಷಣ ಶಾಸ್ತ್ರಿಗಳಂಥ ಪಂಡಿತೋತ್ತಮರು ಎನಿತು ಕಾಲವಿದ್ದರೂ ಬೇಕೆನಿಸುತ್ತಿತ್ತು. ಆದರೆ ವಿಧಿಯ ಮುಂದೆ ನಾವೇನು ಮಾಡಬಲ್ಲೆವು? ಶಾಸ್ತ್ರಿಗಳು ತೊಂಬತ್ತೆರಡು ವರ್ಷಗಳ ಸುದೀರ್ಘ ಜೀವನ ನಡೆಸಿ, ಮೇ 1998 ರಲ್ಲಿ ಲಿಂಗೈಕ್ಯರಾದರು.

ಶಾಸ್ತ್ರಿಗಳು ವೀರಶೈವ ಸಿದ್ಧಾಂತವನ್ನು ಕೇವಲ ಬೋಧಿಸಲಿಲ್ಲ, ಹಾಗೆ ಬದುಕಿದರು. ಜೀವನದಲ್ಲಿ ಸುಖ-ದುಃಖ ಎಲ್ಲವನ್ನೂ ಶಿವಪ್ರಸಾದವೆಂದೇ ಸ್ವೀಕರಿಸಿದರು. ಅವರದು ಶಿವಮಯ ಬದುಕು.

□

ಸೆಜ್ಜೆಯುಪ್ಪರಿಸಿ ಶಿವಲಿಂಗ ಕರಸ್ಥಲಕ್ಕೆ ಬರೆ
ಪ್ರಜ್ವಲಿಸಿ ತೊಳತೊಳಗಿ ಬೆಳಗುತ್ತಿಹ ಕಾಂತಿಯಲ್ಲಿ ಒಜ್ಜರಿಸಿ
ತನು ಮನ ದೃಷ್ಟಿ ನಟ್ಟು ಲಿಂಗದಲ್ಲಿ ಒಜ್ಜರಿಸುವ
ಶಿವಸುಖದೊಳೋಲಾಡುತ್ತ ಸಜ್ಜನ ಸದ್ಭಕ್ತಿ ರತಿಯೊಡನೆ ಕೂಡಾಡಿ
ಲಜ್ಜೆಗೆಟ್ಟು ನಿಮ್ಮ ನೆರೆವೆ ಚನ್ನಮಲ್ಲಿಕಾರ್ಜುನಾ.

**- ಅಕ್ಕಮಹಾದೇವಿ**

# ವಾರ್ತಾವಿಹಾರ

### ಸಮಗ್ರ ವಚನಸಾಹಿತ್ಯ ಜಗತ್ತಿನ ಪ್ರಮುಖ ಭಾಷೆಗಳಿಗೆ ಭಾಷಾಂತರವಾಗಬೇಕು

ದಿನಾಂಕ 4.3.2009 ರಂದು ಮೈಸೂರಿನ ರಾಜೇಂದ್ರ ಭವನದಲ್ಲಿ ಅನಿವಾಸಿ ಭಾರತೀಯರಾದ ಡಾ. ಗುರು ಎಸ್. ಬಳೆ ಅವರ 'Shoonya to Shoonya' ಕೃತಿಯ ಬಿಡುಗಡೆ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಆಶೀರ್ವಚನವನ್ನು ನೀಡಿದ ಪೂಜ್ಯರು ಮೇಲಿನಂತೆ ತಿಳಿಸಿದರು. ಈ ಕೃತಿ ಅಲ್ಲಮನ ವಚನಗಳಿಗೆ ಮಾಡಿದ ಇಂಗ್ಲಿಷ್‌ನ ಭಾಷಾಂತರ ಮತ್ತು ವ್ಯಾಖ್ಯಾನ ಕೃತಿಯಾಗಿದೆ. ಮುಂದುವರಿದು ಮಾತನಾಡುತ್ತಾ ಪೂಜ್ಯರು ಒಂದು ಸಾಹಿತ್ಯ ಕೃತಿ ಮತ್ತೊಂದು ಪ್ರಮುಖ ಭಾಷೆಗೆ ಭಾಷಾಂತರಗೊಂಡಾಗ ವ್ಯಾಪಕವಾದ ಓದುಗ ವಲಯವನ್ನು ಪಡೆದುಕೊಳ್ಳುತ್ತದೆ. ಅದರಿಂದ ಹೆಚ್ಚು ಹೆಚ್ಚು ಚರ್ಚಿತವಾಗುತ್ತದೆ. ಲೇಖಕನ ಭಾವನೆ ಮತ್ತು ಸಿದ್ಧಾಂತಗಳು ವ್ಯಾಪಕವಾಗಿ ಪ್ರಚಾರವಾಗುವುದರಿಂದ ಲೇಖಕನಿಗಷ್ಟೇ ಅಲ್ಲ ಒಂದು ಭಾಷೆಗೆ ಮತ್ತು ಸಾಹಿತ್ಯಕ್ಕೆ ವಿಶೇಷವಾದ ಪ್ರಯೋಜನ ಉಂಟಾಗುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ ನೆಲದ ವಿಶಿಷ್ಟ ರೀತಿಯ ಸಾಹಿತ್ಯವಾದ ವಚನಸಾಹಿತ್ಯ ಹೆಚ್ಚಿನ ರೀತಿಯಲ್ಲಿ ವಿಶ್ವದ ಪ್ರಮುಖ ಭಾಷೆಗಳಿಗೆ ಭಾಷಾಂತರಗೊಳ್ಳಬೇಕಾಗಿದೆ. ವಿದ್ವಾಂಸರು ಈ ನಿಟ್ಟಿನಲ್ಲಿ ಶ್ರೀ ಗುರು ಬಳೆಯವರಂತೆ ಕಾರ್ಯಪ್ರವೃತ್ತರಾಗಬೇಕು ಎಂದು ತಿಳಿಸಿದರು. ಕೃತಿಯನ್ನು ಬಿಡುಗಡೆ ಮಾಡಿದ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಎ. ವಿವೇಕ್ ರೈ ಯವರು ವಚನ ಸಾಹಿತ್ಯದ ಅನುವಾದದ ಅನಿವಾರ್ಯತೆಯನ್ನು ಕುರಿತು ಮಾತನಾಡಿದರು. ಶ್ರೀ ಗೊ.ರು.ಚ. ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಡಾ. ಬಿ.ನಂ. ಚಂದ್ರಯ್ಯನವರು ಕೃತಿಯನ್ನು ಪರಿಚಯಿಸಿದರು. ಪ್ರೊ. ಮಲೆಯೂರು ಗುರುಸ್ವಾಮಿ ಅಲ್ಲಮನನ್ನು ಕುರಿತು ದತ್ತಿ ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ಶಾಸಕ ಶ್ರೀ ತೋಂಟದಾರ್ಯ, ಲೇಖಕ ಶ್ರೀ ಗುರು ಬಳೆ ಹಾಗೂ ಶ್ರೀ ಗೊ.ರು. ಪರಮೇಶ್ವರಪ್ಪ ಉಪಸ್ಥಿತರಿದ್ದರು.

### ವಿಮರ್ಶೆಗಳನ್ನೆಲ್ಲ ಸ್ವೀಕರಿಸುವುದು ವೀರಶೈವ ಧರ್ಮ

ದಿನಾಂಕ 7.3.2009 ರಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಸ್ಥಾಪಿಸಿರುವ ಶಿವರಾತ್ರೀಶ್ವರ ಪ್ರಶಸ್ತಿಯನ್ನು ಸುಪ್ರಸಿದ್ಧ ಲೇಖಕಿ ಡಾ. ವೀಣಾ ಬನ್ನಂಜೆ ಅವರಿಗೆ ಪ್ರದಾನ ಮಾಡಲಾಯಿತು. ಇವರ "ಅಕ್ಕಮಹಾದೇವಿಯ ದ್ವೈತ" ಎಂಬ ಕೃತಿ ಪ್ರಶಸ್ತಿಗೆ ಭಾಜನವಾಯಿತು. ಪ್ರಶಸ್ತಿ ಪ್ರದಾನ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಮಾತನಾಡುತ್ತಿದ್ದ ಪರಮಪೂಜ್ಯರು ಬರುವ

ವಿಮರ್ಶೆಗಳನ್ನೆಲ್ಲ ಬಂದಂತೆಯೇ ಸ್ವೀಕರಿಸುವುದು ವೀರಶೈವ ಧರ್ಮ. ವಿಮರ್ಶೆಗೆ ಒಳಗಾಗದ ಯಾವುದೇ ಧರ್ಮ ಶಾಶ್ವತವಾಗಿ ಉಳಿಯಲಾರದು. ವೀಣಾ ಬನ್ನಂಜೆ ಅವರ ಕೃತಿಯು ಸಹಾ ಅಂಥ ವಿಮರ್ಶೆಗಳನ್ನು ಸ್ವೀಕರಿಸಿ ಗೆದ್ದಿದೆ ಎಂದು ಪ್ರಶಂಸಿಸಿದರು. ಶಿವರಾತ್ರೀಶ್ವರ ಪ್ರಶಸ್ತಿಯನ್ನು ಕಳೆದ 20 ವರ್ಷಗಳಿಂದ ನೀಡಲಾಗುತ್ತಿದೆ. ವೀಣಾ ಬನ್ನಂಜೆ ಅವರು ಈ ಪ್ರಶಸ್ತಿ ಸ್ವೀಕರಿಸಿದ ಎರಡನೇ ಮಹಿಳೆಯಾಗಿದ್ದಾರೆ ಎಂದು ಪೂಜ್ಯರು ತಿಳಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ವಿಮರ್ಶಕರಾದ ಡಾ. ಸಿ.ಎನ್. ರಾಮಚಂದ್ರನ್ ವಹಿಸಿದ್ದರು. ಡಾ. ಪ್ರೀತಿ ಶುಭಚಂದ್ರ ಅವರು ಕೃತಿಯನ್ನು ಕುರಿತು ಮಾತನಾಡಿದರು. ಪ್ರಕಟಣ ವಿಭಾಗ ಉಪ ನಿರ್ದೇಶಕರಾದ ಶ್ರೀ ಮ.ಗು. ಸದಾನಂದಯ್ಯ ಸ್ವಾಗತಿಸಿದರು. ಪ್ರಾಧ್ಯಾಪಕಿ ಡಾ. ಎಸ್. ಮಾಲತಿ ಕಾರ್ಯಕ್ರಮ ನಿರೂಪಿಸಿದರು.

## ಧರ್ಮ ಬದುಕಿನ ಬುನಾದಿ

ದಿನಾಂಕ 10.3.2009 ರಂದು ನಾಗಮಂಗಲ ತಾಲ್ಲೂಕು ಆದಿಚುಂಚನಗಿರಿಯ ಶ್ರೀ ಕಾಲಭೈರವೇಶ್ವರ ಸ್ವಾಮಿ ರಥೋತ್ಸವದ ಸಂದರ್ಭದಲ್ಲಿ ಏರ್ಪಡಿಸಿದ್ದ ಸರ್ವಧರ್ಮ ಸಮ್ಮೇಳನದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಪರಮಪೂಜ್ಯರು ಮಾತನಾಡುತ್ತಿದ್ದರು. ಧರ್ಮ ಬದುಕಿನ ಒಂದು ಅವಿಭಾಜ್ಯವಾದ ಅಂಗ. ಧರ್ಮವೆಂದರೆ, ಅನೇಕರು ಕೇವಲ ಧಾರ್ಮಿಕ ಆಚರಣೆಗಳು ಎಂದು ಭಾವಿಸುತ್ತಾರೆ. ಆದರೆ ಅದು ಅಷ್ಟಕ್ಕೇ ಸೀಮಿತವಲ್ಲ. ಧರ್ಮವೆಂದರೆ, ಬದುಕಿನ ಕ್ರಮ. ಜೀವನದಲ್ಲಿ ಮನುಷ್ಯ ಪ್ರತಿಯೊಂದು ಕಾರ್ಯವನ್ನು ಮಾಡುವಾಗಲು ಋಜುಮಾರ್ಗವನ್ನು ಬಿಡದೇ ಮಾಡಬೇಕು. ಯಾವುದೇ ಕೆಲಸ ಮಾಡುವಾಗಲೂ ಅದು ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಹಿನ್ನೆಲೆಯಲ್ಲಿ ಇರಬೇಕು. ಈ ಮೂಲಕ ಆತ್ಮೋದ್ಧಾರವನ್ನು ಮಾಡಿಕೊಳ್ಳಬೇಕು. ಧರ್ಮವೆಂದರೆ, ವ್ಯಾಪಕವಾದ ಅರ್ಥದಲ್ಲಿ ಇದು. ಇದನ್ನು ಅರಿಯದ ಅನೇಕರು ಧರ್ಮದ ಹೆಸರಿನಲ್ಲಿ ಭಯೋತ್ಪಾದನೆ ಮುಂತಾದ ಸಮಾಜ ವಿರೋಧಿ ಕೆಲಸಗಳಲ್ಲಿ ಮಗ್ನವಾಗಿರುವುದು ವಿಷಾದನೀಯ ಎಂದು ತಿಳಿಸುತ್ತಾ ಆದಿಚುಂಚನಗಿರಿ ಶ್ರೀಮಠದ ಕಾರ್ಯವ್ಯಾಪ್ತಿಯನ್ನು ತುಂಬು ಹೃದಯದಿಂದ ಶ್ಲಾಘಿಸಿದರು.

ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಉದ್ಘಾಟನೆ ಮಾಡಿದ ಈ ಸಮಾರಂಭದಲ್ಲಿ ಶ್ರೀ ಕೈಲಾಸಾಶ್ರಮ ಮಠದ ಶ್ರೀ ಜಯೇಂದ್ರಪುರಿ ಸ್ವಾಮೀಜಿ, ಕ್ರೈಸ್ತ ಧರ್ಮದ ಬಗ್ಗೆ ಸೋಮವಾರಪೇಟೆಯ ಕ್ರೈಸ್ತ ಗುರುಗಳಾದ ರೆ. ಫಾ. ನರೋನ, ಇಸ್ಲಾಂ ಧರ್ಮದ ಬಗ್ಗೆ ವಿಧಾನ ಪರಿಷತ್ ಮಾಜಿ ಸದಸ್ಯ ಡಾ. ಏಜಾಸುದ್ದೀನ್ ಉಪನ್ಯಾಸ ನೀಡಿದರು. ತರಳಬಾಳು ಮಠದ ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಆದಿಚುಂಚನಗಿರಿ ಮಠದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.



## ಸಮಗ್ರ ಧಾರ್ಮಿಕ ವಿಧೇಯಕಕ್ಕೆ ಒತ್ತಾಯ

ಏಕರೂಪ ಧಾರ್ಮಿಕ ನಿಯಮಗಳ ಆಚರಣೆ ಸಂಬಂಧ ಧಾರ್ಮಿಕ ದತ್ತಿ ಇಲಾಖೆಯಲ್ಲಿ ಮೂಡಿರುವ ಜಿಜ್ಞಾಸೆಯನ್ನು ಬಗೆಹರಿಸಿಕೊಂಡು ಸಮಗ್ರ ವಿಧೇಯಕವನ್ನು ಜಾರಿಗೆ ತರಬೇಕೆಂದು ಪೂಜ್ಯ ಶ್ರೀಗಳು ಸರಕಾರವನ್ನು ಒತ್ತಾಯಿಸಿದರು. 10.3.2009 ರಂದು ಕೋಲಾರ ಜಿಲ್ಲಾ ವೀರಶೈವ ಆಗಮಿಕರ ಮತ್ತು ಅರ್ಚಕರ ಕ್ಷೇಮಾಭಿವೃದ್ಧಿ ಸಂಘದಿಂದ ನಡೆದ ಕರ್ನಾಟಕ ರಾಜ್ಯ ವೀರಶೈವ ಅರ್ಚಕರ ಮತ್ತು ಪುರೋಹಿತರ ರಾಜ್ಯ ಮಟ್ಟದ ಮಹಾಸಮ್ಮೇಳನದ ಸಾನ್ನಿಧ್ಯವನ್ನು ವಹಿಸಿ ಪೂಜ್ಯರು ಮಾತನಾಡಿದರು. ಸಮಾರಂಭದಲ್ಲಿ ಡಾ. ಶಾಂತವೀರ ಸ್ವಾಮೀಜಿ, ಶ್ರೀ ನೀಲಕಂಠ ಸಾರಂಗ ದೇಶಿಕೇಂದ್ರ ಸ್ವಾಮೀಜಿ, ಬೆಳ್ಳಾವಿ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮೀಜಿ, ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಚನ್ನಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಹೃದಯದ ಭಾಷೆ ಇರುವುದು ಮಹಿಳೆಯರಲ್ಲಿ ಮಾತ್ರ

ದಿನಾಂಕ 11.3.2009 ರಂದು ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ 'ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಂವೇದನೆ' ರಾಜ್ಯ ಮಟ್ಟದ ವಿಚಾರಸಂಕಿರಣದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಪರಮಪೂಜ್ಯರು ಮಾತನಾಡಿದರು. ಹೃದಯದ ಭಾಷೆ ಇರುವುದು ಮಹಿಳೆಯರಲ್ಲಿ ಮಾತ್ರ. ಮಾತೃವಾತ್ಸಲ್ಯವು ಪ್ರೀತಿ, ಕ್ಷಮೆ, ಔದಾರ್ಯ ಹಾಗೂ ನಿರಪೇಕ್ಷೆಯ ಮನೋಭಾವದ ಗುಣ ನೀಡಿದೆ. ಮಹಿಳೆಯರಲ್ಲಿ ಇರುವ ಕ್ಷಮಾಗುಣವನ್ನೇ ದೌರ್ಬಲ್ಯ ಎಂದುಕೊಂಡು ಪುರುಷ ಸಮಾಜ ವರ್ತಿಸುವುದು ಸರಿಯಲ್ಲ. ಪುರುಷನ ಎಲ್ಲ ಏಳಿಗೆಯ ಹಿಂದೆ ಮಹಿಳೆಯ ಸ್ಫೂರ್ತಿ ಇರುವುದು ಸರ್ವವಿದಿತ. ಆಕೆ ವಿದ್ಯಾವಂತೆಯಲ್ಲದೇ ಇದ್ದರೂ ಕುಟುಂಬ ನಿರ್ವಹಣೆಯಲ್ಲಿ ಅವಳು ತೋರುವ ಜವಾಬ್ದಾರಿಯನ್ನು ಯಾವುದಕ್ಕೂ ಹೋಲಿಸಲು ಬರುವುದಿಲ್ಲ. ನಿಜಕ್ಕೂ ಇಂತಹ ಮಹಿಳೆಯ ಜೀವನ ಒಂದು ಪವಿತ್ರ ತಪಸ್ಸು ಇದ್ದಂತೆ ಎಂದು ಪರಮಪೂಜ್ಯರು ನುಡಿದರು. ಸಮಾರಂಭವನ್ನು ಉದ್ಘಾಟಿಸಿದ ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರು ಮಾತನಾಡಿ ಇಂದು ಮಹಿಳೆಯರಿಗೆ ಔದ್ಯೋಗಿಕ ಅವಕಾಶಗಳು ಹೆಚ್ಚಿವೆ. ರಾಜಕೀಯದಲ್ಲಿಯೂ ಅಷ್ಟೆ. ಆದರೆ, ಕೆಲಸ ಮಾಡುವಲ್ಲಿನ ಸ್ಥಳದ ವಾತಾವರಣಗಳು ಹೊಸದೊಂದು ಆತಂಕ ಸೃಷ್ಟಿಗೂ ಕಾರಣವಾಗಿವೆ. ಸ್ತ್ರೀಯರು ಯಾವುದೇ ದೌರ್ಜನ್ಯಗಳ ವಿರುದ್ಧವೇ ಆಗಲಿ ಪ್ರತಿಭಟಿಸಬೇಕು ಮತ್ತು ತಮ್ಮ ಹಕ್ಕು ರಕ್ಷಿಸಿಕೊಳ್ಳುವ ಕಾನೂನಿನ ಅರಿವು ಹೊಂದುವಂತೆ ಸಲಹೆ ಮಾಡಿದರು. ಸಾಹಿತ್ಯದಲ್ಲಿ ಮಹಿಳೆ ಹಾಗೂ ಪುರುಷರ ಸಂವೇದನೆ ಎಂದು ವಿಭಜಿಸುವುದು ಅಸಂಗತ. ಆದರೆ, ಬರಹಗಳು ಭಿನ್ನವಾಗಿರುತ್ತವೆ ಎಂಬುದು ನಿಜ. ಗಂಡು-ಹೆಣ್ಣು ಸಮಾನ ಎಂಬುದು ನಿಜವಾದರೂ, ಶತಮಾನಗಳ ಕಾಲದಿಂದಲೂ ಆಕೆ ಪುರುಷಪ್ರಧಾನ ಸಮಾಜದ ಅಂಚಿನಲ್ಲಿಯೇ ಬದುಕಬೇಕಾಗಿರುವುದು ವಿಷಾದನೀಯ ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಬಿ.ಎ. ವಿವೇಕ ರೈ ರವರು ವಹಿಸಿದ್ದರು.

## ಬದುಕು ಉತ್ತಮವಾಗಲು ಶರಣ ಸಾಹಿತ್ಯದ ಅನುಪಾಲನೆ ಆಗಬೇಕು

ದಿನಾಂಕ 12.3.2009 ರಂದು ತಿ. ನರಸೀಪುರ ತಾಲ್ಲೂಕು ಹಿರಿಯೂರು ಗ್ರಾಮದಲ್ಲಿ ನಡೆದ ಜಿಲ್ಲಾ ಮಟ್ಟದ ಶರಣ ಸಾಹಿತ್ಯ ಸಮ್ಮೇಳನ ಹಾಗೂ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಏಳನೆಯ ವಾರ್ಷಿಕೋತ್ಸವ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಪರಮಪೂಜ್ಯರು ಮಾತನಾಡುತ್ತಿದ್ದರು. ನಮ್ಮ ಬದುಕು ಉತ್ತಮವಾಗಬೇಕಾದರೆ ಶರಣರ ಸಾಹಿತ್ಯ ಹಾಗೂ ವಚನಗಳನ್ನು ನಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇದನ್ನು ಶರಣರು ವಚನಗಳ ರೂಪದಲ್ಲಿ ನಮಗೆ ನೀಡಿದ್ದಾರೆ. ಧಾರ್ಮಿಕ ಪ್ರಜ್ಞೆ, ಪ್ರೀತಿ, ವಿಶ್ವಾಸ, ಸಹೋದರತ್ವ ಎಲ್ಲಿ ಇರುತ್ತದೋ ಅಲ್ಲಿ ಉತ್ತಮ ಸಮಾಜ ನಿರ್ಮಾಣಗೊಂಡಿರುತ್ತದೆ. ಧರ್ಮವನ್ನು ನಾಶಪಡಿಸುವಂತಹ ಕೆಲಸವನ್ನು ಮನುಷ್ಯ ಮಾಡಬಾರದು. ಶರಣ ಸಾಹಿತ್ಯ ಸಮ್ಮೇಳನಗಳು ನಗರ, ಪಟ್ಟಣ ಪ್ರದೇಶಗಳಿಗೆ ಸೀಮಿತವಾಗದೆ, ಗ್ರಾಮೀಣ ಪ್ರದೇಶಗಳಲ್ಲೂ ನಡೆಯುವಂತೆ ಹೇಳಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಗೊ.ರು.ಚ. ರವರು ಸಮಾರಂಭವನ್ನು ಉದ್ಘಾಟಿಸಿದರು. ಸಮಾರಂಭದಲ್ಲಿ ಶ್ರೀ ವಾಟಾಳು, ಕನಕಪುರ, ದೇವನೂರು, ಮಾಡ್ರಹಳ್ಳಿ ಮಠದ ಶ್ರೀಗಳು ಉಪಸ್ಥಿತರಿದ್ದರು.

## ಸಾಧನೆ ಎಂಬುದೇ ಒಂದು ತಪಸ್ಸು

ಯಾವುದೇ ಕ್ಷೇತ್ರದಲ್ಲಿ ದೊಡ್ಡದನ್ನು ಸಾಧಿಸುವುದು ಅಷ್ಟು ಸುಲಭದ ಕೆಲಸವಲ್ಲ. ಹೊರಗೆ ನಿಂತು ಮಾತನಾಡುವುದು ಸುಲಭ. ಆದರೆ ದೊಡ್ಡ ಕನಸನ್ನು ಕಂಡು ಅದನ್ನು ಸಾಧಿಸುವುದಕ್ಕಾಗಿ ನಡೆಯಲು ಬೇಕಾದ ಹಾದಿ ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಬದುಕಿನ ಅನೇಕ ರೀತಿಯ ಸುಖ ಸಂತೋಷಗಳು, ಸವಲತ್ತುಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಸಾಮಾಜಿಕವಾಗಿ ಸೂಕ್ಷ್ಮರೀತಿಯ ಹಿಂಸೆಗಳನ್ನು ಅನುಭವಿಸಬೇಕಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಕೌಟುಂಬಿಕ ಬದುಕು ಸಹ ದುಸ್ತರವಾಗುತ್ತದೆ. ಇದಾವುದನ್ನೂ ಗಂಭೀರವಾಗಿ ಪರಿಗಣಿಸದೆ ಗುರಿಸಾಧನೆಯತ್ತ ನಡೆಯುವುದು ಒಂದು ದೊಡ್ಡ ತಪಸ್ಸೇ ಆಗಿರುತ್ತದೆ. ಈ ಅರ್ಥದಲ್ಲಿ ಸಾಧಕರೆಲ್ಲ ತಪಸ್ವಿಗಳೇ ಎಂದು ಪೂಜ್ಯರು ತಿಳಿಸಿದರು. ಮೈಸೂರಿನ ಶಿವರಾತ್ರೀಶ್ವರ ನಗರದಲ್ಲಿರುವ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಡಾ. ಶಿವರಾತ್ರಿ ರಾಜೇಂದ್ರ ಸಭಾಂಗಣದಲ್ಲಿ ದಿನಾಂಕ 14.3.2009 ರಂದು ನಡೆದ ಭ್ರಮರ ಟ್ರಸ್ಟ್‌ನ 15ನೇ ವಾರ್ಷಿಕೋತ್ಸವ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಪರಮಪೂಜ್ಯರು ಮಾತನಾಡುತ್ತಿದ್ದರು. ಸಮಾರಂಭದಲ್ಲಿ ಇಸ್ರೋ ಮಾಜಿ ಅಧ್ಯಕ್ಷರೂ, ರಾಜ್ಯಸಭಾ ಸದಸ್ಯರೂ ಆದ ಡಾ. ಕೆ. ಕಸ್ತೂರಿ ರಂಗನ್ ಅವರಿಗೆ **ಭ್ರಮರ ಜೀವಮಾನ ಸಾಧನೆ ಪ್ರಶಸ್ತಿ** ನೀಡಿ ಗೌರವಿಸಲಾಯಿತು. ಸಮಾರಂಭದಲ್ಲಿ 'ಮೈಸೂರು ಮಿತ್ರ' ಪ್ರಧಾನ ಸಂಪಾದಕ ಶ್ರೀ ಕೆ.ಬಿ. ಗಣಪತಿ, ರಾಷ್ಟ್ರೀಯ ಸಂಶೋಧನಾ ಪ್ರಾಧ್ಯಾಪಕ ಪ್ರೊ. ಸಿ.ಎನ್.ಆರ್. ರಾವ್, ಭ್ರಮರ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಶ್ರೀಮತಿ ಮಾಧುರಿ ತಾತಾಚಾರಿ, ಟ್ರಸ್ಟಿ ಪ್ರೊ. ಆರ್. ಶ್ರೀನಿವಾಸನ್ ಹಾಗೂ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನ ಸಂದರ್ಶಕ ಪ್ರಾಧ್ಯಾಪಕ ಪ್ರೊ. ಬಿ.ವಿ. ಶ್ರೀಕಂಠನ್ ಭಾಗವಹಿಸಿದ್ದರು.



## ರಾಜಕಾರಣದಿಂದ ಹದಗೆಡುತ್ತಿರುವ ಗ್ರಾಮೀಣ ಬಾಂಧವ್ಯಗಳು

ದಿನಾಂಕ 17.3.2009 ರಂದು ಗುಂಡ್ಲುಪೇಟೆ ತಾಲೂಕಿನ ಶಿಂಡನಪುರ ಗ್ರಾಮದಲ್ಲಿ ಮಹದೇಶ್ವರಸ್ವಾಮಿ ದೇವಸ್ಥಾನದ ಸಂಪ್ರೋಕ್ಷಣೆ, ಶಿವಲಿಂಗ ಪ್ರತಿಷ್ಠಾಪನೆ ಹಾಗೂ ವಿಮಾನ ಗೋಪುರ, ಕಳಸಾರೋಹಣ ಕಾರ್ಯಕ್ರಮಗಳ ಅಂಗವಾಗಿ ಆಯೋಜಿಸಲಾಗಿದ್ದ ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಪೂಜ್ಯ ಶ್ರೀಗಳು ಪ್ರೀತಿ, ನಂಬಿಕೆ, ವಿಶ್ವಾಸದಿಂದ ಜೀವನ ನಡೆಸುತ್ತಿರುವ ಗ್ರಾಮೀಣ ಜನತೆಯ ಬಾಂಧವ್ಯಗಳು ರಾಜಕಾರಣದಿಂದ ಹದಗೆಡುತ್ತಿವೆ ಎಂದು ತಿಳಿಸಿದರು. ಸಮಾರಂಭದಲ್ಲಿ ಪಡಗೂರು, ಸೋಮಹಳ್ಳಿ, ಹರವೆ ಮಠಗಳ ಶ್ರೀಗಳು ಉಪಸ್ಥಿತರಿದ್ದರು. ಶಾಸಕರಾದ ಎಚ್.ಎಸ್. ಮಹದೇವಪ್ರಸಾದ್, ಶ್ರೀ ಸಿ.ಎಸ್. ನಿರಂಜನ್‌ಕುಮಾರ್ ಮತ್ತಿತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

## ಆಧುನಿಕ ಜೀವನಶೈಲಿಯಿಂದ ದೇಶಿ ಬದುಕು ನಾಶವಾಗುತ್ತಿದೆ

ಇಂದು ನಮ್ಮ ಬದುಕು ನಮ್ಮದಾಗಿ ಉಳಿದಿಲ್ಲ. ಪ್ರಪಂಚದ ಎಲ್ಲ ಕಡೆಯ ಹಲವಾರು ಅಂಶಗಳು ನಮ್ಮನ್ನು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನಿಯಂತ್ರಿಸುತ್ತಿವೆ ಮತ್ತು ನಿರ್ದೇಶಿಸುತ್ತಿವೆ. ಇದರಿಂದ ತಪ್ಪಿಸಿಕೊಂಡು ಬದುಕುತ್ತೇವೆ ಎನ್ನುವುದು ಮತ್ತೊಂದು ರೀತಿಯ ಕಷ್ಟಗಳನ್ನು ತಂದೊಡ್ಡುತ್ತದೆ. ಶತಮಾನಗಳಿಂದಲೂ ಸಮಾಜದ ಒಂದೊಂದು ಗುಂಪು ತನ್ನ ಬದುಕಿನ ವಿಶಿಷ್ಟತೆಯನ್ನು ಕಾಪಾಡಿಕೊಂಡು ಬಂದಿದೆ. ಆದರೆ ಈಗ ಆ ವಿಶಿಷ್ಟತೆ ಆಧುನಿಕ ಬದುಕಿನ ಪ್ರವಾಹದಲ್ಲಿ ನಾಶವಾಗುತ್ತಿದ್ದು ಬದುಕು ಏಕತಾನತೆಗೆ ಗುರಿಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ದೇಶಿ ಬದುಕಿನ ಸೊಗಡನ್ನು ಉಳಿಸಿಕೊಳ್ಳುವ ದೆಸೆಯಲ್ಲಿ ಗಂಭೀರವಾಗಿ ಚಿಂತಿಸಿ ಕಾರ್ಯಪ್ರವೃತ್ತರಾಗಬೇಕಾಗಿದೆ ಎಂದು ಪೂಜ್ಯ ಶ್ರೀಗಳವರು ತಿಳಿಸಿದರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತ ಆಶ್ರಯದಲ್ಲಿ 18.3.2009 ರಂದು ಸುತ್ತೂರಿನಲ್ಲಿ ನಡೆದ ಮೂರು ದಿನಗಳ ದೇಶಿ ಸಮ್ಮೇಳನದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಪೂಜ್ಯರು ಮಾತನಾಡುತ್ತಿದ್ದರು. ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾದ ಶ್ರೀ ಗೊ.ರು.ಚ. ರವರು ಸಮಾರಂಭವನ್ನು ಉದ್ಘಾಟಿಸಿದರು. ಹಂಪಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ವಿ. ಮುರಿಗೆಪ್ಪನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸಾಹಿತಿ ಶ್ರೀ ಕಾಳೇಗೌಡ ನಾಗವಾರರವರು ಉಪಸ್ಥಿತರಿದ್ದರು.

## ಧಾರ್ಮಿಕ ಕ್ಷೇತ್ರಗಳೇ ನಾಡಿನ ನಿಜವಾದ ಸಂಪತ್ತು

ಯಾವುದೇ ನಾಡಿನ ಧಾರ್ಮಿಕ ಕ್ಷೇತ್ರಗಳ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಆ ನೆಲದ ನಿಜವಾದ ಸಂಸ್ಕೃತಿಯನ್ನು ಕಂಡುಕೊಳ್ಳಬಹುದು. ಒಂದು ದೇಶದ ಸಂಪತ್ತು ನಿಂತಿರುವುದು ಕೇವಲ ಬಹಿರಂಗದ ಬದುಕಿನಿಂದಲ್ಲ. ಅಲ್ಲಿನ ಜನಸಮೂಹದ ಅಂತರಂಗದ ಶ್ರೀಮಂತಿಕೆಯಿಂದ. ಯಾವ ವ್ಯಕ್ತಿಯು ಆಂತರಿಕವಾಗಿ ನಿಷ್ಠೆ, ಪ್ರಾಮಾಣಿಕತೆ, ಸಹನೆ, ಸಂಯಮ ಇವುಗಳಿಂದ ನಿಯಂತ್ರಿಸಲ್ಪಟ್ಟಿರುತ್ತಾನೋ ಅಂತಹ ವ್ಯಕ್ತಿ ಆರ್ಥಿಕವಾಗಿ ಬಡವನಾದರೂ ನಿಜವಾದ ಅರ್ಥದಲ್ಲಿ ಶ್ರೀಮಂತನೇ ಆಗಿರುತ್ತಾನೆ. ಇಂತಹ ಬದುಕಿಗೆ ವ್ಯಕ್ತಿಯನ್ನು ಸಿದ್ಧ ಮಾಡುವಂತಹವು ಧಾರ್ಮಿಕ ಕ್ಷೇತ್ರಗಳು. ಕಾಶಿ ಈ ಮಹಾನ್ ದೇಶದ ಒಂದು ಶಕ್ತಿಕೇಂದ್ರ ಇದ್ದಂತೆ. ಧರ್ಮ, ಅನುಭಾವ, ಪಾಂಡಿತ್ಯ , ಶಾಸ್ತ್ರಶುದ್ಧತೆ ಮುಂತಾದ ಅನೇಕ ಅಂಶಗಳನ್ನು ತನ್ನಲ್ಲಿ ಒಳಗೊಂಡಿರುವಂತಹ ಕ್ಷೇತ್ರ ಕಾಶಿ. ಪವಿತ್ರ ಗಂಗೆ ಇಲ್ಲಿನ ಮಣ್ಣನ್ನು ಫಲವತ್ತುಗೊಳಿಸಿದಂತೆ ಆಸ್ತಿಕ ಜನಗಳ ಮನಸ್ಸನ್ನೂ ಶ್ರೀಮಂತಗೊಳಿಸಿದ್ದಾಳೆ ಎಂದು ತಿಳಿಸಿದರು. ಪರಮಪೂಜ್ಯ ಶ್ರೀಗಳು 23.3.2009 ರಂದು ಕಾಶಿಯಲ್ಲಿ ಆದಿಚುಂಚನಗಿರಿ ಶಾಖಾಮಠದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಮಾತನಾಡುತ್ತಿದ್ದರು. ಸಮಾರಂಭದಲ್ಲಿ ಶ್ರೀ ವಿಶ್ವೇಶ್ವರತೀರ್ಥ ಸ್ವಾಮೀಜಿ, ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ, ಸಚಿವರಾದ ಶ್ರೀ ರಾಮಚಂದ್ರಗೌಡ, ಶ್ರೀ ಅರವಿಂದ ಲಿಂಬಾವಳಿ, ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಶ್ರೀ ನರೇಂದ್ರಸ್ವಾಮಿ, ಶ್ರೀ ಅಶೋಕ್ ಖೇಣಿ ಹಾಗೂ ಚಲನಚಿತ್ರ ನಿರ್ದೇಶಕರಾದ ಶ್ರೀ ನಾಗತಿಹಳ್ಳಿ ಚಂದ್ರಶೇಖರ್ ಭಾಗವಹಿಸಿದ್ದರು.

## ಸಿದ್ಧಗಂಗಾ ಶ್ರೀಗಳು ನಿಡುಗಾಲ ಶ್ರೀಮಠದ ಸೇವೆ ಮಾಡಲಿ

ದಿನಾಂಕ 5.4.2009 ರಂದು 102 ನೇ ವರ್ಷಕ್ಕೆ ಕಾಲಿಟ್ಟ ಸಿದ್ಧಗಂಗಾ ಶ್ರೀಗಳವರ ಜನ್ಮದಿನೋತ್ಸವದ ಸಮಾರಂಭದಲ್ಲಿ ಭಾಗವಹಿಸಿ ಪೂಜ್ಯರು ಮಾತನಾಡುತ್ತಿದ್ದರು. ಶ್ರೀ ಸಿದ್ಧಗಂಗಾ ಮಠದಲ್ಲಿ ಎಂಬತ್ತು ವರ್ಷಗಳ ಕಾಲ ಪೀಠಾಧಿಪತಿಗಳಾಗಿ ಮಹತ್ತರ ಸೇವೆ ಸಲ್ಲಿಸುತ್ತಾ 102 ವಸಂತಗಳನ್ನು ಕಂಡಿರುವ ಶ್ರೀಗಳವರ ಸೇವೆ ಅನನ್ಯವಾದುದಾಗಿದೆ. ಪೂಜ್ಯರು ಇನ್ನೂ ಹಲವಾರು ವರ್ಷಗಳ ಕಾಲ ಶ್ರೀಮಠದ ಸೇವೆ ಮಾಡುತ್ತಾ ನಾಡಿನ ಮಠಾಧಿಪತಿಗಳಿಗೆಲ್ಲ ಮಾರ್ಗದರ್ಶಕರಾಗಿರಲಿ ಎಂದು ಆಶಿಸಿದರು.

ಗುರುವಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿದ ಮಾಜಿ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ರವರು ಮಾತನಾಡಿ ಸಾಮಾಜಿಕ ಸೇವೆ ಮಾಡುವುದರ ಜೊತೆಗೆ ಜಾತಿ, ಮತ, ಭೇದವಿಲ್ಲದೆ ಅಕ್ಷರ ದಾಸೋಹ ನಡೆಸುತ್ತಿರುವ ಶ್ರೀ ಸಿದ್ಧಗಂಗಾ ಸ್ವಾಮೀಜಿಗಳ ಸೇವೆ ಅನನ್ಯವಾಗಿದ್ದು ಇಲ್ಲಿ ಕಲಿತ ಪ್ರತಿಯೊಬ್ಬ ವಿದ್ಯಾರ್ಥಿಯೂ ಒಬ್ಬೊಬ್ಬರಿಗೆ ಶಿಕ್ಷಣ ನೀಡಿದರೆ ಅದು ಶ್ರೀಗಳಿಗೆ ನೀಡುವ ಕಾಣಿಕೆಯಾಗುತ್ತದೆ ಎಂದು ತಿಳಿಸಿದರು. ಸಮಾರಂಭದಲ್ಲಿ



ಸಿರಿಗೆರೆಯ ತರಳಬಾಳು ಶ್ರೀಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಯವರು ಮಾತನಾಡಿದರು.

ಸಮಾರಂಭದಲ್ಲಿ ಶಾಸಕರಾದ ಶ್ರೀ ವೀರಣ್ಣ ಚರಂತಿಮಠ, ಸಚಿವರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಮಾಜಿ ಸಚಿವರಾದ ಶ್ರೀ ಎಂ. ವಿ. ರಾಜಶೇಖರನ್, ಶ್ರೀ ಎಸ್. ಮಲ್ಲಿಕಾರ್ಜುನಯ್ಯ, ಶ್ರೀ ಜಿ.ಎಸ್. ಬಸವರಾಜ್, ಶ್ರೀ ವಿ.ಎಸ್. ಉಗ್ರಪ್ಪ, ಡಾ. ವಿ.ಎಸ್. ಮಳೀಮಠ, ಶ್ರೀ ಬಿ. ಎಸ್. ಮುದ್ದಪ್ಪ, ಶ್ರೀ ಪಿ. ಕೋದಂಡರಾಮಯ್ಯ, ಮಾಜಿ ಸಚಿವರಾದ ಶ್ರೀ ವಿ. ಸೋಮಣ್ಣ ಮುಂತಾದ ಅನೇಕ ಗಣ್ಯರು ಉಪಸ್ಥಿತರಿದ್ದರು.

## ಮಠಾಧಿಪತಿಗಳ ಗೋಷ್ಠಿಗೆ ಪೂಜ್ಯ ಶ್ರೀಗಳವರಿಂದ ಚಾಲನೆ

ಚಾಮರಾಜನಗರ ಜಿಲ್ಲೆಯ ಮಲೈ ಮಹದೇಶ್ವರ ಕ್ಷೇತ್ರದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ವೀರಶೈವ ಮಠಾಧಿಪತಿಗಳ ಗೋಷ್ಠಿಯು 8.4.2009 ರಂದು ಪ್ರಾರಂಭವಾಯಿತು. ಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಪರಮಪೂಜ್ಯರು, ಕಾಲದ ಬದಲಾವಣೆಗೆ ತಕ್ಕಂತೆ ಮಠಾಧಿಪತಿಗಳ ಜವಾಬ್ದಾರಿಯ ಸ್ವರೂಪವೂ ಬದಲಾಗಬೇಕಿದೆ. ಧಾರ್ಮಿಕ ವಿಚಾರಗಳ ಜೊತೆಗೆ ಭಕ್ತಸಮೂಹವನ್ನು ಸಾಮಾಜಿಕವಾಗಿಯೂ ಸದೃಢಗೊಳಿಸುವ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಪರಂಪರಾಗತ ನಂಬಿಕೆಗಳ ಜೊತೆಗೆ ವೈಜ್ಞಾನಿಕ ಚಿಂತನೆಯ ಹಿನ್ನಲೆಯಲ್ಲಿಯೂ ಧರ್ಮವನ್ನು ಮರುವ್ಯಾಖ್ಯಾನಕ್ಕೆ ಒಳಪಡಿಸುವುದರ ಮೂಲಕ ಆಧುನಿಕರಲ್ಲಿಯೂ ಧರ್ಮಪ್ರಜ್ಞೆಯನ್ನು ಮೂಡಿಸುವ ದಿಸೆಯಲ್ಲಿ ಮಠಾಧಿಪತಿಗಳು ಸಿದ್ಧಗೊಳ್ಳಬೇಕಿದೆ ಎಂದು ಪೂಜ್ಯರು ತಿಳಿಸಿದರು.

ಸಮಾರಂಭದಲ್ಲಿ ಬೆಂಗಳೂರಿನ ಬೇಲಿಮಠದ ಶ್ರೀ ಶಿವರುದ್ರ ಸ್ವಾಮೀಜಿ, ಶ್ರೀ ಮಲ್ಲಿಕಾರ್ಜುನ ದೇವರು, ಶ್ರೀ ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಕುಂಭಕೋಣಂನ ಶ್ರೀ ನೀಲಕಂಠ ಸಾರಂಗ ದೇಶಿಕೇಂದ್ರ ಮಹಾಸ್ವಾಮೀಜಿ, ಜಮಖಂಡಿಯ ಶ್ರೀ ಅಭಿನವ ಚನ್ನಬಸವ ಸ್ವಾಮೀಜಿ, ವಿರಕ್ತಮಠದ ಶ್ರೀ ಬಸವರಾಜ ಸ್ವಾಮೀಜಿ, ಶ್ರೀ ಶ್ರೀಕಂಠ ಸ್ವಾಮೀಜಿ, ನಂದೀಶ ಶಿವಾಚಾರ್ಯ ಸ್ವಾಮೀಜಿ, ಆನಂದಪುರಂನ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮೀಜಿ, ಶ್ರೀ ಸಿದ್ಧಮಲ್ಲ ಸ್ವಾಮೀಜಿ, ಸಾಹಿತಿ ಶ್ರೀ ಚಂದ್ರಶೇಖರ್, ಪ್ರಾಧ್ಯಾಪಕರಾದ ಜಯಶ್ರೀ ದಂಡೆ ಮತ್ತಿತರರು ಭಾಗವಹಿಸಿ ಅನೇಕ ವಿಷಯಗಳ ಮೇಲೆ ಮಾತನಾಡಿದರು.

## ಮಹಿಳೆಗೆ ಸಮಾನತೆಯನ್ನು ಕೊಟ್ಟ ಮೊದಲಿಗರು ಶಿವಶರಣರು

ದಿನಾಂಕ 9.5.2009 ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಉಚಿತ ಶಾಲೆಯ ಬಾಲಕಿಯರ ವಿದ್ಯಾರ್ಥಿನಿಲಯದ ಕಟ್ಟಡ ಮತ್ತು ಜೆಎಸ್‌ಎಸ್ ವೈದ್ಯಕೀಯ

ಮಹಾವಿದ್ಯಾಲಯದ ರಜತಮಹೋತ್ಸವದ ಅಂಗವಾಗಿ 'ಸಮರ್ಥ ಗ್ರಾಮೀಣ ಆರೋಗ್ಯಾಭಿವೃದ್ಧಿ' ವಿಚಾರಸಂಕಿರಣ ಉದ್ಘಾಟನಾ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಪೂಜ್ಯರು ಮಾತನಾಡುತ್ತಿದ್ದರು. 12ನೆಯ ಶತಮಾನದಲ್ಲಿ ಕರ್ನಾಟಕ ಕಂಡ ಶರಣ ಚಳವಳಿಯು ಮಹಿಳಾ ಸಮಾನತೆಗೆ ಸಮರ್ಥವಾದ ವೇದಿಕೆಯನ್ನು ಪ್ರಾಯಶಃ ಮೊದಲ ಬಾರಿಗೆ ಒದಗಿಸಿತು. ಮಹಿಳೆ ಪುರುಷನಿಗೆ ಸಮಾನವಷ್ಟೇ ಅಲ್ಲ, ಅವಳು ಭಗವಂತನಿಗೆ ಸಮಾನ ಎಂಬ ಉದಾತ್ತ ನಿಲುವನ್ನು ಶಿವಶರಣರು ತಳೆದಿದ್ದರು.

ಅಮೆರಿಕದಂಥ ಮುಂದುವರಿದ ದೇಶ ಕೂಡ ಇದುವರೆಗೂ ಮಹಿಳಾ ಅಧ್ಯಕ್ಷರನ್ನು ಆಯ್ಕೆ ಮಾಡಲು ಸಾಧ್ಯವಾಗಿಲ್ಲ. ಆದರೆ ಭಾರತ ದೇಶ ಮಹಿಳೆಯೊಬ್ಬರನ್ನು ರಾಷ್ಟ್ರಪತಿಯಾಗಿ ಚುನಾಯಿಸಿದೆ. ಇದು ಸಾಮಾನ್ಯವಾದ ಸಾಧನೆಯಲ್ಲ. ಭಾರತದ ಇತಿಹಾಸದಲ್ಲಿ ಮಹಿಳಾ ನಾಯಕತ್ವಕ್ಕೆ ಕೊರತೆ ಇಲ್ಲ.12ನೇ ಶತಮಾನದ ಶರಣ ಚಳವಳಿಯಲ್ಲಿ 35 ಜನ ಶರಣೆಯರು ಪಾಲ್ಗೊಂಡಿದ್ದರು ಎಂದು ನುಡಿದರು. ಜೆಎಸ್ಎಸ್ ಮಹಾವಿದ್ಯಾಪೀಠ ಮತ್ತು ಸುತ್ತೂರು ಮಠದ ಉಚಿತ ಶಾಲೆಯು ಬಡ ಮಕ್ಕಳ ಬದುಕನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಈ ಸಾಲಿನಲ್ಲಿ 463 ವಿದ್ಯಾರ್ಥಿಗಳು ಎಸ್ಎಸ್ಎಲ್ಸಿ ಪರೀಕ್ಷೆ ತೆಗೆದುಕೊಂಡಿದ್ದರು. ಇವರಲ್ಲಿ 429 ವಿದ್ಯಾರ್ಥಿಗಳು ಪಾಸಾಗಿದ್ದು, ಶೇ. 50 ರಷ್ಟು ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ತಿಳಿಸಿದರು.

ಸಮಾರಂಭವನ್ನು ಉದ್ಘಾಟಿಸಿದ ಘನತೆವೆತ್ತ ರಾಷ್ಟ್ರಪತಿಗಳಾದ ಶ್ರೀಮತಿ ಪ್ರತಿಭಾ ದೇವಿಸಿಂಗ್ ಪಾಟೀಲ್‌ರವರು ಮಾತನಾಡಿ ಗ್ರಾಮೀಣ ಅಭಿವೃದ್ಧಿ ಮತ್ತು ಆರೋಗ್ಯ ಸೌಲಭ್ಯಗಳು ನಮ್ಮ ಎಲ್ಲ ಗ್ರಾಮಗಳಿಗೂ ತಲುಪುವಂತೆ ಮಾಡಲು ರಾಷ್ಟ್ರೀಯ ಮಟ್ಟದಲ್ಲಿ ಸೂಕ್ತ ಕ್ರಮ ಹಾಗೂ ಸತತ ಪ್ರಯತ್ನ ಕೈಗೊಳ್ಳಬೇಕಾದುದು ಇಂದಿನ ಆದ್ಯತೆಯಾಗಿದೆ. ಸ್ವಾತಂತ್ರ್ಯಾನಂತರ ಭಾರತವು ಆರೋಗ್ಯ ಕ್ಷೇತ್ರದಲ್ಲಿ ಹಲವಾರು ಸಾಧನೆಗಳನ್ನು ಮಾಡಿದ್ದು, ಅವುಗಳಿಂದ ಆಯುಷ್ಯವೃದ್ಧಿ ಮತ್ತು ಮಾರಕ ಖಾಯಿಲೆಗಳ ನಿರ್ಮೂಲನ ಕಾರ್ಯವು ನಡೆದಿರುವುದು ಸಂತೋಷದ ಸಂಗತಿ. ಪರಿಪೂರ್ಣ ಆರೋಗ್ಯ ರಕ್ಷಣೆ ಎಲ್ಲರ ಹಕ್ಕಾದರೂ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಸೌಲಭ್ಯವಂಚಿತ ಸಮಾಜಕ್ಕೆ ವೈದ್ಯಕೀಯ ಸೌಲಭ್ಯಗಳು ದೊರೆಯುವುದು ಅಷ್ಟು ಸುಲಭವಲ್ಲ. ಈ ಪರಿಸ್ಥಿತಿ ಶೀಘ್ರವೇ ಬದಲಾವಣೆಗೊಳ್ಳಬೇಕು ಎಂದು ಕಳಕಳಿ ವ್ಯಕ್ತಪಡಿಸಿದರು. ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಸಮಾರಂಭದಲ್ಲಿ ಘನತೆವೆತ್ತ ರಾಜ್ಯಪಾಲರಾದ ಶ್ರೀ ರಾಮೇಶ್ವರ ಠಾಕೂರ್, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು, ಜಿಲ್ಲಾ ಉಸ್ತುವಾರಿ ಸಚಿವೆ ಕುಮಾರಿ ಶೋಭಾ ಕರಂದ್ಲಾಜೆ ಮತ್ತು ಶಾಸಕ ಶ್ರೀ ಸಿದ್ಧರಾಮಯ್ಯನವರು ಉಪಸ್ಥಿತರಿದ್ದರು.



## ವಿವಾಹ ಒಂದು ಪವಿತ್ರವಾದ ಪ್ರಕ್ರಿಯೆ

ಸುತ್ತೂರು ಶ್ರೀಮಠದ ವತಿಯಿಂದ ಆಯೋಜಿಸಿದ್ದ ನಾಲ್ಕನೆಯ ತಿಂಗಳ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮೂರು ಜೋಡಿಗಳು ಹೊಸ ಬಾಳಿಗೆ ನಾಂದಿ ಹಾಡಿದರು. ದಿನಾಂಕ 11.3.2009 ರಂದು ಜಗದ್ಗುರು ಶ್ರೀ ಮಂತ್ರಮಹರ್ಷಿಗಳವರ 124ನೆಯ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ನಡೆದ ಈ ಸಾಮೂಹಿಕ ವಿವಾಹ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಚನ ನೀಡುತ್ತಾ ವಿವಾಹವೆನ್ನುವುದು ಪವಿತ್ರವಾದುದು. ವೈವಾಹಿಕ ಬದುಕೆಂದರೆ ಹೆಣ್ಣು ಗಂಡುಗಳ ಬಾಂಧವ್ಯವಷ್ಟೇ ಅಲ್ಲ, ವಿವಾಹಿತನು ತನ್ನನ್ನು ಅವಲಂಬಿಸಿರುವವರನ್ನೆಲ್ಲಾ ಸಾಕುವ ಕೈಂಕರ್ಯದಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕು. ಜೀವನದಲ್ಲಿ ಬರುವ ಸುಖದುಃಖಗಳನ್ನು ಸಮಾನವಾಗಿ ಸ್ವೀಕರಿಸಿ, ಅನ್ಯೋನ್ಯವಾಗಿ ಬದುಕು ನಡೆಸುವುದೇ ಮುಖ್ಯ. ಶ್ರೀಮಂತರಂತೆ ಸಾಲ ಸೋಲ ಮಾಡಿ ವಿವಾಹವಾಗುವ ಬದಲು ಎಲ್ಲಿ ಅನುಕೂಲತೆ ಇರುತ್ತದೆಯೋ ಅಲ್ಲಿ ಸರಳವಾಗಿ ವಿವಾಹವಾಗುವ ಮೂಲಕ ಸುಂದರವಾದ ಬದುಕನ್ನು ಕಟ್ಟಿಕೊಳ್ಳಬೇಕೆಂದು ಪೂಜ್ಯರು ಕರೆ ನೀಡಿದರು. ಸಮಾರಂಭದಲ್ಲಿ ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಅಧ್ಯಕ್ಷರಾದ ಶ್ರೀ ಮಹಾಂತಸ್ವಾಮಿಗಳು, ಕಲ್ಮಠದ ಶ್ರೀ ಚಂದ್ರಶೇಖರ ಸ್ವಾಮಿಗಳವರು, ದುಗ್ಗಹಟ್ಟಿಯ ಶ್ರೀ ಪಿ. ವೀರಭದ್ರಪ್ಪನವರು, ಉಡಿಗಾಲದ ಶ್ರೀ ಕುಮಾರಸ್ವಾಮಿಯವರು ಮತ್ತಿತರರು ಭಾಗವಹಿಸಿದ್ದರು.

## ಕುಲಪತಿಗಳು ಜ್ಞಾನದೇಗುಲದ ಮುಖ್ಯ ಶಿಲ್ಪಿಗಳು

ಬೇರೆ ಯಾವುದೇ ವಸ್ತುಗಳು ಕಲುಷಿತಗೊಂಡರೆ ಅವುಗಳನ್ನು ಶುದ್ಧೀಕರಿಸಬಹುದು. ಆದರೆ ಜ್ಞಾನ ಕಲುಷಿತಗೊಂಡರೆ ಜಗತ್ತು ಅಂಧಕಾರದಲ್ಲಿ ಮುಳುಗುತ್ತದೆ. ಏಕೆಂದರೆ ಎಲ್ಲ ಸಾಧನೆಗಳು ಜ್ಞಾನದ ಬುನಾದಿಯ ಮೇಲೆ ನಿಂತಿರುತ್ತವೆ. ವಿಶ್ವವಿದ್ಯಾನಿಲಯಗಳು ಉನ್ನತ ಜ್ಞಾನದ ಕೇಂದ್ರಗಳು. ಅವು ಎಂದೆಂದೂ ಪರಿಶುದ್ಧವಾಗಿಯೇ ಇರಬೇಕು. ಅವುಗಳ ಕರ್ಣಧಾರತ್ವ ವಹಿಸುವ ಕುಲಪತಿಗಳ ಜವಾಬ್ದಾರಿ ತುಂಬಾ ಮಹತ್ತರವಾಗಿದೆ ಎಂದು ಪರಮಪೂಜ್ಯರು ತಿಳಿಸಿದರು. ದಿನಾಂಕ 20.4.2009 ರಂದು ಜೆಎಸ್ಎಸ್ ಕಾನೂನು ಕಾಲೇಜಿನಲ್ಲಿ ಏರ್ಪಡಿಸಿದ್ದ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು. ಸಮಾರಂಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ವಿ.ಜಿ. ತಳವಾರ್, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಎನ್. ಪ್ರಭುದೇವ್, ಹುಬ್ಬಳ್ಳಿಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜೆ.ಎಸ್. ಪಾಟೀಲ್‌ರವರನ್ನು ಸನ್ಮಾನಿಸಲಾಯಿತು. ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಡಾ. ವಿ. ಶಿವರಾಜ್ ಪಾಟೀಲ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

### ಇತರರ ಬಗ್ಗೆ ಆರೋಪ ಮಾಡುವ ರಾಜಕಾರಣಿಗಳು

ವಿಶ್ವದಲ್ಲೇ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತದ ರಾಜಕಾರಣಿಗಳು ತಮ್ಮ ತಪ್ಪುಗಳನ್ನು ವಿಮರ್ಶಿಸಿಕೊಳ್ಳದೆ ಸದಾ ಬೇರೆಯವರ ಬಗ್ಗೆಯೇ ಆರೋಪ ಮಾಡುತ್ತಿದ್ದಾರೆ. ಇಂಥವರಿಗೆ ಬಸವಣ್ಣನವರ ವಚನಗಳನ್ನು ಪರಿಚಯ ಮಾಡಿಕೊಡಬೇಕು ಎಂದು ಪರಮಪೂಜ್ಯರು ಹೇಳಿದರು.

27.4.2009 ರಂದು ಮೈಸೂರಿನ ಕಲಾಮಂದಿರದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದ ಅವರು, ಮಾಧ್ಯಮಗಳು ರಾಜಕಾರಣಿಗಳು ಹೇಳುವ ಇಂಥ ಮಾತುಗಳನ್ನೇ ಮುಖಪುಟದಲ್ಲಿ ಪ್ರಕಟಿಸುವ ಮೂಲಕ ಅವರುಗಳಿಗೆ ಹೆಚ್ಚಿನ ಪ್ರಚಾರ ನೀಡುತ್ತಿವೆ ಎಂದು ವಿಷಾದಿಸಿದರು. ಜಗತ್ತಿನಲ್ಲಿ ಆಗಿಹೋದ ಎಲ್ಲಾ ಮಹಾತ್ಮರನ್ನೂ ಪೂಜೆಯ ವಸ್ತುವಾಗಿ ಮಾಡಿಬಿಟ್ಟು ಬಹಳ ದೂರ ಇಡುವ ಪ್ರಯತ್ನ ಮಾಡುತ್ತಿದ್ದೇವೆ. ಈ ಮಹಾತ್ಮರು ತಮ್ಮ ಜೀವನಸಂಗ್ರಾಮದಲ್ಲಿ ಅನುಭವಿಸಿದ ಕಷ್ಟ ಪರಂಪರೆಗಳು ನಮ್ಮವೂ ಆಗಿಬಿಡಬಹುದು ಎಂಬುದು ಇದಕ್ಕೆ ಕಾರಣವಿರಬಹುದು ಎಂದು ಪೂಜ್ಯ ಶ್ರೀಗಳು ತಿಳಿಸಿದರು.

ಬಸವಣ್ಣನವರು ಧರ್ಮವನ್ನು ವಿಶಾಲವಾಗಿ ವ್ಯಾಖ್ಯಾನ ಮಾಡಿದರು. ವಿಚಾರಕ್ಕೆ ಮಹತ್ವ ಕೊಟ್ಟಂತೆ ಅದರ ಹಿಂದಿರುವ ಆಚಾರಕ್ಕೂ ಆದ್ಯತೆ ನೀಡಿದರು ಎಂದ ಸ್ವಾಮೀಜಿ ಅವರು, ಪ್ರತಿಯೊಬ್ಬ ಮನುಷ್ಯನೂ ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಮೌಲ್ಯಗಳು ಬಸವಣ್ಣನವರ ವಚನಗಳಲ್ಲಿ ಕಂಡುಬರುತ್ತವೆ ಎಂದು ನುಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀ ಎ.ಎನ್. ವೇಣುಗೋಪಾಲ್‌ರವರು ವಹಿಸಿದರು. ಮುಖ್ಯ ಅತಿಥಿಗಳಾಗಿ ನಾಡಿನ ಖ್ಯಾತ ಕವಿಗಳಾದ ಶ್ರೀ ಚನ್ನವೀರ ಕಣವಿಯವರು ಆಗಮಿಸಿದ್ದರು. ಕೇರಳ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀ ಎಸ್.ಆರ್. ಬನ್ನೂರ್‌ಮಠ್‌ರವರು ಸಮಾರಂಭವನ್ನು ಉದ್ಘಾಟಿಸಿದರು.

□




ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಕುಲಪತಿಗಳಿಗೆ ನಡೆದ ಸನ್ಮಾನ ಸಮಾರಂಭದಲ್ಲಿ ಪ್ರೊ. ಜೆ.ಎಸ್. ಪಾಟೀಲ್, ಪ್ರೊ. ವಿ.ಜಿ. ತಳವಾರ್, ಪೂಜ್ಯ ಶ್ರೀಗಳು, ನ್ಯಾ.ಮೂ. ಶ್ರೀ ಶಿವರಾಜ್ ಪಾಟೀಲ್, ಪ್ರೊ. ಎನ್. ಪ್ರಭುದೇವ್ ಮತ್ತು ವಿಶ್ರಾಂತ ಕುಲಪತಿ ಪ್ರೊ. ಕೆ. ಚಿದಾನಂದಗೌಡರು



ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಮಾಸಿಕ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಪರಮಪೂಜ್ಯರೊಡನೆ ನೂತನ ವಧೂವರರು



ಗುಂಡ್ಲುಪೇಟೆ ತಾಲ್ಲೂಕು ಶಿಂಡನಪುರ ಗ್ರಾಮದಲ್ಲಿ ನಡೆದ ಮಹದೇಶ್ವರ ಸ್ವಾಮಿ ದೇವಸ್ಥಾನದ ಕಳಸಾರೋಹಣ ಹಾಗೂ ಶಿವಲಿಂಗ ಪ್ರತಿಷ್ಠಾನದ ಸಮಾರಂಭದಲ್ಲಿ ಪರಮಪೂಜ್ಯ ಶ್ರೀಗಳು  ಹಾಗೂ ವಿವಿಧ ಮಠಾಧಿಪತಿಗಳು




ಜೆಎಸ್‌ಎಸ್ ಉಚಿತ ಶಾಲೆ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡ ಹಾಗೂ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ರಜತಮಹೋತ್ಸವ - ಸಮರ್ಥ ಗ್ರಾಮೀಣ ಆರೋಗ್ಯಾಭಿವೃದ್ಧಿ ವಿಚಾರ ಸಂಕಿರಣದ ಉದ್ಘಾಟನೆ. ಚಿತ್ರದಲ್ಲಿ ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಪತಿ ಶ್ರೀ ಸುರೇಶ್, ಸಚಿವೆಯರಾದ ಶ್ರೀಮತಿ ಶೋಭಾ ಕರಂದ್ಲಾಜೆ, ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ, ರಾಜ್ಯಪಾಲರಾದ ಶ್ರೀ ರಾಮೇಶ್ವರ ಠಾಕೂರ್, ಘನತೆವೆತ್ತ ರಾಷ್ಟ್ರಪತಿಗಳಾದ ಶ್ರೀಮತಿ ಪ್ರತಿಭಾದೇವಿ ಸಿಂಗ್ ಪಾಟೀಲ್, ಪರಮಪೂಜ್ಯ ಜಗದ್ಗುರುಗಳು, ಶ್ರೀ ಸಿದ್ಧಗಂಗಾ ಶ್ರೀಗಳು, ಶಾಸಕರಾದ ಶ್ರೀ ಸಿದ್ಧರಾಮಯ್ಯ, ಜೆಎಸ್‌ಎಸ್ ಸಂಸ್ಥೆಯ ಉಪ ಕಾರ್ಯದರ್ಶಿ ಶ್ರೀ ಎಸ್.ಪಿ. ಮಂಜುನಾಥ್ ಮತ್ತಿತರ ಗಣ್ಯರು.



ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಸುತ್ತೂರು ಶ್ರೀಕ್ಷೇತ್ರದಲ್ಲಿ ಜರುಗಿದ ಚಾಕಿ ಹುಳು ಸಾಕಾಣಿಕೆ ಮತ್ತು ಆಹಾರ ಸಂಸ್ಕರಣಾ ತರಬೇತಿ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಡಾ. ರಾಜೇಂದ್ರಸಿಂಗ್ ಪರೋಡರವರು ಜ್ಯೋತಿ ಬೆಳಗುತ್ತಿದ್ದಾರೆ. ಚಿತ್ರದಲ್ಲಿ ಡಾ. ಜೆ.ಎಚ್. ಕುಲಕರ್ಣಿ, ಪೂಜ್ಯ ಶ್ರೀಗಳವರು, ಡಾ. ಎಸ್. ಪ್ರಭುಕುಮಾರ್, ಶ್ರೀ ವಿ. ಪ್ರಕಾಶ್, ಪ್ರೊ. ಪಿ.ಜಿ. ಚೆಂಗಪ್ಪ, ಸಂಸ್ಥೆಯ ಗೌ. ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ಮಹದೇವಯ್ಯ ಮತ್ತು ಇತರ ಗಣ್ಯರು



ಆಸ್ಕರ್ ಪ್ರಶಸ್ತಿ ವಿಜೇತ 'ಸ್ಲಂ ಡಾಗ್' ಚಿತ್ರದ ಖ್ಯಾತಿಯ ಶ್ರೀ ಆರ್. ವಿಜಯ ಪ್ರಕಾಶ್ ಮತ್ತು ತಂಡದವರು ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಬೆಳದಿಂಗಳ ಸಂಗೀತ ಕಾರ್ಯಕ್ರಮವನ್ನು ನೀಡುತ್ತಿರುವುದು



ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರಿಗೆ ಸನ್ಮಾನ. ಚಿತ್ರದಲ್ಲಿ ಪ್ರೊ. ಅಂಬಳಿಕೆ ಹಿರಿಯಣ್ಣ, ಪೂಜ್ಯ ಶ್ರೀಗಳು, ಪ್ರಾಂಶುಪಾಲರಾದ ಪ್ರೊ. ಜಿ.ಕೆ. ಚಂದ್ರಶೇಖರಪ್ಪ, ಕುಲಪತಿಗಳಾದ ಪ್ರೊ. ಬಿ.ಎ. ವಿವೇಕ್ ರೈ ರವರನ್ನು ಕಾಣಬಹುದು



ಜೆಎಸ್‌ಎಸ್ ಮಹಾವಿದ್ಯಾಪೀಠವು, ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಹಯೋಗದೊಡನೆ ಆಯೋಜಿಸಿದ್ದ ದೇಶಿ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮವನ್ನು ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾದ ಶ್ರೀ ಗೊ.ರು.ಚನ್ನಬಸಪ್ಪನವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎ.ಮುರಿಗೆಪ್ಪ, ಪ್ರೊ. ಕಾಳೇಗೌಡ ನಾಗವಾರ, ಡಾ. ಹೆಬ್ಬಾಲೆ ಕೆ. ನಾಗೇಶ್ ಮತ್ತು ಶ್ರೀ ಕಂಸಾಳೆ ಮಹಾದೇವಯ್ಯನವರು